೧	ಪ್ರಾತಃ.		ಮಧ್ಯಾ.		ಸಾಯಂ					
೧೫	೫	೫೨	೧೨	೫	೫	೪೪				
೨೯	೫	೨೭	೧೨	೨೭	೫	೨೮				
೩೧	೫	೧೭	೧೨	೩೦	೫	೨೭				
೧	ಪ್ರಾತಃ.		ಮಧ್ಯಾ.		ಸಾಯಂ					
೧೫	೬	೨೭	೧೨	೪೭	೫	೫೭				
೨೯	೬	೫೭	೧೨	೫೭	೫	೫೨				
೩೧	೬	೫೩	೧೨	೫೯	೫	೫೨				
೧	ಪ್ರಾತಃ.		ಪ್ರಾತಃ.		ಸಾಯಂ					
೧೫	೬	೫೭	೧೦	೨೯	೫	೧೫				
೨೯	೬	೫೨	೧೦	೨೯	೪	೫೯				
೩೧	೬	೫೨	೧೦	೨೯	೪	೫೫				
೧	ಮಧ್ಯಾನ್ಹ		ಪ್ರಾತಃ.		ಸಾಯಂ					
೧೫	೧೨	೦	೧೦	೨೯	೪	೩೯				
೨೯	೧೨	೦	೧೦	೨೯	೪	೩೫				
೩೧	೧೨	೦	೧೦	೨೯	೪	೩೫				

೧೮೯೬ನೇ ವರ್ಷದ ಸೂಕ್ಷ್ಮನೂತನ ದೃಕ್ಸಿದ್ಧಾಂತ ಪಂಚಾಂಗವು.

ಈ ೧೮೯೬ನೇ ವರ್ಷದ ಆದಿಯಲ್ಲಿ ಚಿತ್ರಾನಕ್ಷತ್ರದ ಅಯನಾಂಶವು ಸೂರ್ಯಸಿದ್ಧಾಂತ ಪ್ರಕಾರ ಭಾಗ ೨೨ ಕಲೆ ೨೭ ವಿಕಲೆ ೪೭.೪ ಎಂದೂ, ಅಂತದಲ್ಲಿ ಭಾಗ ೨೨ ಕಲೆ ೨೪ ವಿಕಲೆ ೩೩.೬ ಎಂದೂ ತಿಳಿಯಲ್ಪಟ್ಟಿದೆ.

ಮಹಾನಕ್ಷತ್ರವೆಂಬ ಸೂರ್ಯನಕ್ಷತ್ರ ಆರಂಭಿಸುವ ಕಾಲ.

ನಕ್ಷತ್ರದ ಹೆಸರು	ತಿಂಗಳು	ತಾ.	ಹೊತ್ತು	ಘಂಟೆ	ನಕ್ಷತ್ರದ ಹೆಸರು	ತಿಂಗಳು	ತಾ.	ಹೊತ್ತು	ಘಂಟೆ
ಉತ್ತರಾಷಾ.	ಜನವರಿ	೯	ರಾತ್ರಿ	೩೩	ಪುಷ್ಯಾ	ಜುಲಾಯಿ	೧೯	ರಾತ್ರಿ	೩
ಶ್ರವಣಾ	"	೨೨	"	೯೩	ಆಶ್ಲೇಷಾ	ಆಗೊಸ್ತು	೧	"	೩
ಧನಿಷ್ಠಾ	ಫೆಬ್ರುವರಿ	೪	"	೧೩೩	ಮಘಾ	"	೧೫	"	೩
ಶತಭಿಷಾ	"	೧೯	ಪ್ರಾತಃ.	೫	ಹುಬ್ಬಾ	"	೨೯	"	೩
ಪೂರ್ವಾಭಾ.	ಮಾರ್ಚಿ	೩	ಮಧ್ಯಾನ್ಹ	೩	ಉತ್ತರಾ	ಸಪ್ತಂಬರ	೧೧	ಸಾಯಂ.	೪
ಉತ್ತರಾಭಾ.	"	೧೫	ಹಗಲು	೧೦	ಹಸ್ತಾ	"	೨೫	ಪ್ರಾತಃ.	೯
ರೇವತೀ	"	೨೯	ಪ್ರಾತಃ.	೪	ಚಿತ್ರಾ	ಒಕ್ತೋಬರ	೯	ರಾತ್ರಿ	೧೦
ಅಶ್ವಿನೀ	ಎಪ್ರಿಲ್	೧೧	ಸಾಯಂ.	೫	ಸ್ವಾತೀ	"	೨೨	ಪ್ರಾತಃ.	೩
ಭರಣೀ	"	೨೫	ಪ್ರಾತಃ.	೯೩	ವಿಶಾಖಾ	ನವಂಬರ	೪	ಮಧ್ಯಾನ್ಹ	೨
ಕೃತ್ತಿಕಾ	ಮೇ	೯	ರಾತ್ರಿ	೩೩	ಅನುರಾಧಾ	"	೧೩	ಸಾಯಂ.	೩
ರೋಹಿಣೀ	"	೨೩	"	೧	ಜ್ಯೇಷ್ಠಾ	"	೩೦	ರಾತ್ರಿ	೧೦೩
ಮೃಗಶಿರಾ	ಜೂನ್	೫	"	೧೩೩	ಮೂಲಾ	ದಶಂಬರ	೧೪	"	೧
ಆರ್ದ್ರಾ	"	೨೦	"	೧	ಪೂರ್ವಾಷಾ.	"	೨೩	"	೩೩
ಪುನರ್ವಸೂ	ಜುಲಾಯಿ	೪	"	೩೩					

ದೃಕ್ಸಿದ್ಧಸಂಕ್ರಮಣಕಾಲದ ಘಳಿಗೆ ವಿಘಳಿಗೆಗಳು.

(ಸ್ಫುಟ ಸೂರ್ಯೋದಯಾದಿ.)

ಸಂಕ್ರಮಣ	ತಾರೀಕು	ವಾರ	ಘಳಿಗೆ ವಿಘಳಿಗೆ	ರಾಶಿ	ಸಂಕ್ರಮಣ	ತಾರೀಕು	ವಾರ	ಘಳಿಗೆ ವಿಘಳಿಗೆ	ರಾಶಿ
ಜನವರಿ	೧೨	ಆದಿತ್ಯವಾರ	೫೯- ೪	ಮಕರ	ಜುಲಾಯಿ	೧೪	ಮಂಗಳವಾರ	೧೩-೨೬	ಕರ್ಕಾಟ
ಫೆಬ್ರುವರಿ	೧೧	ಮಂಗಳವಾರ	೨೧-೨೭	ಕುಂಭ	ಆಗೊಸ್ತು	೧೪	ಶುಕ್ರವಾರ	೩೪- ೭	ಸಿಂಹ
ಮಾರ್ಚಿ	೧೨	ಗುರುವಾರ	೧೪-೧೯	ಮೀನ	ಸಪ್ತಂಬರ	೧೪	ಚಂದ್ರವಾರ	೩೩-೫೨	ಕನ್ಯಾ
ಎಪ್ರಿಲ್	೧೧	ಶನಿವಾರ	೩೭-೩೫	ಮೇಷ	ಒಕ್ತೋಬರ	೧೫	ಗುರುವಾರ	೧-೨೭	ತುಲಾ
ಮೇ	೧೨	ಮಂಗಳವಾರ	೨೯-೩೩	ವೃಷಭ	ನವಂಬರ	೧೪	ಶನಿವಾರ	೨-೨೦	ವೃಶ್ಚಿಕ
ಜೂನ್	೧೨	ಶುಕ್ರವಾರ	೪೭-೨೪	ಮಿಥುನ	ದಶಂಬರ	೧೩	ಆದಿತ್ಯವಾರ	೩೯-೨೧	ಧನು

ಭೂಸನ್ನಿಕರ್ಷಣ ಭೂವಿಪ್ರಕರ್ಷಣ

ಅಂದರೆ ಭೂಮಿಗೆ ಚಂದ್ರನು ಸಮೀಪ (Perigee) ಮತ್ತು ದೂರ (Apogee) ಇರುವ ಸಮಯ ತಿಳಿಸುವ ಪಟ್ಟಿ.

ತಿಂಗಳು	ತಾರೀಕು	ಹೊತ್ತು	ಘಂಟೆ	ತಿಂಗಳು	ತಾರೀಕು	ಹೊತ್ತು	ಘಂಟೆ
ಜನವರಿ	೪	ಪ್ರಾತಃಕಾಲ	೯	ಜನವರಿ	೨೦	ಪ್ರಾತಃಕಾಲ	೧೦
ಫೆಬ್ರುವರಿ	೧	"	೬	ಫೆಬ್ರುವರಿ	೧೨	ರಾತ್ರಿ	೧
"	೨೯	ಸಾಯಂಕಾಲ	೫	ಮಾರ್ಚಿ	೧೫	ಪ್ರಾತಃಕಾಲ	೬
ಮಾರ್ಚಿ	೨೯	ಪ್ರಾತಃಕಾಲ	೫	ಎಪ್ರಿಲ್	೧೧	"	೯
ಎಪ್ರಿಲ್	೨೩	ಮಧ್ಯಾನ್ಹ	೨	ಮೇ	೯	ಸಾಯಂಕಾಲ	೯
ಮೇ	೨೪	ಸಾಯಂಕಾಲ	೪	ಜೂನ್	೫	ಮಧ್ಯಾನ್ಹ	೨
ಜೂನ್	೨೯	"	೯	ಜುಲಾಯಿ	೩	ಪ್ರಾತಃಕಾಲ	೯
ಜುಲಾಯಿ	೧೫	ರಾತ್ರಿ	೧೨	"	೩೧	ರಾತ್ರಿ	೩
ಆಗೊಸ್ತು	೧೨	"	೧೨	ಆಗೊಸ್ತು	೨೩	ಸಾಯಂಕಾಲ	೮
ಸಪ್ತಂಬರ	೯	"	೧	ಸಪ್ತಂಬರ	೨೪	ಪ್ರಾತಃಕಾಲ	೮
ಒಕ್ತೋಬರ	೩	ಪ್ರಾತಃಕಾಲ	೧೦	ಒಕ್ತೋಬರ	೨೧	"	೧೦
ನವಂಬರ	೪	ರಾತ್ರಿ	೧೦	ನವಂಬರ	೧೩	ಮಧ್ಯಾನ್ಹ	೧
ದಶಂಬರ	೩	ಪ್ರಾತಃಕಾಲ	೩	ದಶಂಬರ	೧೫	ಪ್ರಾತಃಕಾಲ	೫

ಗ್ರಹ	ಯಾವ ಸಮಯದಿಂದ		ಯಾವ ಸಮಯದ ವರೆಗೆ					ಯಾವ ರಾಶಿಯಲ್ಲಿ
	ತಿಂಗಳು	ತಾ.	ತಿಂಗಳು	ತಾ.	ಹೊತ್ತು	ಘ.	ನಿ.	
Mars ಕುಜನಿ	ಜನವರಿ	೧	ಜನವರಿ	೧೨	ಮಧ್ಯಾನ್ಹ	೧೨	೪೩	ವೃಶ್ಚಿಕದಲ್ಲಿ ಕುಜ
	"	೧೨	ಫೆಬ್ರುವರಿ	೩೨	ಪ್ರಾತಃಕಾಲ	೬	೫೨	ಧನುಸ್ಸಿನಲ್ಲಿ
	ಫೆಬ್ರುವರಿ	೩೨	ಏಪ್ರಿಲ್	೨	"	೧	೩	ಮಕರ
	ಏಪ್ರಿಲ್	೨	ಮೇ	೧೧	ಮಧ್ಯಾನ್ಹ	೧	೩೦	ಕುಂಭ
	ಮೇ	೧೧	ಜೂನು	೨೧	ಪ್ರಾತಃಕಾಲ	೧	೩೨	ಮೀನ
	ಜೂನು	೨೧	ಅಗೊಸ್ತು	೫	ಸಾಯಂಕಾಲ	೬	೪೯	ಮೇಷ
	ಅಗೊಸ್ತು	೫	ಸಪ್ತಂಬರ	೨೯	ಪ್ರಾತಃಕಾಲ	೫	೫೬	ವೃಷಭ
	ಸಪ್ತಂಬರ	೨೯	ದಶಂಬರ	೫	"	೧	೧೫	ಮಿಥುನ
	ದಶಂಬರ	೫	"	೩೧	ರಾತ್ರಿ	೧೨	೦	ವೃಷಭದಲ್ಲಿ ವಕ್ರ
Mercury ಬುಧನಿ	ಜನವರಿ	೧	ಜನವರಿ	೪	ಮಧ್ಯಾನ್ಹ	೧೨	೪೯	ಧನುಸ್ಸಿನಲ್ಲಿ ಬುಧ
	"	೪	"	೨೪	ಪ್ರಾತಃಕಾಲ	೯	೪೩	ಮಕರ
	"	೨೪	ಫೆಬ್ರುವರಿ	೯	ಮಧ್ಯಾನ್ಹ	೧	೪೫	ಕುಂಭ
	ಫೆಬ್ರುವರಿ	೯	ಮಾರ್ಚಿ	೯	"	೧೨	೪೨	ಮಕರದಲ್ಲಿ ವಕ್ರ
	ಮಾರ್ಚಿ	೯	"	೩೦	ಪ್ರಾತಃಕಾಲ	೯	೩೧	ಕುಂಭ
	"	೩೦	ಏಪ್ರಿಲ್	೧೫	"	೬	೧೩	ಮೀನ
	ಏಪ್ರಿಲ್	೧೫	"	೨೯	ಸಾಯಂಕಾಲ	೪	೧	ಮೇಷ
	"	೨೯	ಮೇ	೨೧	ರಾತ್ರಿ	೧೧	೪೭	ವೃಷಭ
	ಮೇ	೨೧	ಜೂನು	೬	ಸಾಯಂಕಾಲ	೭	೩೭	ಮಿಥುನ
	ಜೂನು	೬	ಜುಲಾಯಿ	೫	ಪ್ರಾತಃಕಾಲ	೪	೫೯	ವೃಷಭದಲ್ಲಿ ವಕ್ರ
	ಜುಲಾಯಿ	೫	"	೨೩	ರಾತ್ರಿ	೧೦	೫೨	ಮಿಥುನ
	"	೨೩	ಅಗೊಸ್ತು	೬	ಮಧ್ಯಾನ್ಹ	೧೨	೪೦	ಕರ್ಕಾಟಕ
	ಅಗೊಸ್ತು	೬	"	೨೪	ಸಾಯಂಕಾಲ	೬	೮	ಸಿಂಹ
	"	೨೪	ಸಪ್ತಂಬರ	೧೯	ಪ್ರಾತಃಕಾಲ	೪	೫೩	ಕನ್ಯಾ
	ಸಪ್ತಂಬರ	೧೯	ಒಕ್ತೋಬರ	೩	"	೫	೪೨	ತುಲಾ
	ಒಕ್ತೋಬರ	೩	"	೨೧	ಮಧ್ಯಾನ್ಹ	೨	೩	ಕನ್ಯೆಯಲ್ಲಿ ವಕ್ರ
	"	೨೧	ನವಂಬರ	೧೯	"	೨	೦	ತುಲಾದಲ್ಲಿ ವಕ್ರ
	ನವಂಬರ	೧೯	ದಶಂಬರ	೮	"	೨	೧	ವೃಶ್ಚಿಕ
	ದಶಂಬರ	೮	"	೨೭	ಸಾಯಂಕಾಲ	೬	೧೧	ಧನು
	"	೨೭	"	೩೧	ರಾತ್ರಿ	೧೨	೦	ಮಕರದಲ್ಲಿ
Jupiter ಗುರು.	ಜನವರಿ	೧	ಆಗೊಸ್ತು	೩೨	ಪ್ರಾತಃಕಾಲ	೯	೩೪	ಕರ್ಕಾಟಕದಲ್ಲಿ
	ಅಗೊಸ್ತು	೩೨	ದಶಂಬರ	೩೧	ರಾತ್ರಿ	೧೨	೦	ಸಿಂಹದಲ್ಲಿ
Venus ಭಾರ್ಗವಿ	ಜನವರಿ	೧	ಜನವರಿ	೨೩	ಮಧ್ಯಾನ್ಹ	೧	೫	ವೃಶ್ಚಿಕದಲ್ಲಿ
	"	೨೩	ಫೆಬ್ರುವರಿ	೧೭	ಪ್ರಾತಃಕಾಲ	೧೦	೨	ಧನು
	ಫೆಬ್ರುವರಿ	೧೭	ಮಾರ್ಚಿ	೧೩	"	೧೨	೫೮	ಮಕರ
	ಮಾರ್ಚಿ	೧೩	ಏಪ್ರಿಲ್	೭	ಮಧ್ಯಾನ್ಹ	೧೨	೨೫	ಕುಂಭ
	ಏಪ್ರಿಲ್	೭	ಮೇ	೧	ಪ್ರಾತಃಕಾಲ	೧೨	೧೭	ಮೀನ
	ಮೇ	೧	"	೨೫	ಮಧ್ಯಾನ್ಹ	೧೨	೭	ಮೇಷ
	"	೨೫	ಜೂನ್	೧೮	ರಾತ್ರಿ	೧೧	೫೯	ವೃಷಭ
	ಜೂನ್	೧೮	ಜುಲಾಯಿ	೧೩	ಪ್ರಾತಃಕಾಲ	೯	೩೩	ಮಿಥುನ
	ಜುಲಾಯಿ	೧೩	ಅಗೊಸ್ತು	೭	ಸಾಯಂಕಾಲ	೫	೪೪	ಕರ್ಕಾಟಕ
	ಅಗೊಸ್ತು	೭	"	೩೧	ಪ್ರಾತಃಕಾಲ	೧೨	೨೪	ಸಿಂಹ
	"	೩೧	ಸಪ್ತಂಬರ	೨೪	"	೨	೨೩	ಕನ್ಯಾ
	ಸಪ್ತಂಬರ	೨೪	ಒಕ್ತೋಬರ	೧೮	ಮಧ್ಯಾನ್ಹ	೨	೯	ತುಲಾ
	ಒಕ್ತೋಬರ	೧೮	ನವಂಬರ	೧೨	ಪ್ರಾತಃಕಾಲ	೧೨	೫೪	ವೃಶ್ಚಿಕ
	ನವಂಬರ	೧೨	ದಶಂಬರ	೭	ಮಧ್ಯಾನ್ಹ	೧	೪೯	ಧನು
	ದಶಂಬರ	೭	"	೩೧	"	೧	೨೦	ಮಕರ
	"	೩೧	"	೩೧	ರಾತ್ರಿ	೧೨	೦	ಕುಂಭ
Saturn ಶನಿನಿ	ಜನವರಿ	೧	ನವಂಬರ	೧೭	ಸಾಯಂಕಾಲ	೬	೦	ತುಲಾ
	ನವಂಬರ	೧೭	ದಶಂಬರ	೩೧	ರಾತ್ರಿ	೧೨	೦	ವೃಶ್ಚಿಕ
Moon's ascending node ರಾಹುನಿ	ಜನವರಿ	೧	ಸಪ್ತಂಬರ	೨೭	ರಾತ್ರಿ	೧೧	೨೧	ಕುಂಭ
	ಸಪ್ತಂಬರ	೨೭	ದಶಂಬರ	೩೧	"	೧೨	೦	ಮಕರ

೧೪೯೬ನೇ ವರ್ಷದಲ್ಲಿ.

ಸೂರ್ಯಗ್ರಹಣಗಳೆರಡು ಚಂದ್ರಗ್ರಹಣಗಳೆರಡು ಹೀಗೆ ನಾಲ್ಕು; ಅವುಗಳಲ್ಲಿ ಫೆಬ್ರುವರಿ ೨೯ನೇ ರಾತ್ರಿ ಸಂಭವಿಸುವ ಚಂದ್ರಪಾರ್ಶ್ವಗ್ರಹಣ ಮಾತ್ರ ನಮಗೆ ಗೋಚರ. ಉಳಿದವುಗಳು ಮಂಗಳೂರಲ್ಲಿ ಅದೃಶ್ಯ.

೧. ಫೆಬ್ರುವರಿ ೧೩ನೇ ಮಾಘ ಬಹುಳ ೩೦ ರಾತ್ರಿಯಲ್ಲಿ ಸೂರ್ಯಗೆ ಕಂಕಣಗ್ರಹಣ; ಇದು ದಕ್ಷಿಣ ಅಮೆರಿಕ ಮತ್ತು ಅಫ್ರಿಕ ಖಂಡದ ದಕ್ಷಿಣದಲ್ಲಿ ಪಾರ್ಶ್ವಗ್ರಹಣವಾಗುವದು.

೨. ಫೆಬ್ರುವರಿ ೨೮ನೇ ಫಾಲ್ಗುಣ ಪೂರ್ಣಿಮಾ ರಾತ್ರಿ ಚಂದ್ರಗೆ ಪಾರ್ಶ್ವಗ್ರಹಣ:

ಸ್ಪರ್ಶ	ಮಂಗಳೂರು ಸಮಯ	೧೧	೧೬	ಪುದ್ದಾಸ ಸಮಯ	೧೧	೩೭
ಮಧ್ಯ	" "	೧೨	೪೫	" "	೧	೬
ಮೋಕ್ಷ	" "	೨	೧೪II	" "	೨	೩೬

ಗ್ರಾಸ, $\frac{೮೩}{೧೦೦}$ ಅಥವಾ (ಸುಮಾರು) $\frac{೯}{೧೦}$

ಈಶಾನ್ಯ ಸ್ಪರ್ಶ, ವಾಯವ್ಯ ಮೋಕ್ಷ.

೩. ಆಗೊಸ್ತು ೯ನೇ ಮಧ್ಯಾನ್ಹ ಸೂರ್ಯಗೆ ಪೂರ್ಣಗ್ರಹಣ. ಇದು ಮಧ್ಯಾಸ್ಯದಲ್ಲಿ ದೃಶ್ಯ; ಮಂಗಳೂರಿನಲ್ಲಿ ಕಾಣದು.

೪. ಆಗೊಸ್ತು ೨೩ ಚಂದ್ರಗೆ ಪಾರ್ಶ್ವಗ್ರಹಣ ಅಮೆರಿಕದಲ್ಲಿ ದೃಶ್ಯ; ಯುರೋಪದಲ್ಲಿ ದೃಶ್ಯ.

ಗುರು ಶುಕ್ರರ ಉದಯಾಸ್ತಂಗಳು.

ಶುಕ್ರಾಸ್ತೋದಯ ಜೂನ್ ೫ನೇ ತಾರೀಕಿಗೆ ಶುಕ್ರನ ಪ್ರಾಗಸ್ತಾರಂಭ; ಉಚ್ಚ ಶುಕ್ರ ಗಾಢಾಸ್ತ ಜುಲಾಯಿ ೯ ಸಾಯಂಕಾಲ ಘಂಟೆ ೬ಕ್ಕೆ; ಶುಕ್ರನ ಉದಯವು ಪಶ್ಚಿಮ ದಿಕ್ಕಿಗೆ ಅಗೊಸ್ತು ೧೨ನೆಗೆ; ಹೀಗೆ ೩೪ ದಿನ ಶುಕ್ರನು ಬರೆಗಣ್ಣಿಗೆ ತೋರಲಿಕ್ಕಿಲ್ಲ.

ಗುರು ಅಸ್ತೋದಯ ಜುಲಾಯಿ ೨೯ನೆ ವಹ್ನಿಮುಕ್ಕೆ ಗುರು ಅಸ್ತನಾಗಿ, ಅಗೊಸ್ತು ಮಧ್ಯಾನ್ಹ ೨ ಘಂಟೆಗೆ ಗಾಢಾಸ್ತ ಹೊಂದಿ, ಅಗೊಸ್ತು ೨೯ನೇ ಪ್ರಾತಃಕಾಲಕ್ಕೆ ಪೂರ್ವದಲ್ಲಿ ಉದಯ; ಹೀಗೆ ೬೧ ದಿವಸ ಗುರು ಬರೆಗಣ್ಣಿಗೆ ಕಾಣ ಕೂಡದು.

೧೪೯೬ನೇ ಖಗೋಲದ ವಿಚಿತ್ರಗಳು.

ತಾರೀಕು			ಘಂಟೆ	ನಿ.	
ಜನವರಿ	೧	ರಾತ್ರಿ	೧೧	೦	ಸೂರ್ಯ ಭೂಮಿ ಸನ್ನಿಕರ್ಷ
"	೨	"	೧೦	೦	ಗುರು ಚಂದ್ರ ಸಮಾಗಮ, ಗುರು ಭಾಗ ೨ ದಕ್ಷಿಣ
"	೧೦	ಪ್ರಾತಃಕಾಲ	೫	೦	ಶನಿ " " ಶನಿ " ೭II ಉತ್ತರ
"	೧೧	ಸಾಯಂಕಾಲ	೪	೦	ಶುಕ್ರ " " ಶುಕ್ರ " ೭II "
"	೧೨	"	೪	೦	ಕುಜ " " ಕುಜ " ೪II "
"	೧೬	ಮಧ್ಯಾನ್ಹ	೧	೦	ಬುಧ " " ಬುಧ " ೦II "
"	೨೦	ಸಾಯಂಕಾಲ	೫	೦	ಸಾಯನಸೂರ್ಯ ಕುಂಭದಲ್ಲಿ ಪ್ರವೇಶ
"	೨೪	ಮಧ್ಯಾನ್ಹ	೧೨	೦	ಬುಧ ಸೂರ್ಯ ಪರಮಾಂತರ ಬುಧ ಭಾ. ೧೪II ಪೂರ್ವ
"	೨೪	ಸಾಯಂಕಾಲ	೬	೦	ಗುರು " ಸಮಸಪ್ತಸ್ಥಿತಿ
"	೩೦	ರಾತ್ರಿ	೨	೦	" ಚಂದ್ರ ಸಮಾಗಮ ಗುರು " ೨ ದಕ್ಷಿಣ
"	೩೧	"	೨	೦	ಬುಧಸ್ತಂಭ
ಫೆಬ್ರುವರಿ	೬	ಮಧ್ಯಾನ್ಹ	೧	೦	ಶನಿ ಚಂದ್ರ ಸಮಾಗಮ ಶನಿ ಭಾಗ ೬III ಉತ್ತರ
"	೯	ರಾತ್ರಿ	೧೧	೦	ಬುಧ ನೀಚಗಾಢಾಸ್ತ.
"	೧೦	ಪ್ರಾತಃಕಾಲ	೧	೦	ಶುಕ್ರ ಕುಜ ಸಮಾಗಮ ಶುಕ್ರ ಭಾಗ ೧III ಉತ್ತರ
"	೧೦	ಮಧ್ಯಾನ್ಹ	೧	೦	ಕುಜ ಚಂದ್ರ " ಕುಜ " ೩II "
"	೧೦	"	೧	೦	ಶುಕ್ರ " " ಶುಕ್ರ " ೫ "
"	೧೨	ರಾತ್ರಿ	೧೧	೦	ಬುಧ " " ಬುಧ " ೫III "
"	೧೯	ಪ್ರಾತಃಕಾಲ	೯	೦	ಸಾಯನ ಸೂರ್ಯ ಮೀನ ಪ್ರವೇಶ
"	೨೧	ಮಧ್ಯಾನ್ಹ	೧೨	೦	ಬುಧ ಸ್ತಂಭ
"	೨೬	ಪ್ರಾತಃಕಾಲ	೯	೦	ಗುರು ಚಂದ್ರ ಸಮಾಗಮ ಗುರು ೩I ಭಾ. ದಕ್ಷಿಣ
"	೨೬	"	೨	೦	ಶನಿ ಸ್ತಂಭ.

ಮಾರ್ಚಿ	೪	ಸಾಯಂಕಾಲ	೯	೦	ಶನಿ ಚಂದ್ರ ಸಮಾಗಮ ಶನಿ	ಭಾಗ	೭III	ಉತ್ತರ
"	೫	ರಾತ್ರಿ	೧೦	೦	ಬುಧ ಸೂರ್ಯ ಪರಮಾಂತರ ಬು.	ಭಾ.	೨೭I	ಪಶ್ಚಿಮ
"	೧೦	ಮಧ್ಯಾನ್ಹ	೧೩	೦	ಕುಜ ಚಂದ್ರ ಸಮಾಗಮ ಕುಜ	ಭಾ.	೧II	ಉತ್ತರ
"	೧೧	ಸಾಯಂಕಾಲ	೭	೦	ಶುಕ್ರ " " ಶುಕ್ರ	ಭಾ.	II	"
"	೧೨	ಪ್ರಾತಃಕಾಲ	೬	೦	ಬುಧ " " ಬುಧ	ಭಾ.	III	ದಕ್ಷಿಣ
"	೨೦	"	೯	೦	ಸಾಯನ ಸೂರ್ಯ ಮೇಷ ಪ್ರವೇಶ			
"	೨೪	ಸಾಯಂಕಾಲ	೪	೦	ಗುರು ಚಂದ್ರ ಸಮಾಗಮ. ಗು.	ಭಾ.	೩I	"
"	೨೫	ಪ್ರಾತಃಕಾಲ	೪	೦	ಗುರು ಸ್ತಂಭ			
ಏಪ್ರಿಲ್	೧	"	೪	೦	ಶನಿ ಚಂದ್ರ ಸಮಾಗಮ ಶನಿ	ಭಾ.	೭III	ಉತ್ತರ
"	೯	ಮಧ್ಯಾನ್ಹ	೩	೦	ಕುಜ ಚಂದ್ರ " ಕುಜ	ಭಾ.	೧	ದಕ್ಷಿಣ
"	೧೧	ಪ್ರಾತಃಕಾಲ	೯	೦	ಶುಕ್ರ " " ಶುಕ್ರ	ಭಾ.	೪I	"
"	೧೩	ರಾತ್ರಿ	೧	೦	ಬುಧ " " ಬುಧ	ಭಾ.	೪II	"
"	೧೪	ಹಗಲು	೧೧	೦	ಬುಧ ಉಚ್ಚ ಗಾಢಾಸ್ತ			
"	೧೯	ಸಾಯಂಕಾಲ	೭	೦	ಸಾಯನ ಸೂರ್ಯ ವೃಷಭ ಪ್ರವೇಶ			
"	೨೧	ಪ್ರಾತಃಕಾಲ	೧	೦	ಗುರು ಚಂದ್ರ ಸಮಾಗಮ ಗುರು	ಭಾ.	೨	ದಕ್ಷಿಣ
"	೨೪	ಮಧ್ಯಾನ್ಹ	೧೩	೦	ಶನಿ ಚಂದ್ರ " ಶನಿ	ಭಾ.	೭III	ಉತ್ತರ
ಮೇ	೬	ಪ್ರಾತಃಕಾಲ	೩	೦	ರವಿ ಶನಿ ಪರಸ್ಪರ (ಅಂದರೆ ೬ ರಾಶ್ಯಂತರ)			
"	೭	ರಾತ್ರಿ	೯	೦	ಕುಜ ಚಂದ್ರ ಸಮಾಗಮ ಕುಜ	ಭಾ.	೩II	ದಕ್ಷಿಣ
"	೧೧	"	೯	೦	ಶುಕ್ರ " " ಶುಕ್ರ	ಭಾ.	೭I	"
"	೧೪	"	೧೧	೦	ಬುಧ " " ಬುಧ	ಭಾ.	೨II	"
"	೧೬	"	೧೦	೦	ಬುಧ ಸೂರ್ಯ ಪರಮಾಂತರ ಬುಧ	ಭಾ.	೨೨	ಪೂರ್ವ
"	೧೯	ಮಧ್ಯಾನ್ಹ	೧೩	೦	ಗುರು ಚಂದ್ರ ಸಮಾಗಮ ಗುರು	ಭಾ.	೧II	ದಕ್ಷಿಣ
"	೨೦	ಸಾಯಂಕಾಲ	೭	೦	ಸಾಯನ ಸೂರ್ಯ ಮಿಥುನ ಪ್ರವೇಶ			
"	೨೪	"	೭	೦	ಶನಿ ಚಂದ್ರ ಸಮಾಗಮ ಶನಿ	ಭಾ.	೭III	ಉತ್ತರ
"	೨೯	ಮಧ್ಯಾನ್ಹ	೩	೦	ಬುಧ ಸ್ತಂಭ			
ಜೂನ್	೬	ಪ್ರಾತಃಕಾಲ	೩	೦	ಚಂದ್ರ ಕುಜ ಸ. ಕುಜ	ಭಾ.	೪III	ದಕ್ಷಿಣ
"	೧೦	ಸಾಯಂಕಾಲ	೭	೦	ಬುಧ ನೀಚ ಗಾಢಾಸ್ತ			
"	೧೦	ರಾತ್ರಿ	೧೧	೦	ಶುಕ್ರ ಚಂದ್ರ ಸಮಾಗಮ ಶುಕ್ರ	ಭಾ.	೪I	"
"	೧೧	ಮಧ್ಯಾನ್ಹ	೧	೦	ಬುಧ ಚಂದ್ರ " ಬುಧ	ಭಾ.	೯	"
"	೧೪	ಪ್ರಾತಃಕಾಲ	೩	೦	ಗುರು ಚಂದ್ರ " ಗುರು	ಭಾ.	೧	"
"	೨೧	"	೪	೦	ಸಾಯನ ಸೂರ್ಯ ಕರ್ಕಾಟಕ ಪ್ರವೇಶ			
"	೨೩	"	೧	೦	ಶನಿ ಚಂದ್ರ ಸಮಾಗಮ ಶನಿ	ಭಾ.	೭III	ಉತ್ತರ
"	೨೩	ಹಗಲು	೩	೦	ಬುಧ ಸ್ತಂಭ			
ಜುಲಾಯಿ	೪	ಪ್ರಾತಃ	೩	೦	ಸೂರ್ಯ ವಿಪ್ರಕರ್ಷ			
"	೪	ಸಾಯಂಕಾಲ	೫	೦	ಬುಧ ಸೂರ್ಯ ಪರಮಾಂತರ ಬುಧ	ಭಾ.	೨೧I	ಪಶ್ಚಿಮ
"	೫	ಪ್ರಾತಃಕಾಲ	೫	೦	ಕುಜ ಚಂದ್ರ ಸಮಾಗಮ ಕುಜ	ಭಾ.	೭	ದಕ್ಷಿಣ
"	೭	"	೧೦	೦	ಬುಧ ಚಂದ್ರ " ಬುಧ	ಭಾ.	೭I	"
"	೯	ಸಾಯಂಕಾಲ	೭	೦	ಶುಕ್ರಗೆ ಉಚ್ಚ ಗಾಢಾಸ್ತ			
"	೧೧	ಪ್ರಾತಃಕಾಲ	೧	೦	ಶುಕ್ರ ಚಂದ್ರ ಸಮಾಗಮ ಶುಕ್ರ	ಭಾ.	೨I	"
"	೧೨	ಸಾಯಂಕಾಲ	೭	೦	ಗುರು ಚಂದ್ರ " ಗುರು	ಭಾ.	I	"
"	೧೫	ರಾತ್ರಿ	೧೧	೪೫	ಶನಿ ಸ್ತಂಭ.			
"	೧೯	ಪ್ರಾತಃಕಾಲ	೪	೦	ಶನಿ ಚಂದ್ರ ಸಮಾಗಮ ಶನಿ	ಭಾ.	೭III	ಉತ್ತರ
"	೨೨	ಮಧ್ಯಾನ್ಹ	೩	೦	ಸಾಯನ ಸೂರ್ಯ ಸಿಂಹ ಪ್ರವೇಶ			
"	೩೧	ರಾತ್ರಿ	೧೧	೦	ಬುಧ ಉಚ್ಚ ಗಾಢಾಸ್ತ			
ಆಗೊಸ್ತು	೩	ಪ್ರಾತಃಕಾಲ	೩	೦	ಕುಜ ಚಂದ್ರ ಸಮಾಗಮ ಕುಜ	ಭಾ.	೨	ದಕ್ಷಿಣ.
"	೩	"	೪	೦	ಗುರು ಶುಕ್ರ ಸಮಾಗಮ ಶುಕ್ರ	ಭಾ.	III	ಉತ್ತರ
"	೫	ಮಧ್ಯಾನ್ಹ	೧೩	೦	ಬುಧ ಗುರು " ಗುರು	ಭಾ.	೧	ದಕ್ಷಿಣ
"	೯	ಸಾಯಂಕಾಲ	೭	೦	" ಶುಕ್ರ " ಬುಧ	ಭಾ.	I	ಉತ್ತರ
"	೯	ಮಧ್ಯಾನ್ಹ	೩	೦	ಗುರು ಚಂದ್ರ " ಗುರು	ಭಾ.	I	"

ಅಗೊಸ್ತು	೧೦	ಪ್ರಾತಃಕಾಲ	೬	೦	ಶುಕ್ರ ಚಂದ್ರ ಸಮಾಗಮ ಶುಕ್ರ ಭಾಗ ೧lll ಉತ್ತರ
"	೧೦	"	೪	೦	ಬುಧ " " ಬುಧ ಭಾ. ೨ "
"	೧೨	ಮಧ್ಯಾಹ್ನ	೨	೦	ಗುರು ಗಾಢಾಸ್ತ
"	೧೫	"	೧	೦	ಶನಿ ಚಂದ್ರ ಸಮಾಗಮ ಶನಿ ಭಾ. ೭lll ಉತ್ತರ
"	೨೨	ರಾತ್ರಿ	೯	೦	ಸಾಯನ ಸೂರ್ಯ ಕನ್ಯಾ ಪ್ರವೇಶ
"	೩೧	ಸಾಯಂಕಾಲ	೭	೦	ಕುಜ ಚಂದ್ರ ಸಮಾಗಮ ಕುಜ ಭಾ. ೬l ದಕ್ಷಿಣ
ಸಪ್ತಂಬರ	೬	ಹಗಲು	೧೧	೦	ಗುರು " " ಗುರು ಭಾ. ೧ ಉತ್ತರ
"	೯	ಪ್ರಾತಃಕಾಲ	೩	೦	ಶುಕ್ರ " " ಶುಕ್ರ ಭಾ. ೫ "
"	೯	ಸಾಯಂಕಾಲ	೫	೦	ಬುಧ " " ಬುಧ ಭಾ. ೨ "
"	೧೧	ರಾತ್ರಿ	೧೦	೦	ಶನಿ " " ಶನಿ ಭಾ. ೭ll "
"	೧೩	ಪ್ರಾತಃಕಾಲ	೧೦	೦	ಬುಧ ರವಿಪರಮಾಂತರ ಬುಧ ಭಾ. ೨೬ll ಪೂರ್ವ
"	೧೯	ಸಾಯಂಕಾಲ	೯	೦	ಗುರು ಮಘಾ ನ. ಸ. ನ. ಮಘಾ ಭಾ. 1 ದಕ್ಷಿಣ
"	೨೨	ಸಾಯಂಕಾಲ	೬	೦	ಸಾಯನ ಸೂರ್ಯ ತುಲಾ ಪ್ರವೇಶ
"	೨೪	ರಾತ್ರಿ	೧೧	೫೦	ಬುಧ ಶುಕ್ರ ಸಮಾ. ಬುಧ ಭಾ. ೪lll ದಕ್ಷಿಣ
"	೨೬	ಸಾಯಂಕಾಲ	೪	೦	ಬುಧ ಸ್ತಂಭ
"	೨೯	ಪ್ರಾತಃಕಾಲ	೩	೦	ಕುಜ ಚಂದ್ರ ಸಮಾಗಮ ಕುಜ ಭಾ. ೫ ದಕ್ಷಿಣ
ಒಕ್ತೋಬರ	೪	"	೬	೦	ಗುರು " " ಗುರು ಭಾ. ೧lll ಉತ್ತರ
"	೬	ಹಗಲು	೧೦	೫೦	ಬುಧ " " ಬುಧ ಭಾ. ೨ "
"	೯	ರಾತ್ರಿ	೧೧	೦	ಶುಕ್ರ " " ಶುಕ್ರ ಭಾ. ೪l "
"	೯	ಪ್ರಾತಃಕಾಲ	೨	೦	ಬುಧ ನೀಚಗಾಢಾಸ್ತ
"	೯	ಮಧ್ಯಾಹ್ನ	೧೨	೦	ಶನಿ ಚಂದ್ರ ಸಮಾಗಮ ಶನಿ ಭಾ. ೬ll ಉತ್ತರ
"	೧೬	ಪ್ರಾತಃಕಾಲ	೧	೦	ಶುಕ್ರ ಶನಿ " ಶುಕ್ರ ಭಾ. ೩ll ದಕ್ಷಿಣ
"	೧೭	ರಾತ್ರಿ	೧೧	೫೦	ಬುಧ ಸ್ತಂಭ
"	೨೩	ಪ್ರಾತಃಕಾಲ	೫	೦	ಸಾಯನ ಸೂರ್ಯ ವೃಶ್ಚಿಕ ಪ್ರವೇಶ.
"	೨೪	ಮಧ್ಯಾಹ್ನ	೧	೦	ಬುಧ ರವಿಪರಮಾಂತರ ಬುಧ ಭಾ. ೧೪1 ಪಶ್ಚಿಮ
"	೨೬	ರಾತ್ರಿ	೧೦	೦	ಕುಜ ಚಂದ್ರ ಸಮಾಗಮ ಕುಜ ಭಾ. ೩ll ದಕ್ಷಿಣ
ನವಂಬರ	೧	ಪ್ರಾತಃಕಾಲ	೧೨	೫೦	ಗುರು " " ಗುರು ಭಾ. ೨ll ಉತ್ತರ
"	೨	ಮಧ್ಯಾಹ್ನ	೧೨	೦	ಕುಜ ಸ್ತಂಭ
"	೪	ಸಾಯಂಕಾಲ	೫	೦	ಬುಧ ಚಂದ್ರ ಸಮಾಗಮ ಬುಧ ಭಾ. ೭ ಉತ್ತರ
"	೬	ಪ್ರಾತಃಕಾಲ	೩	೦	ಶನಿ " " ಶನಿ ಭಾ. ೭1 "
"	೭	ಸಾಯಂಕಾಲ	೭	೦	ಶುಕ್ರ " " ಶುಕ್ರ ಭಾ. ೩1 "
"	೧೩	"	೭	೦	ಶನಿ ಗಾಢಾಸ್ತ
"	೨೦	ರಾತ್ರಿ	೧	೦	ಬುಧ ತನಿ ಸಮಾಗಮ ಬುಧ ಭಾ. ೧ll ದಕ್ಷಿಣ
"	೨೧	"	೧೧	೪೫	ಸಾಯನ ಸೂರ್ಯ ಧನು ಪ್ರವೇಶ
"	೨೨	"	೧೦	೦	ಕುಜ ಚಂದ್ರ ಸಮಾಗಮ ಕುಜ ಭಾ. ೭1 ದಕ್ಷಿಣ
"	೨೯	ಮಧ್ಯಾಹ್ನ	೩	೦	ಗುರು " " ಗುರು ಭಾ. ೩1 ಉತ್ತರ
"	೨೯	ರಾತ್ರಿ	೧೧	೪೫	ಬುಧ ಉಚ್ಚ ಗಾಢಾಸ್ತ
ದಶಂಬರ	೩	ಸಾಯಂಕಾಲ	೭	೦	ಶನಿ ಚಂದ್ರ ಸಮಾಗಮ ಶನಿ ಭಾ. ೭1 ಉತ್ತರ
"	೫	ಪ್ರಾತಃಕಾಲ	೬	೦	ಬುಧ " " ಬುಧ ಭಾ. ೩ "
"	೭	ಸಾಯಂಕಾಲ	೭	೦	ಶುಕ್ರ ಚಂದ್ರ ಸಮಾಗಮ ಶುಕ್ರ ಭಾ. 1 ದಕ್ಷಿಣ
"	೧೧	ರಾತ್ರಿ	೧೦	೪೫	ಕುಜ ಸೂರ್ಯ ಪರಸ್ಪರ
"	೧೯	"	೧೦	೦	ಕುಜ ಚಂದ್ರ ಸಮಾಗಮ ಕುಜ ಭಾ. ೧ll ದಕ್ಷಿಣ
"	೨೧	ಮಧ್ಯಾಹ್ನ	೧	೦	ಸಾಯನ ಸೂರ್ಯ ಮಕರ ಪ್ರವೇಶ
"	೨೫	ಸಾಯಂಕಾಲ	೪	೦	ಗುರು ಸ್ತಂಭ
"	೨೫	ರಾತ್ರಿ	೧೦	೦	ಗುರು ಚಂದ್ರ ಸಮಾಗಮ ಗುರು ಭಾ. ೬lll ಉತ್ತರ
"	೩೧	ಪಾತ್ರಃಕಾಲ	೯	೦	ಶನಿ " " ಶನಿ ಭಾ. ೭1 "
"	೩೧	ಮಧ್ಯಾನ್ಹ	೩	೦	ಸೂರ್ಯ ಸನ್ನಿಕರ್ಷ.

ವರ್ತಮಾನಸಂಕ್ಷೇಪವು.

"ಜನರು ನಿನ್ನನ್ನು ಕೊಂಡಾಡಲಿ, ದೇವರೇ; ಜನರೆಲ್ಲಾ ನಿನ್ನನ್ನು ಕೊಂಡಾಡಲಿ. ಪ್ರಜೆಗಳು ಸಂತೋಷ ಪಟ್ಟು ಉತ್ಸಾಹಧ್ವನಿಗೈಯಲಿ. ನೀನು ಜನರನ್ನು ಸರಿಯಾಗಿ ನ್ಯಾಯತೀರಿಸಿ ಪ್ರಜೆಗಳನ್ನು ಭೂಮಿಯಲ್ಲಿ ನಡಿಸುತ್ತೀ. ಭೂಮಿ ಬೆಳೆಯನ್ನು ಕೊಡುವದು. ನಮ್ಮ ದೇವರಾದ ದೇವರು ನಮ್ಮನ್ನು ಆಶೀರ್ವದಿಸುವನು. ದೇವರು ನಮ್ಮನ್ನು ಆಶೀರ್ವದಿಸುವನು. ಭೂಮಿಯ ಜನರೆಲ್ಲಾ ಆತನಿಗೆ ಭಯಪಡುವವು." ಹೀಗೆ ನಾವು ದೇವರನ್ನು ಪ್ರಾರ್ಥಿಸಿ ವಾಚಕರಿಗೆ ಗತವರ್ಷದಲ್ಲಿ ಈ ಭೂಮಂಡಲದೊಳಗೆ ಸಂಭವಿಸಿದ ಮುಖ್ಯಮುಖ್ಯ ವೃತ್ತಾಂತಗಳನ್ನು ಶ್ರುತಪಡಿಸುತ್ತೇವೆ.

ಮೈಸೂರು ಮಹಾರಾಜರಾದ ಚಾಮರಾಜೇಂದ್ರ ಒಡೆಯರವರು ಕಲ್ಕತ್ತದವರೆಗೆ ಪಯಣ ಮಾಡಬೇಕೆಂದು ರಾಜಧಾನಿಯಿಂದ ಹೊರಟರು; ಪುಣೆಗೆ ತಲಪಿದ ಬಳಿಕ ಅಲ್ಲಿ ಅವರಿಗೆ ಸ್ವಲ್ಪ ಶೈತ್ಯವೂ ಗಂಟಲುನೋವೂ ಪ್ರಾರಂಭವಾಯಿತು. ಹಾಗೆಯೇ ಕಲ್ಕತ್ತಕ್ಕೆ ಮುಟ್ಟಿದ ಮೇಲೆ ಜ್ವರವೂ ಶೈತ್ಯವೂ ಬಿಗಿಯಾಗಿ ಅರಮನೆಯ ವೈದ್ಯರೂ ಕಲ್ಕತ್ತದ ಪ್ರಮುಖ ವೈದ್ಯರೂ ಎಷ್ಟು ಔಷಧೋಪಚಾರ ಮಾಡಿದರೂ ಅಸ್ವಸ್ಥವು ದಿನೇ ದಿನೇ ವರ್ಧಿಸಿದ್ದರಿಂದ ಅವರು ಅಲ್ಲೇ ಮೃತ ಪಟ್ಟರು. ಅವರು

ಮಾಜಿ ಮೈಸೂರು ಮಹಾರಾಜ ಚಾಮರಾಜೇಂದ್ರ ಒಡೆಯರವರು.

ಇನ್ನೂ ಯೌವನವಂತರಾಗಿದ್ದರು. ಅವರ ಕುಮಾರರಾದ ಕೃಷ್ಣರಾಜ ಒಡೆಯರವರಿಗೆ ಪಟ್ಟಾಭಿಷೇಕ ಮಾಡಿಸಿ ಸಿಂಹಾಸನದಲ್ಲಿ ಕುಂಡ್ರಿಸಿದ್ದಾರೆ. ಆದರೆ ಅವರು ಎಳೇ ವಯಸಿನವರಾದದರಿಂದ ಅವರ ಮಾತೃಶ್ರೀಯವರೂ ಮಂತ್ರಿಗಳೂ ಸಂಸ್ಥಾನದ ಕಾರ್ಯಭಾರವನ್ನು ವಹಿಸಿಕೊಂಡಿದ್ದಾರೆ.

ಮೈಸೂರು ಅಸ್ಥಾನದವರು ತಮ್ಮ ರಾಜ್ಯದಲ್ಲಿ ಬಾಲವಿವಾಹಗಳು ನಡಿಯ ಬಾರದೆಂದು ಹೊಸ ಕಾನೂನು ಏರ್ಪಡಿಸಿದ್ದಾರೆ. ಈ ಕಾನೂನನ್ನು ವಿರೋಧಿಸಿ ಕೆಲವರು ಬಾಲಕರಿಗೆ ವಿವಾಹ ಮಾಡಿದ್ದರಿಂದ ಅವರಿಗೆ ಶಿಕ್ಷೆಯಾಯಿತೆಂದು ಕೇಳು ತ್ತೇವೆ. ಬಾಲವಿವಾಹವು ಹಿತವಾದದ್ದಲ್ಲಾ ಎಂದು ಸೂಜ್ಞರಾದವರು ಬಾಯಿಯಿಂದ ಹೇಳುವರು, ಆದರೆ ತಾವೇ ಧೈರ್ಯವಾಗಿ ನಿಂತು ಬೇರೆಯವರನ್ನು ಧೈರ್ಯಪಡಿಸಿ ಈ ಹಾನಿಕರ ಪದ್ಧತಿಯನ್ನು ಮುರಿಯುವವರು ಕಮ್ಮಿ. ಮೈಸೂರು ಮಹಾರಾಣಿಯ ವರು ಎಳೆ ವಯಸ್ಸಿನ ವಿಧವೆಗಳ ಉಪಕಾರಕ್ಕಾಗಿ ಶಾಲೆಯನ್ನು ಸ್ಥಾಪಿಸಿ, ಅವರಿಗೆ ವಿದ್ಯಾಲಾಭವಾಗುವಂತೆ ಮಾಡಿದ್ದಾರೆ; ಇದೂ ಸ್ತುತ್ಯವಾದ ಕೃತ್ಯವಾಗಿದೆ. ಪುಣೆ ಯಲ್ಲಿ ರಮಾಬಾಯಿ ಪಂಡಿತೆ ಬ್ರಾಹ್ಮಣ ವಿಧವೆಗಳಿಗಾಗಿ ಶಾರದಾಸದನವೆಂಬ ಶಾಲೆ ಯನ್ನು ಸ್ಥಾಪಿಸಿದ್ದರಿಂದ ಹೆಣ್ಣುಮಕ್ಕಳಿಗೆ ಪ್ರಯೋಜನವಾಗುತ್ತದಷ್ಟೇ.

ಮದ್ರಾಸ ಪಟ್ಟಣದಲ್ಲಿ ಒಂದು ಕಡೆಯಿಂದ ಇನ್ನೊಂದು ಕಡೆಗೆ ಹೋಗುವದಕ್ಕೆ ಟ್ರಾಮ್‌ವೆ ಗಾಡಿಗಳನ್ನು ಇರಿಸಿದ್ದಾರೆ. ಈ ಗಾಡಿಗಳು ಹೋಗುವ ಮಾರ್ಗವು ರೈಲುಮಾರ್ಗದ ಹಾಗೆಯೇ ಅದೆ; ಆದರೆ ಗಾಡಿಗಳು ಚಲನೆಯಾಗುವದು ಉಗಿಯ ಬಲದಿಂದಲ್ಲಾ, ವಿದ್ಯುಲ್ಲತೆಯ ಪ್ರಯೋಗದಿಂದಲೇ ಅವನ್ನು ನಡಿಸುತ್ತಾರೆ. ಇದು ಈ ದೇಶದಲ್ಲಿ ಹೊಸ ಪ್ರಯೋಗವು. ಮುಂಬಾಯಿ ಪಟ್ಟಣದಲ್ಲಿ ಟ್ರಾಮ್‌ವೆ ಅದೆ; ಆದರೆ ಗಾಡಿಗಳನ್ನು ಕುದುರೆಗಳಿಂದ ಎಳಿಸುತ್ತಾರೆ.—ಮದ್ರಾಸಿನಲ್ಲಿ ಹೈಕೋರ್ಟ ಜಡ್ಜಿಯವರಾಗಿದ್ದ ಮುತ್ತುಸ್ವಾಮಿ ಅಯ್ಯರ್ ಎಂಬವರು ತೀರಿಹೋದರು. ಕೀರ್ತಿ ಪಟ್ಟ ಈ ದೊಡ್ಡ ಮನುಷ್ಯರ ಜ್ಞಾಪಕವು ಶಾಶ್ವತವಾಗಿ ಉಳಿಯುವಂತೆ ಅವರ ಹೆಸ ರಿನಲ್ಲಿ ಏನಾದರೂ ಮಾಡಬೇಕೆಂದು ಮಹಾಜನರು ಆಲೋಚಿಸಿ, ಆ ಬಗ್ಯೆ ಹಣ ಕೂ ಡಿಸಿದ್ದಾರೆ.—ಮುಂಬಾಯಿ ಗವರ್ನರರಾದ ಲಾರ್ಡ ಹಾರಿಸ್ ಪ್ರಭುಗಳು ಉದ್ಯೋ ಗದ ಅವಧಿಯನ್ನು ಮುಗಿಸಿ ವಿಲಾಯತಿಗೆ ತೆರಳಿದರು. ಅವರ ಬದಲಿಗೆ ಲಾರ್ಡ ಸಂಡರ್ಸ್ಟ್ ಪ್ರಭುಗಳು ಗವರ್ನರರಾಗಿ ಬಂದಿದ್ದಾರೆ.—ದಕ್ಷಿಣ ಮಹಾರಾಷ್ಟ್ರ ರೈಲುಮಾ ರ್ಗದಲ್ಲಿ ಅಳನಾವರವೆಂಬುವ ಊರು ಅದೆ. ಅದರ ಸವಿಾಪದಲ್ಲಿ ಚಿನ್ನವೂ ಬೆಳ್ಳಿ ಯೂ ಪ್ಲತೀನಮ್ ಎಂಬ ಲೋಹವೂ ಸಿಕ್ಕುತ್ತದೆಂದು ಇತ್ತಲಾಗೆ ತಿಳಿದು ಬಂದದೆ. ಒಬ್ಬ ಮುಸಲ್ಮಾನ ವ್ಯಾಪಾರಿಯು ಒಂದು ಮೈಲು ವಿಶಾಲದಲ್ಲಿ ಅಗಿದು ನೋಡಿ ದಾಗ ಅವನಿಗೆ ಆ ಲೋಹಗಳ ಮಣ್ಣು ಕಂಡಿತು. ಮಣ್ಣು ಗಾಳಿಸಿ ಚಿನ್ನ ತೆಗೆಯು ವದಕ್ಕೆ ಅವನು ಪ್ರಯತ್ನ ಮಾಡಿದನು. ಆದರೆ ಬಹಳ ಆದಾಯವಾಗಲಿಲ್ಲಾ. ಯಂ ತ್ರಗಳಿಂದ ಆ ಕೆಲಸವನ್ನು ನಡಿಸಿದರೆ, ಹೆಚ್ಚು ಲಾಭವು ಕಾಣುವದು.—ಮೂರು ವರ್ಷಗಳ ಹಿಂದೆ ಬಡೋದೆಯ ಗಾಯಕವಾಡ ಮಹಾರಾಜರು ತಮ್ಮ ಸಂಸ್ಥಾನದ ಒಂದು ಸೀಮೆಯಲ್ಲಿ ತಾಯಿತಂದೆಗಳು ಮಕ್ಕಳನ್ನು ಅವಶ್ಯವಾಗಿ ಶಾಲೆಗಳಿಗೆ ಕಳು ಹಿಸ ಬೇಕೆಂದು ಕಟ್ಟಾಜ್ಞೆ ಹೂಡಿ ತಕ್ಕ ಶಾಲೆಗಳನ್ನು ಸ್ಥಾಪಿಸಿದರು. ಮೊದಲನೇ ವರ್ಷದಲ್ಲಿಯೆ ೩೮೦೦ ಮಕ್ಕಳು ಶಾಲೆಗಳಲ್ಲಿ ಕಲಿಯುತ್ತಿದ್ದರು. ಹಿಂದುಸ್ಥಾನದ ಯಾವ ಪ್ರದೇಶದಲ್ಲಿಯೂ ಬರಹ ಕಲಿಯುವ ಹುಡುಗರ ಸಂಖ್ಯೆ ಇಷ್ಟು ಅಧಿಕವಾಗಿ ರುವದಾಗಿ ಕಂಡು ಬರುವದಿಲ್ಲಾ.

ವೈಸರಾಯ ದೊರೆಗಳಾದ ಎಲ್ಜಿನ್ ಪ್ರಭುಗಳು ಲಾಹೋರಿನಲ್ಲಿ ರಾಜಶ್ರೀವಿಗೆ

ಯೋಗ್ಯವಾದ ದರಬಾರು ಮಾಡಿಸಿ ಅದಕ್ಕೆ ದೇಶೀಯರಾಜರನ್ನೂ ಸಂಸ್ಥಾನಿಕರನ್ನೂ ಇಂಗ್ಲಿಷ ಸರದಾರರನ್ನೂ ಕರಸಿದ್ದರು. ವೈಸರಾಯ ದೊರೆಗಳು ದೇಶಸ್ಥರಾದ ಸಂಸ್ಥಾನಿಕರನ್ನು ಪರಿಚಯ ಮಾಡಿಕೊಂಡು ಸರ್ವರಿಗೂ ಹಿತಕರವಾದ ಉಪನ್ಯಾಸವನ್ನು ಮಾಡಿದರು. ಹೊರಗೆ ವಾದ್ಯಘೋಷವು ಗಂಭೀರವಾಗಿತ್ತು. ಇಂಥಾ ದರಬಾರು ಮೂವತ್ತು ವರ್ಷಗಳಿಂದೀಚೆ ನಡಿಯಲಿಲ್ಲಾ.—ನಮ್ಮ ದೇಶದಲ್ಲಿ ಸರಕಾರದ ವರುರೈಲು ಮಾರ್ಗಗಳನ್ನು ಹಾಕಿಸಿ ಪ್ರಯಾಣ ಮಾಡುವವರಿಗೂ ವ್ಯಾಪಾರಕ್ಕೂ ಬಹಳ ಸೌಕರ್ಯವನ್ನುಂಟು ಮಾಡಿದ್ದಾರೆ. ಆದರೆ ರೈಲ್ವೆಗಳಲ್ಲಿ ಆಗಾಗ್ಯೆ ಯದೃಚ್ಛೆಯಾಗಿ ಆಗುವ ಅಪಾಯಗಳಲ್ಲದೆ ಕೆಟ್ಟ ಮನುಷ್ಯರು ರೈಲುಗಾಡಿಗಳಲ್ಲಿರುವ ದ್ರವ್ಯವನ್ನು ಸುಲಿಯ ಬೇಕೆಂದು ರೈಲುಮಾರ್ಗಕ್ಕೆ ಎಡತಡೆ ಹಾಕುತ್ತಾರೆ. ಜಬಲಪುರದಿಂದ ಅಲ್ಲಹಾಬಾದಿಗೆ ಹೋಗುವ ರೈಲುಮಾರ್ಗಕ್ಕೆ ಕೇಡಾಳಿಗಳು ಆತಂಕ ಪಡಿಸಿದ್ದರಿಂದ ಬಂಡಿಗಳು ಕೆಳಗೆ ಬಿದ್ದು ಬಹು ಜನರು ಹಾನಿಪಟ್ಟರು. ಉತ್ತರದ ಅನೇಕ ಊರುಗಳಲ್ಲಿ ಬೇಸಿಗೆಕಾಲದ ಸೆಕೆಯು ಮನುಷ್ಯರೂ ಇತರ ಪ್ರಾಣಿಗಳೂ ಸೈರಿಸಲಾರದಷ್ಟು ಗಡುಸಾಗಿತ್ತು.—ಹರಿದ್ವಾರದಿಂದ ೧೩೦ ಮೈಲು ದೂರದಲ್ಲಿ ಗೋಹನಾ ಎಂಬ ಊರಿನ ಬಳಿಯಲ್ಲಿ ಗುಡ್ಡ ಕುಸಿದು ಬಿದ್ದು ಗಂಗಾಪ್ರವಾಹಕ್ಕೆ ಪ್ರತಿಬಂಧಕವಾಗಿ ನೀರು ತುಂಬಿ ದೊಡ್ಡ ಸರೋವರವಾಯಿತು. ಅದು ಒಡೆದರೆ ಪಾರ್ಶ್ವಾಂತರದಲ್ಲಿ ವಾಸವಾಗಿರುವ ಜನರಿಗೆ ಅಪಾಯವಾದೀತು ಎಂದು ಸರಕಾರದವರು ತಿಳಿದು ಮೊದಲೇ ತಕ್ಕ ಬಂದೋಬಸ್ತು ಮಾಡಿದ್ದರು. ಆ ಸರೋವರವು ಒಡೆದು ಬಹು ತೀವ್ರವಾಗಿ ಹರಿದ್ವಾರದ ಕಡೆಗೆ ಹರಿದುಹೋಯಿತು. ಅದರಿಂದ ಹಲವು ಊರುಗಳಲ್ಲಿ ನಷ್ಟ ಸಂಭವಿಸಿದರೂ ಪ್ರಜೆಗಳಿಗೆ ವಿಶೇಷ ಹಾನಿಯಾಗಲಿಲ್ಲಾ.

ಅಫಘಾನಿಸ್ಥಾನದ ಅಮೀರರು ಇಂಗ್ಲಾಂಡಿನ ವರೆಗೆ ಪಯಣ ಬೆಳಿಸಬೇಕೆಂದು ಆಲೋಚಿಸಿದ್ದರು; ಆದರೆ ಅವರು ಅಸ್ವಸ್ಥದಲ್ಲಿ ಬಿದ್ದು ದೇಹದ ಬಲವು ಕುಂದಿದ್ದರಿಂದ ತನ್ನ ಬದಲಿಗೆ ಪಟ್ಟದ ಕುಮಾರರಾದ ನಸರಲ್ಲಾಖಾನರನ್ನು ಕಳುಹಿಸಿದರು. ಇವರು ಇಂಗ್ಲಾಂಡಿಗೆ ತೆರಳಿ ಇಂಗ್ಲಿಷರಿಂದ ರಾಜಠೀವಿಗೆ ಯೋಗ್ಯವಾದ ಅಗತಸ್ವಾಗತವನ್ನು ಸಾಭಿಮಾನವನ್ನೂ ಪಡೆದು ಚಕ್ರವರ್ತಿನಿಯವರ ಭೇಟಿ ಮಾಡಿ ಸಂತೋಷ ಪಟ್ಟವರಾದರು. ಇತ್ತ ಅಮೀರರು ತಮ್ಮ ಮಗನಿಗೆ ಇಂಗ್ಲಿಷ ಅರಸ್ಥಾನದವರು ಇಷ್ಟು ಬಹುಮಾನ ಮಾಡಿದ್ದಕ್ಕಾಗಿ ಆನಂದಗೊಂಡರು. ಅಫಘಾನಿಸ್ಥಾನದ ದಕ್ಷಿಣದಲ್ಲಿ ಚಿತ್ರಾಲವೆಂಬ ಸಣ್ಣ ಸಂಸ್ಥಾನವದೆ. ಕೆಲ ವರ್ಷಗಳ ಹಿಂದೆ ಅದರ ಅರಸನು ನೆರೆ ಸಂಸ್ಥಾನಗಳಲ್ಲಿರುವ ಶತ್ರುಗಳಾದ ಅರಸರ ಉಪಟಳವನ್ನು ತಾಳಲಾರದೆ ಇಂಗ್ಲಿಷ ಸರಕಾರದ ಸಹಾಯ ಬೇಡಿದ್ದರಿಂದ ಸರಕಾರದವರು ಅವನಿಗೆ ಆಶ್ರಯಕೊಟ್ಟು ತಮ್ಮ ಕಡೆಯ ಸೈನ್ಯ ಕಳುಹಿಸಿ ಶತ್ರುಗಳ ಬಾಧೆಯಿಂದ ಬಿಡಿಸಿದ್ದಲ್ಲದೆ ಅವನ ರಾಜಧಾನಿಗೆ ಸಮೀಪದಲ್ಲಿ ಒಬ್ಬ ಸರದಾರನನ್ನೂ ಅವನ ಸಂಗಡ ಅಲ್ಪವಾದ ಸೈನ್ಯವನ್ನು ಇರಿಸಿದರು. ಇತ್ತಲಾಗೆ ಆ ಸಂಸ್ಥಾನದಲ್ಲಿ ದಂಗೆಗಾರರು ಅರಸನನ್ನು ಕೊಂದದರಿಂದ ಈ ವಿಷಯವನ್ನು ವಿಚಾರಿಸುವದಕ್ಕೆ ಆ ಸರದಾರನು ತನ್ನ ಸೇನೆಯೊಂದಿಗೆ ಅಲ್ಲಿಗೆ ಹೋಗಿರಲು, ನೆರೆಸಂಸ್ಥಾನದ ಒಬ್ಬ ರಾಜನು ಇಂಗ್ಲಿಷ ಸರಕಾರದ ಸೀಮೆಗೂ ಚಿತ್ರಾಲಿಗೂ ನಡುವೆ ಅಡ್ಡಗಟ್ಟಿದ್ದರಿಂದ ಸರಕಾರದವರು ಆ ಸರದಾರನನ್ನೂ ಅವನ ಸಂಗಡ ಇದ್ದ

ಸೈನ್ಯವನ್ನೂ ಬಿಡುಗಡೆ ಮಾಡುವದಕ್ಕೆ ಇತ್ತ ಕಡೆಯಿಂದ ಸೈನ್ಯವನ್ನು ಕಳುಹಿಸಿದರು. ಆ ಸೈನ್ಯವು ಶತ್ರುಗಳನ್ನು ಓಡಿಸಿ ಚಿತ್ರಾಲಿನಲ್ಲಿದ್ದ ಸೈನ್ಯವನ್ನೂ ಸರದಾರನನ್ನೂ ಬಿಡುಗಡೆ ಮಾಡಿ ಬಂದರು. — ಅಫಘಾನಿಸ್ಥಾನದ ಮೂಡಲಿನಲ್ಲಿ ವಜೀರಿಸ್ತಾನವೆಂಬ ಸೀಮೆಯಿದೆ; ಅಲ್ಲಿಯ ವಜೀರಿ ಎಂಬ ಜನರು ಕಾಬೂಲಿನ ಮತ್ತು ಹಿಂದುಸ್ಥಾನದ ಸರಹದ್ದು ತರಾಯಿಸುವದಕ್ಕೆ ಸರಕಾರದವರು ಕಳುಹಿಸಿದ ಸರದಾರರ ಮೈಗಾವಲಿಯ ದಂಡಿಗೆ ಆಗಾಗ್ಯೆ ಉಪದ್ರವ ಕೊಡುತ್ತಿದ್ದರು; ಅದನ್ನು ನಿಲ್ಲಿಸುವದಕ್ಕೆ ಸರಕಾರದವರು ಸೈನ್ಯ ಕಳುಹಿಸ ಬೇಕಾಯಿತು.

ಅರಬಸ್ಥಾನದ ಜಿದ್ದ ಪಟ್ಟಣದಲ್ಲಿರುವ ಇಂಗ್ಲಿಷ ಸರಕಾರದ ಇಬ್ಬರು ಕನ್ಸಲ್ ಸರದಾರರನ್ನೂ ಫ್ರೆಂಚ ರುಸ್ಯ ಸರಕಾರದ ಕನ್‌ಸಲ್ ಸರದಾರರನ್ನೂ ಬೆದುವಿನರೆಂಬ ಜಾತಿಯವರು ಒಂದಾನೊಂದು ಕಾರಣದಿಂದ ವಿರೋಧಿಸಿ ಇಂಗ್ಲಿಷ ಸರದಾರರಿಬ್ಬರನ್ನು ಕೊಂದರು. ತುರ್ಕಿಸುಲ್ತಾನರು ಈ ವರ್ತಮಾನ ಕೇಳಿ ಬಹು ವ್ಯಸನಗೊಂಡು ಆ ಕೇಡಾಳಿಗಳಿಗೆ ಕಠಿಣವಾಗಿ ದಂಡನೆ ಮಾಡುವೆವೆಂದು ಹೇಳಿದ್ದಾರೆ.

ಅರ್ಮೇನ್ಯವೆಂಬುವದು ಇಸ್ತಂಬೂಲಿನ ಸುಲ್ತಾನರಿಗೆ ಅಧೀನವಾದ ಸೀಮೆಯು. ಅಲ್ಲಿಯ ನಿವಾಸಿಗಳು ಕ್ರೈಸ್ತರು. ಇವರು ಬಹುಕಾಲದಾರಭ್ಯ ತುರ್ಕಿ ಅಧಿಕಾರಿಗಳಿಂದ ನಾನಾ ಹಿಂಸೆಗಳನ್ನು ಅನುಭವಿಸುತ್ತಾ ಬಂದವರು. ಇತ್ತಲಾಗೆ ಸರಕಾರದ ಕಡೆಯಿಂದ ಕಂದಾಯವನ್ನು ಎತ್ತುವದಕ್ಕೆ ಅಧಿಕಾರಿಗಳು ಬಂದು ವರಾತ ಮಾಡುವಾಗ ಅರ್ಮೇನ್ಯದವರು ಬೆಳೆಯೆಲ್ಲಾ ಕಳ್ಳರುಕಾಟಿಕರ ಹಾವಳಿಯಿಂದ ನಷ್ಟವಾಯಿತು, ಕಂದಾಯ ಕೊಡಲಾರೆವೆಂದು ಹೇಳಿದ್ದಲ್ಲಿ ಅಧಿಕಾರಿಗಳು ಸೈನ್ಯದವರಿಗೆ ಸೂಚನೆ ಕೊಟ್ಟದ್ದರಿಂದ ಅವರು ಹೋಗಿ ನಿರಾಯುಧರಾದ ಆ ಅರ್ಮೇನ್ಯದವರ ಮೇಲೆ ಬಿದ್ದು ಸಾವಿರಾರು ಜನರನ್ನು ಸಂಹರಿಸಿದರು. ಈ ಭಯಂಕರ ವರ್ತಮಾನವು ಯುರೋಪೀಯ ಅರಸ್ಥಾನಗಳ ಕಿವಿಗೆ ಮುಟ್ಟುತ್ತಲೇ ಅವರು ತಮ್ಮ ಕಡೆಯ ರಾಯಭಾರಿಗಳಿಗೆ ಅಪ್ಪಣೆ ಮಾಡಿದ್ದರಿಂದ ಅವರು ಅರ್ಮೇನ್ಯರು ಪಟ್ಟ ಅನಾಹುತವನ್ನು ಜನ್ಮಾಗಿ ವಿಚಾರಿಸಿ ತಪ್ಪಿತಸ್ಥರಿಗೆ ತಕ್ಕ ದಂಡನೆ ಮಾಡಿಸುವ ಬಗ್ಯೆ ಅಲ್ಲಿಗೆ ಹೋಗಿ ಸುಲ್ತಾನರು ವಿಚಾರಣೆಯ ಕೆಲಸಕ್ಕೆ ನೇಮಿಸಿದವರೊಂದಿಗೆ ತಾವೂ ಇದ್ದು ಎಲ್ಲಾ ಸಂಗತಿಗಳನ್ನು ಕೂಲಂಕುಷವಾಗಿ ನೋಡುವಾಗ ತುರ್ಕಿಸೈನ್ಯದವರು ಭಯಂಕರವಾದ ಹಿಂಸೆಯ ಕೃತ್ಯಗಳನ್ನು ನಡಿಸಿದರೆಂದು ತಿಳಿದು ಬಂತು. ಬಳಿಕ ಯುರೋಪೀಯ ರಾಯಭಾರಿಗಳು ಇಂಥಾ ಕ್ರೂರ ಕೃತ್ಯಗಳನ್ನು ನಡಿಸಿದ ಗವರ್ನರನನ್ನು ಸ್ಥಾನಭ್ರಷ್ಟನಾಗಿ ಮಾಡಿ, ಸೀಮೆಯ ಅಡಳತೆಯಲ್ಲಿ ಆಯಾ ತಿದ್ದುಪಾಟು ಮಾಡಿಸ ಬೇಕೆಂದು ಸುಲ್ತಾನರಿಗೆ ಆಲೋಚನೆ ಹೇಳಿದ್ದಾರೆ. — **ಅಫ್ರಿಕಖಂಡದ** ಸಮೀಪದಲ್ಲಿ **ಮದಗಸ್ಕರವೆಂಬುವ** ದೊಡ್ಡ ದ್ವೀಪವದೆ; ಅದರಲ್ಲಿ ಸ್ವತಂತ್ರವಾದ ಅರಸ್ಥಾನವದೆ; ಮೊದಲು ಕೇವಲ ಕಾಡಾಡಿಗಳಾದ ಆ ದ್ವೀಪದ ನಿವಾಸಿಗಳು ಮಿಶನೆರಿಗಳ ಪ್ರಯತ್ನದಿಂದ ಕ್ರೈಸ್ತರಾಗಿ ತಕ್ಕಮಟ್ಟಿಗೆ ಉನ್ನತಸ್ಥಿತಿಗೆ ಬಂದಿದ್ದಾರೆ. ಅಲ್ಲಿಯ ಅರಸ್ಥಾನವನ್ನು ತಮಗೆ ಒಳಪಡಿಸಿಕೊಂಡು ದ್ವೀಪವನ್ನು ತಮ್ಮ ರಾಜ್ಯವಾಗಿ ಮಾಡಿಕೊಳ್ಳಬೇಕೆಂದು ಫ್ರೆಂಚರು ಪ್ರಯತ್ನ ಮಾಡುತ್ತಿದ್ದರು. ದ್ವೀಪದ ರಾಣಿಯು ಫ್ರೆಂಚರ ಆಲೋಚನೆಗೆ ಒಪ್ಪದ್ದರಿಂದ ಅವರು ಯುದ್ಧಪರಿಮುಖವಾಗಿ ಆ ರಾಜ್ಯವನ್ನು ವಶ

ಮಾಡಿಕೊಳ್ಳುವದಕ್ಕೆ ಅಲ್ಲಿಗೆ ಸೈನ್ಯವನ್ನು ಕಳಿಸಿದ್ದಾರೆ. ಆದರೆ ಫ್ರೆಂಚ ಸೈನವು ಮದ ಗಸ್ಕರದ ಕರಾವಳಿಯಲ್ಲಿ ಇಳಿದು ಮುಂದರಿಸುವಾಗ ಸಿಪಾಯರಲ್ಲಿ ಹೆಚ್ಚು ಮಂದಿ ಅಸ್ವಸ್ಥದಲ್ಲಿ ಬಿದ್ದದರಿಂದ ಯುದ್ಧವು ಕ್ರಮವಾಗಿ ನಡಿಯಲು ಅನಾನುಕೂಲವಾ ಯಿತು.—**ಫ್ರಾನ್ಸ** ದೇಶದ ಅನೇಕ ಊರುಗಳಲ್ಲಿ ಹೊಳೆಗಳಿಗೆ ನೆರೆ ಬಂದು ಸಂಕಗಳೂ ಭಂಡಸಾಲೆಗಳೂ ಮುಣುಗಿ ಹರದರಿಗೆ ಬಹಳ ನಷ್ಟವಾಯಿತು. ಫ್ರಾನ್ಸದೇಶದ ಅಧಿಪತಿಯಾದ ಕಾರ್ನೊ ಎಂಬವನನ್ನು ಒಬ್ಬ ದುಸ್ಮಾನನು ಆಯುಧದಿಂದ ತಿವಿದು ಕೊಂದನು. ಅವನ ಬದಲಿಗೆ ಇನ್ನೊಬ್ಬನನ್ನು ಅಧಿಪತಿಯಾಗಿ ಆದುಕೊಂಡರು; ಆದರೆ ಅವನಿಗೂ ಇತರ ಅಧಿಕಾರಿಗಳಿಗೂ ವಿರೋಧ ಉಂಟಾದ್ದರಿಂದ ಅವನು ರಾಜಿ ಕೊಡಲಾಗಿ ಇನ್ನೊಬ್ಬನನ್ನು ಆದುಕೊಂಡಿದ್ದಾರೆ. ಇತಲಿ ದೇಶದ ತೆಂಕಣ ಭಾಗದ ಲ್ಲಿಯೂ ಸಿಸಿಲಿ ದ್ವೀಪದಲ್ಲಿಯೂ ಮಹಾ ಭೂಕಂಪವಾಗಿ ಹಲವು ಗ್ರಾಮಗಳು ಹಾವಳಿಯಾಗಿ ಹೇರಳ ಜೀವನಷ್ಟಕ್ಕೆ ಕಾರಣವಾಯಿತು. ಜನರು ಕಕ್ಕಾಬಿಕ್ಕಿಯಾಗಿ ಊರಲ್ಲಿರಲಾರದೆ ಹಡಗಗಳಲ್ಲಿ ಶರಣುಹೊಕ್ಕರು. ಯುರೋಪೀಯನ್ ತುರ್ಕಿರಾ ಜ್ಯದಲ್ಲಿಯೂ ಭೂಕಂಪವಾಯಿತು. ಸುಲ್ತಾನರ ರಾಜಧಾನಿಯಾದ ಇಸ್ತಂಬೂಲ್ ಪಟ್ಟಣದಲ್ಲಿ ಹಲವು ಕಟ್ಟಡಗಳು ಬಿದ್ದವು.

ಯುರೋಪಿನ ಅನೇಕ ಸೀಮೆಗಳಲ್ಲ ಮಾಗೀಕಾಲದಲ್ಲಿ ಅತಿರೇಕ ಛಳಿಯಿಂದ ಜನರಿಗೆಲ್ಲಾ ಬಹಳ ಸಂಕಷ್ಟವಾಯಿತು. ಸ್ಕಾಟಲಾಂಡು ಫ್ರಾನ್ಸ ದೇಶಗಳಲ್ಲಿ ಅನೇ ಕರು ಶೀತದಿಂದ ರೋಗಸ್ಥರಾಗಿ ಹಲವರು ಸತ್ತುಹೋದರು. ರೈಲುಬಂಡಿಗಳನ್ನು ಓಡಿಸುವದೂ ತಂತಿಟಪ್ಪಾಲಿನ ಮೇಲೆ ವರದಿ ಕಳುಹಿಸುವದೂ ಸಹ ನಿಲ್ಲಿಸ ಬೇಕಾಯಿತು. ಇಂಗ್ಲಾಂಡಿನಲ್ಲಿ ಒಂದು ತಿಂಗಳ ವರೆಗೆ ಹಿಮವು ವ್ಯಾಪಿಸಿ ನದಿಯ ನೀರು ಗಡ್ಡೆಯಾಗಿ ಜನರು ಮನೆಗಳಿಂದ ಹೊರಗೆ ಹೊರಡುವದಕ್ಕೂ ಅನಾನುಕೂಲ ವಾಯಿತು. ಬಹು ಜನರು ಛಳಿಯಿಂದ ಸತ್ತರು. ಕೆಲ ಹೊಳೆಗಳಿಗೆ ಅತಿರೇಕವಾದ ನೆರೆ ಬಂದು, ಜನರ ವಾಸಸ್ಥಳಗಳಿಗೂ ಗದ್ದೆ ಹೊಲಗಳಿಗೂ ಹೆಚ್ಚು ಕೆಡಕು ಸಂಭವಿ ಸಿತು.—ಮಹಾರಾಣಿ ಚಕ್ರವರ್ತಿನಿಯವರಿಗೆ ತಮ್ಮ ಮೊಮ್ಮಗನಲ್ಲಿ ಪುತ್ರಜನನವಾದ ದರಿಂದ ಬಹಳ ಸಂತೋಷವಾಯಿತು. ಅವರು ತಮ್ಮ ಜೀವಮಾನದಲ್ಲೇ ಕ್ರಮವಾಗಿ ಸಿಂಹಾಸನಕ್ಕೆ ಬಾಧ್ಯನಾಗತಕ್ಕ ಮರಿಮಗನನ್ನು ಕಾಣುವಂತೆ ದೇವರು ದಯೆಪಾಲಿ ಸಿದರು.—ಪಾರ್ಲಿಮೆಂಟ ಸಭೆಯಲ್ಲಿ ಪ್ರಧಾನಮಂತ್ರಿಗಳಿಗೂ ಇತರ ಸಭಾಸದರಿಗೂ ಒಂದಾನೊಂದು ವಿಷಯದಲ್ಲಿ ಚರ್ಚೆಯಾಗುವಾಗ ಪ್ರಧಾನ ಮಂಡಲಿಯವರ ಮಾತು ನಡೆಯದೆ ಹೋದದರಿಂದ ಅವರು ರಾಜಿನಾಮೆ ಕೊಟ್ಟರು. ಮಹಾರಾಣಿಯವರು ತತ್ಕಾಲಕ್ಕೆ ಮಂತ್ರಿಗಳ ಸಭೆಯನ್ನು ಏರ್ಪಡಿಸಿ ಪಾರ್ಲಿಮೆಂಟ ಸಭಾಸದರನ್ನು ವಿಸ ರ್ಜನೆ ಮಾಡಿ ಹೊಸ ಸಭಾಸದರನ್ನು ಆದುಕೊಂಡು ಕಳುಹಿಸಬೇಕೆಂದು ಪ್ರಜೆಗೆ ಅಪ್ಪಣೆ ಕೊಟ್ಟರು. ರಾಜಾಜ್ಞೆಯ ಪ್ರಕಾರ ನವೀನ ಸಭಾಸದರು ನಿಯುಕ್ತರಾಗಿದ್ದಾ ರೆ. ಕಳದ ಸಾರಿ ಸಭಾಸದರನ್ನು ಆದುಕೊಳ್ಳುವಲ್ಲಿ ಮುಂಬಾಯಿಯ ದಾದಾಭಾಯಿ ನವರೋಜಿಯವರು ಇಂಗ್ಲಾಂಡಿಗೆ ಹೋಗಿದ್ದು ತಮ್ಮನ್ನು ಜನರು ಆದುಕೊಳ್ಳುವಂತೆ ಪ್ರಯತ್ನ ಮಾಡಿದ್ದರು. ಹಾಗೆಯೇ ಅವರು ಇಷ್ಟು ವರ್ಷಗಳು ಪಾರ್ಲಿಮೆಂಟನಲ್ಲಿ ಸಭಾಸದರಾಗಿದ್ದರು. ಈ ಸಾರಿ ಅವರೂ ಇನ್ನಿಬ್ಬರೂ ಅದೇ ಪ್ರಕಾರ ಪ್ರಯತ್ನ

ಮಾಡಿದರು. ದಾದಾಭಾಯಿನವರೋಜಿಯವರ ಪ್ರಯತ್ನ ನಿರರ್ಥಕವಾಯಿತು. ಆದರೆ ಭೌನಗರಿ ಎಂಬವರನ್ನು ಜನರು ವರಿಸಿಕೊಂಡು ತಮ್ಮ ಕಡೆಯ ನಿಯುಕ್ತರಾಗಿ ನೇಮಿಸಿದರು. ಈ ದೇಶದವರೊಬ್ಬರು ಪಾರ್ಲಿಮೆಂಟ ಸಭೆಯಲ್ಲಿ ಪ್ರತಿನಿಧಿಯಾಗಿರುವದು ನಮ್ಮ ದೇಶಕ್ಕೆ ಭೂಷಣವೇ.

ರುಸ್ಯಸಾಮ್ರಾಜ್ಯದ ಮೂರನೆ ಅಲೆಕ್ಸಂದರ್ ಚಕ್ರವರ್ತಿಯವರು ತೀರಿಹೋದರು. ಅವರು ಯುದ್ಧದಲ್ಲಿ ತಾತ್ಪರ್ಯವುಳ್ಳವರಾಗಿರದೆ ಯುರೋಪೀಯ ಸಂಸ್ಥಾನಗಳಲ್ಲಿ ಸಮಾಧಾನವನ್ನು ಕಾಪಾಡಬೇಕೆಂದು ಹೆಚ್ಚು ಪ್ರಯತ್ನ ಮಾಡುತ್ತಿದ್ದರು. ಅವರ ಕುಮಾರರು ಎರಡನೆ ನಿಕೊಲಾಸ ಎಂಬ ನಾಮದಿಂದ ಉತ್ತರಾಧಿಕಾರಿಯಾಗಿ ರಾಜ್ಯಭಾರವನ್ನು ವಹಿಸಿಕೊಂಡು ವಿಕ್ಟೋರಿಯ ಚಕ್ರವರ್ತಿನಿಯವರ ಮೊಮ್ಮಗಳನ್ನು ಮದುವೆಯಾಗಿದ್ದಾರೆ. ತಂದೆಯವರಂತೆ ಇವರು ಸಹ ಸರ್ವ ರಾಜ್ಯಗಳಲ್ಲಿ ಸಮಾಧಾನ ಕಾಪಾಡುವದರಲ್ಲಿ ಆಸಕ್ತರಾಗಿರುವಂತೆ ತೋರುತ್ತದೆ. ಅವರ ತಂದೆಯವರು ರಾಜಕಂಟಕರಾದ ದುಸ್ಮಾನರ ದೆಸೆಯಿಂದ ನಿತ್ಯವೂ ಬಲವಾದ ಮೈಗಾವಲುಸೈನ್ಯವನ್ನು ಇಟ್ಟುಕೊಂಡಿದ್ದರು. ಆದರೆ ಇವರು ನಿರ್ಭಯರಾಗಿ ರಾಣಿಯವರೊಡನೆ ಪಟ್ಟಣದಲ್ಲಿ ಸವಾರಿ ಮಾಡುತ್ತಾರೆ. ಈ ಚಕ್ರವರ್ತಿಯವರು ಕೆಲವು ವರ್ಷಗಳ ಹಿಂದೆ ಭೂಪರ್ಯಟಣೆಗೆ ಹೊರಟವರು ಹಿಂದುಸ್ಥಾನಕ್ಕೂ ಬಂದಿದ್ದರು.

ನಾವು **ಪೂರ್ವೋತ್ತರ**ಕ್ಕೆ ಹೋದರೆ **ಚೀನಿ**ಸಾಮ್ರಾಜ್ಯವೂ **ಜಪನ**ರಾಜ್ಯವೂ ಬರುತ್ತವೆ. ಎರಡು ರಾಜ್ಯಗಳಿಗೆ ನಡುವೆ ಸಮುದ್ರವದೆ. ಜಪನಿರಾಜ್ಯವು ಸಣ್ಣದು, ಆದರೂ ಆ ದೇಶದವರು ಯುರೋಪೀಯರೊಂದಿಗೆ ಹೆಚ್ಚು ಸಂಪರ್ಕವಿಟ್ಟು ಅವರಿಗೆ ದೇಶದಲ್ಲಿ ವ್ಯಾಪಾರಶಾಪಾರ ಮಾಡುವದಕ್ಕೆ ಸ್ವತಂತ್ರ ಕೊಟ್ಟದ್ದಲ್ಲದೆ ಯುರೋಪೀಯರ ಅಕ್ಷರವಿದ್ಯೆಯನ್ನೂ ನಾನಾ ಕೈಗಾರಿಕೆಯ ಒಡವೆಗಳನ್ನು ಮಾಡುವ ಕೌಶಲ್ಯವನ್ನೂ ಕಲಿತುಕೊಂಡು ಯುರೋಪೀಯರಿಗೆ ಸರೀಕರು ಎಂದನ್ನಿಸಿಕೊಳ್ಳುವದಕ್ಕೆ ಸಾಹಸ ಮಾಡುತ್ತಾ ಹೆಚ್ಚೆಚ್ಚಾಗಿ ಉನ್ನತ ಸ್ಥಿತಿಗೆ ಬಂದರು. ಅದಲ್ಲದೆ ಅವರು ಯುರೋಪೀಯ ದಳವಾಯಿಗಳನ್ನು ಸೇವೆಗೆ ಇಟ್ಟುಕೊಂಡು ತಮ್ಮ ಸೇನೆಯಲ್ಲಿ ಯುದ್ಧಕೌಶಲವನ್ನು ಪ್ರಚುರಪಡಿಸಿದರು. ಚೀನಿಯರು ತಮ್ಮ ಪೂರ್ವಸ್ಥಿತಿಯೇ ಸಾಕು, ಪರಜನರಾದ ಯುರೋಪೀಯರಿಂದ ಕಲಿಯತಕ್ಕದ್ದೇನದೆ ಎಂಬ ಗರ್ವದಿಂದ ಯುರೋಪೀಯರ ವಿದ್ಯೆಯನ್ನು ಸಂಪಾದಿಸಿ ಉನ್ನತ ಸ್ಥಿತಿಗೆ ಬರುವದಕ್ಕೆ ಪ್ರಯತ್ನ ಮಾಡಲಿಲ್ಲಾ. ಹೀಗಿರುತ್ತಾ ಜಪನಿಗಳು ಯುದ್ಧಕೌಶಲವನ್ನು ಹೊರಗೆ ತೋರಿಸುವದಕ್ಕೆ ಅನುಕೂಲವನ್ನು ಕಾಯುತ್ತಿದ್ದರು. ಚೀನಕ್ಕೆ ಉತ್ತರದಲ್ಲಿ ಕೊರೆಯ ಎಂಬ ಸೀಮೆಯದೆ, ಅದು ಮೊದಲಿನಿಂದಲೇ ಚೀನಿಗೆ ಅಧೀನವಾದದ್ದು. ಅಲ್ಲಿ ಬಂಡಾಯವಾಗಲಾಗಿ ಅದನ್ನು ತಮ್ಮಣ್ಣೆ ಪಡಿಸುವದಕ್ಕೆ ಚೀನಿಗಳು ಪ್ರಯತ್ನ ಮಾಡುವಾಗ ಜಪನಿಗಳೂ ಅದರಲ್ಲಿ ತಮಗೆ ಅಧಿಕಾರವುಂಟೆಂದು ಹೇಳಿ ಮುಂದರಿದು ಬಂದದರಿಂದ ಚೀನಿಗಳಿಗೂ ಜಪನದವರಿಗೂ ಕಾಳಗಕ್ಕೆ ಕಾರಣವಾಯಿತು. ಹೆಚ್ಚು ಸೇನಾಬಲವೂ ವಿಶಾಲವಾದ ದೇಶವೂ ಉಳ್ಳ ಚೀನಿಯರು ಸಣ್ಣ ದೇಶದ ಅರಸನಾದ ಜಪನಿ ಮಹಾರಾಜನ ಸೈನ್ಯವನ್ನು ಹಿಮ್ಮೆಟ್ಟಿಸಿ ಜಯಶಾಲಿಗಳಾಗುವರೆಂದು ಸರ್ವರೂ ನಿರೀಕ್ಷಿಸುತ್ತಿ

ರಲಿಕ್ಕೆ ಪ್ರತಿವೊಂದು ಕಾಳಗದಲ್ಲಿ ಚೀನಿಸೈನ್ಯವನ್ನು ಜಪನಿಗಳು ಹಿಮ್ಮೆಟ್ಟಿಸಿ ಸೋಲಿಸಿದರು. ಊರಿನ ಮೇಲೆ ಊರನ್ನು ಜಯಿಸುತ್ತಾ ಜಪನಿಗಳು ಚೀನಿಯರ ರಾಜಧಾನಿಯಾದ ಪೆಕಿಂಗ್‌ಪಟ್ಟಣವನ್ನು ಸ್ವಾಧೀನ ಮಾಡಿಕೊಳ್ಳಬೇಕೆಂದು ಕೋರುವಾಗ್ಯೆ ಚೀನಿ ಮಹಾರಾಜನು ಜಪನಿಗಳ ಮುಂದೆ ನಿಸ್ತರಿಸಲಾರದೆ ಸಂಧಾನ ಮಾಡುವದಕ್ಕೆ ತನ್ನ ಕಡೆಯಿಂದ ಜಪನಿ ಮಹಾರಾಜನ ಬಳಿಗೆ ರಾಯಭಾರಿಗಳನ್ನು ಕಳುಹಿಸಿದನು. ಜಪನಿಗಳು ಆರಂಭದಲ್ಲಿ ಪೆಕಿಂಗ್ ಪಟ್ಟಣವನ್ನು ಹಿಡಿಯುವ ವರೆಗೆ ಸಂಧಾನಕ್ಕೆ ಒಪ್ಪುವದಿಲ್ಲವೆಂದು ಹೇಳಿದಾಗ್ಯೂ ಯುರೋಪೀಯ ಅರಸ್ಥಾನಗಳ ದಾಕ್ಷಿಣ್ಯಕ್ಕಾಗಿ ಸಂಧಾನಕ್ಕೆ ಬಂದರು. ಚೀನಿಗಳು ಜಪನಿಗೆ ಹೇರಳ ದ್ರವ್ಯ ತೆರಬೇಕಾದದ್ದಲ್ಲದೆ ಫೊರ್ಮೋಸಾ ಎಂಬ ದ್ವೀಪವನ್ನು ಸಹ ಅವರ ಸ್ವಾಧೀನಕ್ಕೆ ಕೊಟ್ಟರು. ಚೀನಿ ಮಹಾರಾಜನು ಯುದ್ಧದ ದೆಸೆಯಿಂದ ಬಹಳ ಸಾಲಕ್ಕೆ ಗುರಿಯಾದನು. ಬುದ್ಧಿರ್ಬಲಾದ್ಗರೀಯಸೀ ಅಂದರೆ ಬುದ್ಧಿಯೇ ಬಲಕ್ಕಿಂತಲೂ ದೊಡ್ಡದು ಎಂಬುವ ಸುಭಾಷಿತ ವಾಕ್ಯವೂ ಜ್ಞಾನವೆಂಬ ಇರುವೆ ಅಜ್ಞಾನವೆಂಬ ಆನೆಯನ್ನು ನುಂಗುತ್ತದೆ ಎಂಬ ಮಾತೂ ಈ ಜನಾಂಗಗಳ ಕಾಳಗದಲ್ಲಿ ಸತ್ಯವಾದದ್ದಾಗಿ ಕಾಣುತ್ತದೆ. ಈ ಯುದ್ಧದಿಂದ ಚೀನದವರು ಸೊಕ್ಕು ಮುರಿಸಿಕೊಂಡು ನಮ್ರತ್ವವನ್ನು ಕಲಿತರು. ಯುಗಾದಿ ಹಬ್ಬದ ದಿನದಲ್ಲಿ ಚೀನಚಕ್ರವರ್ತಿಯು ಪರರಾಜ್ಯಗಳ ಸರದಾರರನ್ನು ಕರಿಸಿ ಅರಮನೆಯ ದೊಡ್ಡ ಬಾಗಲಿನಿಂದ ಅವರು ಪ್ರವೇಶಿಸುವಂತೆ ಸಮ್ಮತಿಸಿದನು. ಈ ಸ್ವತಂತ್ರವು ಈ ವರೆಗೆ ಯಾರಿಗೂ ಸಿಕ್ಕಿರಲಿಲ್ಲಾ. ಚೀನೀಯ ಅರಮನೆಯ ಚಿತ್ರವನ್ನು ಪಂಚಾಂಗದ ಮೊದಲನೇ ಪಾನಿನಲ್ಲಿ ತೋರಿಸಿದ್ದೇವೆ.

ಅಮೆರಿಕದಲ್ಲಿ ಎರಡು ಸೀಮೆಗಳಲ್ಲಿ ಕಾಡುಕಿಚ್ಚು ಪ್ರವರ್ಧಮಾನವಾಗಿ ಊರುಗಳನ್ನು ಸುಡುವದಕ್ಕೆ ಪ್ರಾರಂಭಿಸಿತು. ಆ ಪ್ರದೇಶಗಳಲ್ಲಿ ರೈಲುಬಂಡಿಗಳಿಗೂ ಬೆಂಕಿಯಿಂದ ಅಪಾಯವಾಯಿತು. ಬಹು ಜನರು ಬೆಂಕಿಗೆ ಆಹುತಿಯಾಗಿ ಮಡಿದು ಹೋದರು. ಹೇರಳ ಆಸ್ತಿಪಾಸ್ತಿ ನಾಶನವಾಯಿತು.

ಅಘಮರ್ಷಣಸೂಕ್ತವು.

ಋಗ್ವೇದ ೧೦ನೆ ಮಂಡಲ ೧೯೦ನೆ ಅನುವಾಕ ೧ನೆ ಸೂಕ್ತಕ್ಕೆ ಅಘಮರ್ಷಣ ಸೂಕ್ತವೆನ್ನುತ್ತಾರೆ; ಹಾಗಂದರೆ ಪಾಪವನ್ನು ನಾಶನ ಮಾಡುವ ಸೂಕ್ತವು. ಅದು ಯಾವದಂದರೆ:—ಋತಂಚ ಸತ್ಯಂಚ ಅಭೀದ್ಧಾತ್ ತಪಸೋ ಅಧ್ಯಜಾಯತ | ತತೋ ರಾತ್ರೀ ಅಜಾಯತ ತತಃ ಸಮುದ್ರಃ ಅರ್ಣವಃ | ಸಮುದ್ರಾದರ್ಣವಾದಧಿ ಸಂವತ್ಸರೋ ಅಜಾಯತ | ಅಹೋರಾತ್ರಾಣಿ ವಿದಧತ್ ವಿಶ್ವಸ್ಯಮಿಷತೋವಶೀ | ಸೂರ್ಯಾಚಂದ್ರಮಸೌಧಾತಾ ಯಥಾ ಪೂರ್ವಮಕಲ್ಪಯತ್ | ದಿವಂಚ ಪೃಥಿವೀಂಚ ಅಂತರಿಕ್ಷಮಥೋಸ್ವಃ || ಅರ್ಥವೇನಂದರೆ: ಋತವೂ ಸತ್ಯವೂ ಉರಿಯುವ ತಪಸ್ಸಿನಿಂದ ಉಂಟಾದವು; ಅದರಿಂದ ರಾತ್ರಿಯೂ ಹರಿಯುವ ಸಮುದ್ರವೂ ಉಂಟಾದವು. ಹರಿಯುವ ಸಮುದ್ರದಿಂದ ಸಂವತ್ಸರವುಂಟಾಯಿತು. ವಿಶ್ವದ ಅಧೀಶನು ಅಹೋ

ರಾತ್ರಿಗಳನ್ನೂ ಮತ್ಯ್ರರನ್ನೂ ಮಾಡಿದನು. ಧಾತನು ಸೂರ್ಯ ಚಂದ್ರರನ್ನು ಮೊದ ಲಿದ್ದಂತೆ ಮಾಡಿದನು. ದಿವವನ್ನೂ ಪೃಥ್ವಿಯನ್ನೂ ಅಂತರಿಕ್ಷವನ್ನೂ ಸ್ವರ್ಗವನ್ನೂ ಮಾಡಿದನು.

ಈ ಸೂಕ್ತದ ಮಹಾತ್ಮ್ಯವೇನು ಅಂದರೆ—ಯಥಾಶ್ವಮೇಧಃ ಕ್ರತುರಾಟ್ ಸರ್ವ ಪಾಪಾಪನೋದನಃ । ತಥಾಘಮರ್ಷಣಂ ಸೂಕ್ತಂ ಸರ್ವಪಾಪಪ್ರಣಾಶನಂ ॥ ಅಂದರೆ ಅಶ್ವಮೇಧವು ಸರ್ವ ಪಾಪಗಳನ್ನು ಮನುಷ್ಯನಿಂದ ದೂರ ಮಾಡುತ್ತದೆ; ಹಾಗೆಯೇ ಅಘಮರ್ಷಣಸೂಕ್ತವು ಸರ್ವ ಪಾಪಗಳನ್ನು ನಾಶನ ಮಾಡುತ್ತದೆ. ಈ ವಿಶ್ವಾಸದಿಂದ ಬ್ರಾಹ್ಮಣನು ಈ ಸೂಕ್ತವನ್ನು ಸಂಧ್ಯಾವಂದನೆಯಲ್ಲಿಯೂ ವಿಶೇಷ ಪರ್ವಕಾಲಗಳಲ್ಲಿಯೂ ಜಪಿಸುತ್ತಾನೆ. ಆದರೆ ಈ ಸೂಕ್ತದಲ್ಲಿ ಪೃಥಿವಿ ಸಮುದ್ರ ಅಂತರಿಕ್ಷ ಸ್ವರ್ಗ ಮೊದಲಾದವುಗಳು ಹ್ಯಾಗೆ ಉಂಟಾದವು ಎಂಬ ವಿವರವದೆ. ಇದೊಂದು ವಿಶ್ವನಿರ್ಮಾಣವನ್ನು ವರ್ಣನೆ ಮಾಡುವ ಸೂಕ್ತವು. ಪಾಪವಂದ ರೇನು, ಅದರಿಂದ ವಿಮೋಚನೆ ಹೊಂದುವದು ಹ್ಯಾಗೆ, ವಿಮೋಚನೆ ಮಾಡುವವನು ಯಾರು ಎಂಬ ಸೂಚನೆ ಈ ಸೂಕ್ತದಲ್ಲಿ ಇಲ್ಲಾ. ಹೀಗಿರುತ್ತಾ ಅದಕ್ಕೆ ಅಘಮ ರ್ಷಣಸೂಕ್ತವೆಂದು ಯಾಕೆ ಹೆಸರಾಯಿತೋ ತಿಳಿಯದು.

ಮೇಲಿನ ಸೂಕ್ತಕ್ಕೆ ಅಘಮರ್ಷಣಸೂಕ್ತವೆಂದು ಪುರಾತನರು ಹೆಸರಿಟ್ಟದರಿಂದ ತಮಗೆ ಪಾಪ ಉಂಟೆಂದೂ, ಆ ಪಾಪಗಳನ್ನು ಒಂದಾನೊಂದು ಉಪಾಯದಿಂದ ಪರಿಹರಿಸಿಕೊಂಡು ಶುದ್ಧರಾಗದಿದ್ದರೆ, ಅವು ಮೊಳೆತು ಬಲಿತು ದುರ್ವಿಪಾಕಗಳೆಂಬ ಫಲಗಳನ್ನು ತಮಗೆ ಉಣ್ಣಿಸುವವು ಎಂದೂ ಮನವರಿತಿದ್ದರೆಂದು ತಿಳಿಯಬೇಕು. ಪಾಪಗಳಿಂದ ವಿಮೋಚನೆ ಹೊಂದುವದಕ್ಕೆ ಬೇರೆ ಬೇರೆ ಉಪಾಯಗಳನ್ನು ಪುರಾತ ನರು ಏರ್ಪಡಿಸಿದರು. ಅವುಗಳಲ್ಲಿ ಈ ಸೂಕ್ತವನ್ನು ನಾಲಿಗೆಯಿಂದ ಜಪಿಸುವದೂ ಒಂದು ವಿಶೇಷ ಉಪಾಯವೆಂದು ಮಾಡಿದರು.

ಪುರಾತನರು ತಮಗೆ ಪಾಪ ಉಂಟು, ಅದನ್ನು ಪರಿಹರಿಸಿಕೊಳ್ಳಬೇಕು ಎಂದು ಆಲೋಚಿಸಿದ್ದು ನ್ಯಾಯವಾಗಿದೆ. ಆದರೆ ಅದನ್ನು ಪರಿಹರಿಸಿಕೊಳ್ಳುವದಕ್ಕೆ ಸಂಕ ಲ್ಪಿಸಿದ ಉಪಾಯಗಳನ್ನು ನೋಡಿದರೆ, ಪಾಪವಂದರೇನು ಎಂಬುವ ತಿಳಿವು ಅವರಿಗೆ ಇರಲಿಲ್ಲವೆಂದು ಗ್ರಹಿಸಬೇಕು. ಅಕೃತ್ಯಕರಣ ಕೃತ್ಯಾಕರಣ ಪಾಪವೆನ್ನುತ್ತಾರೆ; ಅಂದರೆ ಮಾಡಬಾರದ್ದನ್ನು ಮಾಡುವದು, ಮಾಡಬೇಕಾದದ್ದನ್ನು ಮಾಡದಿರುವದು ಪಾಪವು. ಈಗ, ಒಂದು ಗೋಷ್ಠಿಯು ಅಕೃತ್ಯವೂ ಒಂದು ಗೋಷ್ಠಿಯು ಕೃತ್ಯವೂ ಆದದ್ದು ಹ್ಯಾಗೆ? ಕೃತ್ಯವಾಗಲಿ ಅಕೃತ್ಯವಾಗಲಿ ಆಗಿರುವ ಗೋಷ್ಠಿಗಳು ಸ್ವತಂತ್ರವಾ ಗಿದ್ದಾವೋ? ಅವು ಜೀವಾತ್ಮರ ಗೊಡವೆಗೆ ಬಂದು ತಂತಮ್ಮ ಸ್ವಭಾವಕ್ಕನುಸಾರವಾಗಿ ದುಃಖವನ್ನೋ ಸುಖವನ್ನೋ ಕೊಡುತ್ತಾವೋ? ಇಲ್ಲಾ, ಹೀಗಿರುವದಿಲ್ಲಾ. ಒಂದು ಗೋಷ್ಠಿ ಕೃತ್ಯವೂ ಇನ್ನೊಂದು ಗೋಷ್ಠಿ ಅಕೃತ್ಯವೂ ಆದದ್ದು ಹ್ಯಾಗೆ ಅಂದರೆ ಸರ್ವ ನಿಯಾಮಕನೂ ಸರ್ವಸ್ವತಂತ್ರಿಯೂ ಆದ ಪರಮಾತ್ಮನ ಅಪ್ಪಣೆಯಿಂದ; ಆತನು ಮಾ ಡಬೇಕೆಂದು ಕಟ್ಟಳೆ ಇಟ್ಟದ್ದೇ ಕೃತ್ಯ, ಮಾಡಬಾರದೆಂದು ಕಟ್ಟಳೆ ಇಟ್ಟದ್ದೇ ಅಕೃತ್ಯ.

ಜೀವಾತ್ಮನೇ ಆಳು, ಪರಮಾತ್ಮನೇ ಅಳ್ದನು; ಜೀವಾತ್ಮನೇ ಸೇವಕನು, ಪರಮಾ ತ್ಮನೇ ಸೇವ್ಯನು; ಜೀವಾತ್ಮನೇ ಪ್ರಜೆ, ಪರಮಾತ್ಮನೇ ಅರಸನು; ಹೀಗಿರುವದರಿಂದ

ಆಳ್ದನೂ ಸೇವ್ಯನೂ ಅರಸನೂ ಆಗಿರುವವನು ಆಳೂ ಸೇವಕನೂ ಆಗಿರುವವನಿಗೆ ಇಂಥಾದ್ದು ಮಾಡು, ಇಂಥಾದ್ದು ಮಾಡಬೇಡ ಎಂದು ಅಪ್ಪಣೆ ಕೊಡುವದಕ್ಕೆ ಸ್ವತಂತ್ರನೂ ಅಧಿಕಾರಿಯೂ ಆಗಿದ್ದಾನೆ. ಮತ್ತು ಇಂಥಿಂಥಾ ಕೃತ್ಯಕ್ಕೆ ಇಂಥಿಂಥಾ ಫಲವೇ ಸಿಕ್ಕಬೇಕೆಂದು ಅತನೇ ನಿಯಮಿಸಿದ್ದಾನೆ. ಹಾಗೆಯೇ ತಪ್ಪದೆ ಸಂಭವಿಸುವದು ಎಲ್ಲರಿಗೂ ಅನುಭವವದೆ. ಪ್ರತಿ ಒಂದು ಕೃತ್ಯ ನಮ್ಮಿಂದ ಆಗುವಾಗ ಅಕೃತ್ಯಕರಣವಾಗಲಿ ಕೃತ್ಯಾಕರಣವಾಗಲಿ ಆಗುತ್ತದೆ; ಕೃತ್ಯಕರಣ ಅಂದರೆ ಮಾಡಬೇಕಾದ ಒಳ್ಳೇದನ್ನು ಮಾಡುವದು ಕಮ್ಮಿ ಇಲ್ಲವೆಂತಲೂ ಹೇಳಬೇಕು. ಕರ್ಮೇಂದ್ರಿಯಗಳಿಂದ ಘಟಿಸುವದು ಮಾತ್ರವಲ್ಲಾ, ಅಂತರಿಂದ್ರಿಯಗಳಿಂದಲೂ ಘಟಿಸುವಂಥಾದ್ದು, ಅಂದರೆ ದುರಾಲೋಚನೆಗಳೂ ಕೃತ್ಯವೆಂತಲೇ ದೇವರು ಎಣಿಸುತ್ತಾನೆ. ಹೀಗಾದರೆ ಕರ್ಮೇಂದ್ರಿಯಗಳ ಮತ್ತು ಅಂತರಿಂದ್ರಿಯಗಳ ಕೃತ್ಯಗಳಿಂದ ನಾವು ಒಂದು ದಿವಸಕ್ಕೆ ಎಷ್ಟಾವರ್ತಿ ದೇವರ ಅಪ್ಪಣೆಗಳನ್ನು ಮೀರುತ್ತೇವೆ? ಲೆಖ್ಖ ಮಾಡಿದವರು ಯಾರಾದರೂ ಇದ್ದಾರೋ? ಇಲ್ಲಾ. ಕೃತ್ಯಾಕರಣವೂ ಅಕೃತ್ಯಕರಣವೂ ಲೆಖ್ಖವಿತಿ ಇಲ್ಲದಷ್ಟು ಸರ್ತಿ ತನ್ನಿಂದ ಘಟಿಸಿತು, ತಾನು ಮಹಾಪಾತಕಿ ಎಂದು ಒಬ್ಬೊಬ್ಬ ಮನುಷ್ಯನು ತನ್ನ ನಡಾವಳಿಯನ್ನು ಶೋಧನೆ ಮಾಡಿದರೆ ತಿಳಿಯುವನು.

ಅರಸ್ಥಾನವದರು ಕೊಟ್ಟ ಕಟ್ಟಳೆಗಳನ್ನು ಮೀರಿದರೆ, ಪ್ರಜೆಗಳು ದಂಡನೆಗೆ ಅರ್ಹರಾಗುವದಿಲ್ಲವೋ? ಆಗುತ್ತಾರೆ; ತಪ್ಪಿಸಿಕೊಂಡು ಓಡಿಹೋಗಲಿಕ್ಕೆ ಉಪಾಯವಿಲ್ಲಾ. ನೆಲದ ಸಂಗಡ ಸಾಲ ಮಾಡಿದವನು ಎಲ್ಲಿಗೆ ಪಲಾಯನ ಮಾಡುವನು? ಹಾಗೆಯೇ ಪರಮಾತ್ಮನ ಅಪ್ಪಣೆ ಮೀರಿದವರು ಇಹದಲ್ಲಿಯೂ ಪರದಲ್ಲಿಯೂ ದಂಡನೆಗೆ ಅರ್ಹರಾಗಿದ್ದಾರೆ. ಆದರೆ ನನಗೆ ದಂಡನೆ ಬೇಡಾ, ನನ್ನ ಪಾಪಗಳು ಪರಿಹಾರವಾಗಿ ನಾನು ಶುದ್ಧನಾಗಬೇಕು, ನನಗೆ ಸುಖವು ಬೇಕು ಎಂದು ಮನುಷ್ಯನ ಮನಸ್ಸು ಅನ್ನುತ್ತದೆ. ಈ ಲೋಕವನ್ನು ಬಿಟ್ಟುಹೋಗುವ ಕಾಲವು ಬಂದಾಗ ಪುಣ್ಯವಂತರು ಪಡೆಯುವ ಸದ್ಗತಿ ತನಗೆ ಬೇಕೆಂದು ಬಯಸುತ್ತಾನೆ. ಅಂಥಾ ಸದ್ಗತಿ ಪಡೆಯಬೇಕಾದರೆ, ಪಾಪಗಳು ವಿಮೋಚನೆಯಾಗಿ ಪುಣ್ಯದ ರಾಶಿ ಇವನ ಕೈಯಲ್ಲಿರಬೇಕು.

ಇದು ಸಾಧ್ಯವಾಗುವದು ಹ್ಯಾಗೆ? ಸೂಕ್ತಗಳನ್ನು ಜಪಿಸುವದರಿಂದಲ್ಲಾ, ಸ್ನಾನವೋ ವ್ರತವೋ ಉಪವಾಸವೋ ಆಚರಿಸುವದರಿಂದಲ್ಲಾ. ಪರಮ ಕಾರುಣಿಕನೂ ಭಕ್ತವತ್ಸಲನೂ ಆಗಿರುವ ದೇವರನ್ನು ತಿಳಿದು ಅತನ ಮಹಿಮೆಯನ್ನೂ ಪರಿಶುದ್ಧತ್ವವನ್ನೂ ಪ್ರೀತಿಯನ್ನೂ ಮನವರಿತು, ಇಂಥಾ ದೇವರ ಅಪ್ಪಣೆ ಮೀರಿ ಪಾಪಿಯಾದೆನಲ್ಲಾ, ಅತನು ನೀತಿಯಿಂದ ಮಾಡತಕ್ಕ ದಂಡನೆಗೆ ನಾನು ಯೋಗ್ಯನು ಎಂದು ದುಃಖದಿಂದ ತಗ್ಗಿಸಿಕೊಂಡು ಬರಬೇಕು. ಪರಮ ಕಾರುಣಿಕನಾದ ದೇವರು ಶರಣಾಗತವತ್ಸಲನು, ಸ್ವಾಮಿ, ಶರಣ ಹೊಕ್ಕೆ, ತ್ರಾಹಿ ಎಂದು ಆಶ್ರಿತರಾದವರಿಗೆ ರಕ್ಷಕನೂ ಉದ್ಧಾರಕನೂ ಆಗಿದ್ದಾನೆ. ತಂದೆಯ ಮನೆಯಲ್ಲಿ ಉಂಡು ತಿಂದು ಸಂಪತ್ತಿನಲ್ಲಿ ಬದುಕಿದ ಮಗನು ಸೊಕ್ಕಿ, ತಂದೆಯ ಹೇಳಿಕೆಯಲ್ಲಿ ಇರಲೊಲ್ಲದೆ ದೂರ ದೇಶಕ್ಕೆ ಹೋಗಿ, ಕೈಯಲ್ಲಿ ಇದ್ದದ್ದು ಬಿದ್ದದ್ದು ಎಲ್ಲಾ ದುಂದುತನದಲ್ಲಿ ವೆಚ್ಚ ಮಾಡಿ ಬಡತನದಲ್ಲಿ ಬಿದ್ದವನು ಏನು ಯೋಚಿಸುವನು? ತಾನು ತಂದೆಯ ಮನೆಯನ್ನು ಬಿಟ್ಟು ಕೆಟ್ಟಿ, ಇನ್ನೂ ಇಲ್ಲಿದ್ದರೆ ಊಟಕ್ಕೆ ಗತಿಯಿಲ್ಲದೆ ದಾರಿಯಲ್ಲಿ ಬಿದ್ದು ಸಾಯುವೆನು,

ಎದ್ದು ತಂದೆಯ ಮನೆಗೆ ಹೋಗುತ್ತೇನೆ, ನನ್ನ ಸರ್ವ ಅಪರಾಧವನ್ನು ಕ್ಷಮೆ ಮಾಡು ಎಂದು ಬೇಡುತ್ತೇನೆ, ತಂದೆ ನನ್ನನ್ನು ಹಂಗಿಸುವವನಲ್ಲಾ, ಹೊರಗೆ ಹಾಕುವವನಲ್ಲಾ, ನಾನು ಮಗನೆಂಬ ಭಾವ ಆತನಲ್ಲಿ ಅದೆ ಎಂದು ನಿರ್ಧಾರ ಮಾಡಿ ತಂದೆಯ ಮನೆಯ ದಾರಿ ಹಿಡಿಯುವನಲ್ಲವೇ? ಹಾಗೆಯೇ ನಾವು ನಮ್ಮ ತಂದೆಯಾದ ದೇವರ ಮನೆಗೆ ಬರಬೇಕು. ನಾವು ಆತನನ್ನು ಎಲ್ಲಿ ಸ್ಮರಣೆ ಮಾಡುತ್ತೇವೋ ಅಲ್ಲೇ ಆತನ ಮನೆ. ಆತನು ನಮಗೆ ಸದಾ ಸಮೀಪಸ್ಥನು. ಶರಣರು ತನ್ನನ್ನು ಎಲ್ಲಿ ಕರೆಯುತ್ತಾರೆ, ಏನು ಮೊರೆ ಇಡುತ್ತಾರೆ ಎಂದು ಪ್ರೀತಿಯಿಂದ ಆಲೈಸುತ್ತಾನೆ. ಆತನ ಮುಂದೆ ಬಂದು ನಾವು ಹೇಳತಕ್ಕದ್ದು ಏನು—ಅಪ್ಪಾ, ತಂದೆಯೇ, ನಾನು ಮಹಾ ಪಾಪಿ, ಹಲವು ತರದಲ್ಲಿ ನಿನ್ನ ಅಪ್ಪಣೆ ವಿರುದ್ಧ ನಡೆದವನು, ನೀನು ಮಾಡು ಅಂದದ್ದನ್ನು ಮಾಡದೆ, ಮಾಡಬೇಡ ಅಂದದ್ದನ್ನು ಇಚ್ಛಾಪೂರ್ವಕವಾಗಿ ಮಾಡಿದವನು, ನನಗೆ ದಂಡನೆ ಮಾಡಬೇಡ; ನೀನಲ್ಲದೆ ಇಹಪರದಲ್ಲಿ ನನಗೆ ಗತಿ ಇಲ್ಲಾ, ನನ್ನ ಸರ್ವಾಪರಾಧಗಳನ್ನು ಕ್ಷಮೆ ಮಾಡು. ನೀನು ನಿನ್ನ ಕುಮಾರನಾದ ಯೇಸು ಕ್ರಿಸ್ತನನ್ನು ಈ ಭೂಮಿಗೆ ಕಳುಹಿಸಿದಿ; ಆತನು ನನ್ನ ಪಾಪಕ್ಕೆ ಹೊಣೆಯಾಗಿ ನಿಂತು ಮರಣವನ್ನು ಅನುಭವಿಸಿದನು. ನಾನು ಪಾಪದಿಂದ ವಿಮೋಚನೆ ಪಡುವ ಹಾಗೆ ನೀನೇ ಮಾರ್ಗ ಮಾಡಿದಿ ಎಂಬುವ ಸುವಾರ್ತೆ ಕೇಳಿದ್ದೇನೆ, ನಂಬುತ್ತೇನೆ, ಸ್ವಾಮಿ, ಶರಣಾಗತನಾದ ಪಾಪಿಯನ್ನು ಉದ್ಧರಿಸು, ಉದ್ಧರಿಸು ಎಂದು ಬೇಡಬೇಕು; ಇದೇ ಅಘಮರ್ಷಣ ಸೂಕ್ತವು.

ವೇದದಲ್ಲಿ ಬರುವ ಅಘಮರ್ಷಣಸೂಕ್ತವನ್ನು ಬ್ರಾಹ್ಮಣರು ಮಾತ್ರವೇ ಹೇಳಬಹುದು; ಅವರಿಗಾದರೂ ಅದರ ಅರ್ಥವು ತಿಳಿಯದು. ಬಲ್ಲವರಿಂದ ಅರ್ಥವನ್ನು ಕೇಳಿಕೊಂಡರೂ, ಅದರಲ್ಲಿ ಪಾಪವಿಮೋಚನೆಯ ಪ್ರಸ್ತಾಪವೇ ಇಲ್ಲಾ. ಶೂದ್ರರಂತೂ ವೇದವನ್ನು ಕಿವಿಯಾರೆ ಕೇಳುವದಕ್ಕೂ ಅಧಿಕಾರವಿಲ್ಲದವರು. ನಾವು ಮೇಲೆ ಹೇಳಿದ ಪ್ರಾರ್ಥನೆಯು ಬಡವರಿಗೂ ಬಲ್ಲಿದವರಿಗೂ ಹೆಡ್ಡರಿಗೂ ಜಾಣರಿಗೂ ಸರ್ವರಿಗೂ ಯೋಗ್ಯವಾದದ್ದು. ಈ ರೀತಿಯಲ್ಲಿ ದೈನ್ಯದಿಂದ ದೇವರನ್ನು ಮೊರೆ ಇಡುವವರೇ ಯೇಸು ಕ್ರಿಸ್ತನಿಂದ ಅಘಮರ್ಷಣ ಮಾಡಿಸಿಕೊಳ್ಳುತ್ತಾರೆ, ಶುದ್ಧರಾಗುತ್ತಾರೆ. ಆತನೇ ಅಘಮರ್ಷಣ ಮಾಡುವ ಅಧಿಕಾರವನ್ನು ಪಡೆದು ಈ ಲೋಕಕ್ಕೆ ಬಂದವನು. ಬನ್ನಿರಿ; ಯೇಸು ಕ್ರಿಸ್ತನ ಮರೆಹೊಕ್ಕು ವಿಶ್ವಾಸದಿಂದ ಅಘಮರ್ಷಣ ಸೂಕ್ತವನ್ನು ಹೇಳಿರಿ. ಆತನೇ ನಿಮ್ಮನ್ನು ಪವಿತ್ರರನ್ನು ಮಾಡಿ ಪವಿತ್ರ ರಾಜ್ಯದ ಬಾಧ್ಯತೆ ಕೊಡುವನು.

ಸಭ್ಯಸ್ಥಿಕೆ.

ಒಬ್ಬ ಹರೇದವನು ಒಬ್ಬ ಯುರೋಪೀಯ ಸಾವಕಾರನ ಬಳಿಗೆ ಹೋಗಿ, ತನಗೆ ಚಾಕರಿ ಕೊಡಿಸ ಬೇಕೆಂದು ಬೇಡಿದನು. ಸಾವಕಾರನು ಅವನನ್ನು ನೋಡಿ, ನೀನು ಬರಹ ಚನ್ನಾಗಿ ಬರೆಯುತ್ತೀಯೋ? ಎಂತ ಕೇಳಿದ್ದಕ್ಕೆ ಅವನು, ಚನ್ನಾಗಿ ಬರೆಯುತ್ತೇನೆ, ಅಂದನು. ಸಾವಕಾರನು ಲಿಪ್ಪುಪತ್ರವಿಡುವದಕ್ಕೆ ಬರುತ್ತದೋ? ಅಂತ ಕೇಳಿ

ದ್ದಕ್ಕೆ ಅವನು, ಬರುತ್ತದೆ, ಅಂದನು. ಇಷ್ಟು ವಿಚಾರಿಸಿಕೊಂಡು ಸಾವಕಾರನು ಹರೇದವನಿಗೆ, ನಮ್ಮಲ್ಲಿ ಚಾಕರಿ ಇಲ್ಲಾ, ಅಂದನು. ಹರೇದವನು ನಿರಾಶೆಯಾಗಿ ಅಲ್ಲಿಂದ ಹೋದನು. ಸಾವಕಾರನ ಸ್ನೇಹಿತನು ಇದನ್ನು ಕೇಳಿ—ಆ ಹುಡುಗನು ಗಟ್ಟಿಗನು, ನಾನು ಅವನನ್ನು ಜನ್ನಾಗಿ ಬಲ್ಲೆ, ಅವನಿಗೆ ಚಾಕರಿ ಕೊಡಬಹುದಿತ್ತು ಎಂತ ಹೇಳಲು, ಸಾವಕಾರನು ಅಂದನು—ಆ ಹರೇದವನು ನಾನು ಕೇಳಿದ ಪ್ರಶ್ನೆಗೆ ಹೌದು ಎಂತ ಅಷ್ಟೇ ಉತ್ತರ ಕೊಟ್ಟನಲ್ಲದೆ "ಅಯ್ಯಾ" ಎಂತ ಬಹುಮಾನದ ಮಾತು ಆಡಲಿಕ್ಕೆ ಕಲಿಯಲಿಲ್ಲಾ. ಚಾಕರಿ ಬೇಕೆಂದು ಬೇಡುವವನು ಸಭ್ಯಸ್ಥನಾಗಿ ಮಾತಾಡಲರಿಯದವನಾದರೆ, ನನ್ನ ಮಳಿಗೆಗೆ ಬರುವ ಗಿರಾಕಿಗಳನ್ನು ಸರಕು ಮಾಡುವನೋ? ಅವರ ಮನಸ್ಸು ಒಲಿಸಿಕೊಳ್ಳುವನೋ? ಅವನು ಗಟ್ಟಿಗನ್ನಿದ್ದಾನೆ, ಖರೆ, ಆದರೆ ಸಭ್ಯಸ್ಥಿಕೆಯು ಏನೆಂದು ತಿಳಿಯಲಿಲ್ಲ; ಆದ್ದರಿಂದ ಅವನಿಗೆ ಚಾಕರಿ ಕೊಡದೆ ಕಳಿಸಿ ಬಿಟ್ಟೆ, ಅಂದನು. ಸಭ್ಯಸ್ಥಿಕೆಯೇ ಮನುಷ್ಯನನ್ನು ಮನುಷ್ಯತ್ವಕ್ಕೆ ತರುತ್ತದೆ, ಲೋಕದಲ್ಲಿ ಬಹುಮಾನವನ್ನು ಕೊಡಿಸುತ್ತದೆ.

ದೇವರ ದಾನ.

ಮಹಾಪ್ರಾಜ್ಞನಾದ, ಸರ್ವರಿಗೆ ಉಪಕಾರಿಯಾದ ಒಬ್ಬ ವೈದ್ಯನಿದ್ದನು. ಅವನು ಕುಂಟನು. ಚಿಕ್ಕಂದಿನಲ್ಲಿ ಅವನು ಹುಡುಗರು ಆಡುವ ಮೈದಾನಿಗೆ ಹೋಗಿ, ದೂರದಲ್ಲಿ ಕೂತು, ತನ್ನ ಸಮಾನವಯಸ್ಸಿನ ಹುಡುಗರು ಒಳ್ಳೊಳ್ಳೇ ವಸ್ತ್ರಗಳನ್ನುಟ್ಟು ತೊಟ್ಟು ಸಂತೋಷದಿಂದ ಅಲ್ಲಿ ಆಡುವದನ್ನೂ ಓಡುವದನ್ನೂ ನೋಡುತ್ತಿದ್ದನು. ಎಷ್ಟೋ ಹುಡುಗರು ಧನಿಕರ ಮಕ್ಕಳಾದ್ದರಿಂದ ಸಂಜೆಗೆ ಪರಿಚಾರಕರು ಅವರನ್ನು ಗಾಡಿಯಲ್ಲಿ ಕುಂಡ್ರಿಸಿ ಮನೆಗೆ ಕರಕೊಂಡು ಹೋಗುತ್ತಿದ್ದರು. ಈ ಕುಂಟನು ಬಲಾಢ್ಯರಾದ, ಒಳ್ಳೊಳ್ಳೇ ವಸ್ತ್ರ ಧರಿಸಿದ ಪರಿಚಾರಕರಿಂದ ಸೇವೆ ಮಾಡಿಸಿಕೊಳ್ಳುವ ಹುಡುಗರನ್ನು ನೋಡಿ, ಮನಸ್ಸಿನಲ್ಲಿ ಹೆಚ್ಚು ದುಃಖ ಪಡುತ್ತಾ ಕುಗ್ಗಿಹೋಗುವನು. ಒಂದು ದಿನ ಒಬ್ಬ ಯೌವನಸ್ಥನು ಅವನನ್ನು ನೋಡಿ, ಅವನ ಅಂತಸ್ಥ ವಿದ್ಯಮಾನವನ್ನು ತಿಳಿದು, ಅವನಿಗೆ ಹೇಳಿದನು: ಹುಡುಗನೇ, ಈ ಮಕ್ಕಳಂತೆ ಆಡಬೇಕು, ಓಡಬೇಕು, ಪರಿಚಾರಕರು ಬೇಕು ಎಂತ ನೀನು ಹಾರೈಸುತ್ತಿಯಲ್ಲವೋ? ಹುಡುಗನು: ಹೌದಯ್ಯಾ, ದೇವರು ಅವರಿಗೆ ಕೈಕಾಲು ಗಟ್ಟಮುಟ್ಟಾಗಿ ಕೊಟ್ಟಿದ್ದಾನೆ, ಬೇಕಾದಷ್ಟು ಧನವನ್ನೂ ಕೊಟ್ಟಿದ್ದಾನೆ; ನನ್ನ ಅವಸ್ಥೆ ಹೀಗದೆ ಅಂದದ್ದಕ್ಕೆ, ಯೌವನಸ್ಥನು ಹೇಳಿದನು: ಖರೆ, ಆದರೆ ದೇವರು ಅವರಿಗೆ ಶರೀರದಾಢ್ಯ್ರವನ್ನೂ ಧನಸಂಪತ್ತನ್ನೂ ಕೊಟ್ಟಾಗ ಅದರ ಸಂಗಡಲೇ ಉತ್ತರವಾದಿತ್ವವನ್ನೂ ಕೊಟ್ಟಿದ್ದಾನೆ. ದೇವರು ನಮಗೆ ಕೊಟ್ಟದ್ದನ್ನು ನಾವು ಒಳ್ಳೇದರಲ್ಲಿ ಉಪಯೋಗಿಸಬೇಕು. ದೇವರು ನಿನಗೆ ಹೆಳವಾದ ಕಾಲು ಕೊಟ್ಟನು, ಇದೇ ಅವನು ನಿನಗೆ ಕೊಟ್ಟ ದಾನವೆಂದು ತಿಳಿ. ಅದನ್ನೇ ನೀನು ಉಪಯೋಗ ಮಾಡಿ ಮನುಷ್ಯತ್ವಕ್ಕೆ ಬರಬೇಕೆಂದು ಅವನು ಚಿತ್ತಯಿಸಿದ್ದಾನೆ. ದೇವರು ಕೊಟ್ಟ ದಾನವನ್ನು ಧಿಕ್ಕರಿಸಬೇಡ. ಯೌವನಸ್ಥನು ಹೇಳಿದ ಈ ಮಾತು

ಹುಡುಗನ ಮನಸ್ಸಿಗೆ ಬರಲಿಲ್ಲಾ. ಆದಾಗ್ಯೂ ಆದೇ ಆಲೋಚನೆ ಪದೇ ಪದೇ ಅವನ ಸ್ವಾಂತದಲ್ಲಿ ಮೂಡುತ್ತಾ ಇತ್ತು. ಬುದ್ಧಿವಾದ ಮಾಡಿದ ಆ ಯೌವನಸ್ಥನು ಮತ್ತೊಮ್ಮೆ ಅವನಿಗೆ ಭೇಟಿಯಾಗದಿದ್ದರೂ, ಅವನು ಹೇಳಿದ ಸಾರವುಳ್ಳ ಮಾತು ಹಸಿ ಗೋಡೆಗೆ ಹರಳು ಇಟ್ಟಂತೆ ಅವನೊಳಗೆ ಗಟ್ಟಿಯಾಗಿತ್ತು. ಆ ವಿಚಾರದ ಮೇಲೆ ಆ ಹುಡುಗನು ದೇವರಲ್ಲಿ ಭರವಸವಿಟ್ಟು, ದೇವರು ಕೊಟ್ಟ ದಾನವನ್ನು ಒಳ್ಳೇದರಲ್ಲಿ ಉಪಯೋಗ ಮಾಡಬೇಕೆಂಬ ತಾತ್ಪರ್ಯದಿಂದ ವಿದ್ಯಾಭ್ಯಾಸ ಮಾಡಿ ಪ್ರಖ್ಯಾತ ವೈದ್ಯನಾದನು. ಅವನ ವೈದ್ಯತ್ವದಿಂದ ಸಾವಿರಾರು ಮನುಷ್ಯರು ಉಪಕಾರವನ್ನು ಹೊಂದಿದರು. ನಾನು ಹೆಳವ, ನನ್ನಿಂದ ಏನಾದೀತು? ಎಂದು ದಡ್ಡನಾಗುತ್ತಿದ್ದರೆ, ಪರರಿಗೂ ತನಗೂ ಭಾರವಾಗುತ್ತಿದ್ದನು. ದೇವರು ನಿನಗೆ ಕೊಟ್ಟ ದಾನವನ್ನು ಚನ್ನಾಗಿ ಪ್ರಯೋಗ ಮಾಡಿ ಸರ್ವರಿಗೂ ಹಿತಕಾರಿಯಾಗು, ದೇವರನ್ನು ಮಹಿಮೆ ಪಡಿಸು.

ಚೀನಿ ಮಹಾರಾಣಿ.

ಈಗ ಚೀನ ಸಾಮ್ರಾಜ್ಯವನ್ನು ಆಳುವ ಮಹಾರಾಜನ ತಾಯಿಯ ವೃತ್ತಾಂತವು ಆಶ್ಚರ್ಯವಾಗಿದೆ. ಅವಳು ರಾಜಧಾನಿಯಾದ ಪೆಕಿಂಗ ಪಟ್ಟಣಕ್ಕೆ ಸಮೀಪವಾದ ಹಳ್ಳಿಯಲ್ಲಿ ಕೇವಲ ಬಡ ಕುಟುಂಬದಲ್ಲಿ ಹುಟ್ಟಿದಳು. ಅವಳು ಕಡು ಚೆಲುವೆ. ಅವಳ ತಾಯಿತಂದೆಗಳು ಎಷ್ಟು ಬಡವರೆಂದರೆ, ಒಂದೊಂದು ದಿನ ಮಧ್ಯಾಹ್ನಕಾಲಕ್ಕೆ ಅವರಿಗೆ ಅನ್ನದ ತತ್ವಾರವಾಗುವದು. ಹೀಗಿರುತ್ತಾ ಅವಳು ಒಮ್ಮೆ ತನ್ನ ಮನೆಯ ದಾರಿದ್ರ್ಯವನ್ನು ನೋಡಿ--ನೀವು ನನ್ನನ್ನು ಯಾರಿಗಾದರೂ ಮಾರಿರಿ ಎಂದು ಅವರಿಗೆ ಹೇಳಲಾಗಿ ಅವರು ಮಹಾ ರೂಪವತಿಯಾದ ಮಗಳನ್ನು ದೊಡ್ಡ ಶ್ರೀಮಂತನಿಗೆ ಮಾರಿದರು. ಶ್ರೀಮಂತನು ಹುಡುಗಿಯ ಸೌಂದರ್ಯವನ್ನೂ ಚಾತುರ್ಯವನ್ನೂ ನೋಡಿ ಅವಳನ್ನು ಸಾಕಣೆಮಗಳಾಗಿ ಸಂಗೋಪನೆ ಮಾಡಿದನು. ಕೆಲವು ದಿನಗಳ ಮೇಲೆ ಶ್ರೀಮಂತನು ಮಹಾರಾಜನ ಭೇಟಿಗೆ ಹೋಗುವಾಗ್ಯೆ ಹುಡುಗಿಯನ್ನೂ ಕರ ಕೊಂಡು ಹೋಗಿ, ಮಹಾರಾಜನಿಗೆ ಕಾಣಿಕೆಯಾಗಿ ಸಮರ್ಪಣೆ ಮಾಡಿದನು. ಮಹಾ ರಾಜನು ಅವಳ ಚಲುವತನಕ್ಕೂ ಬುದ್ಧಿಗೂ ಮೆಚ್ಚಿ ಅವಳನ್ನು ಮದುವೆಯಾಗಿ ಪಟ್ಟದ ಅರಸಿಯಾಗಿ ಮಾಡಿದನು. ಹೀಗೆ ಹೊಟ್ಟೆಕೂಳಿಗೆ ತತ್ವಾರ ಪಡುತ್ತಿದ್ದ ತಾಯಿತಂದೆ ಗಳಲ್ಲಿ ಹುಟ್ಟಿ, ಶ್ರೀಮಂತನ ಮನೆಯಲ್ಲಿ ಕ್ರಯಕ್ಕೆ ಕೊಂಡ ದಾಸಿಯಂತಿದ್ದ ಹೆಣ್ಣುಮ ಗಳು ಮಹಾರಾಜನ ಪಟ್ಟದ ರಾಣಿಯಾಗಿ, ಕಡೆಗೆ ಈಗ ರಾಜ್ಯಭಾರ ಮಾಡುವ ಮಹಾ ರಾಜನ ತಾಯಿಯಾದಳು.

परमेश्वर उवाः स्वामिन् सर्वत्र पृथिवीतले ।
कीदृगादरणीयं हि स्वदीयं नाम विद्यते ।
तव प्रतापदानेन शोभते व्योममण्डलं ॥

ರ ಸೀ ತೀ ವೆ ೯.

(೧೮೮೯ನೇ ಇಸವಿ Iನೇ ಆಕ್ಟಿನಲ್ಲಿರುವ ಪಟ್ಟಿಯಿಂದ ಎತ್ತಿ ತೆಗದು ಸಂಕ್ಷೇಪಿಸಿದ್ದು.)

ದಸ್ತಾವೇಜಿನ ವಿವರಣೆ:	ಸ್ಟಾಂಪ್ ಹಾಸಲು:
1. (Acknowledgment) ಸಾಲದ ಒಪ್ಪಿಗೆ ಪತ್ರ . . .	೧ ಆಣೆ
11. (Bill of Exchange or Promissory Note) ಬಿಲ್ ಒಫ್ ಎಕ್ಸ್‌ಚೇಂಜ್ ಯಾ ಪ್ರೊಮಿಸರಿ ನೋಟು (ಅಂದರೆ ವಟಾಯಿಸ ತಕ್ಕ ಪತ್ರ, ಇದರಲ್ಲಿ ಚಕ್ಕ್, ದಸ್ತಾವೇಜು, ಬ್ಯೇಂಕನೋಟು, ಇಲ್ಲವೆ ಕರೆನ್ಸಿನೋಟು ಸೇರುವದಿಲ್ಲ):—	
a) ಕೇಳಿದಾಗಲೇ ಪಾವತಿ ಆಗ ತಕ್ಕದ್ದಾಗಿ, ಅದರ ಮೌಲ್ಯ ೨೦ ರೂ ಪಾಯಿಗೆ ಮಿಂಾರಿದರೆ	೧ ಆಣೆ
b) ಕೇಳಿದಾಗಲೇ ಅಲ್ಲದೆ ಅನ್ಯಥಾ ಪಾವತಿಯಾಗ ತಕ್ಕದ್ದಾಗಿ, ಬರದ ಯಾ ಕಂಡ ತಾರೀಕಿನಿಂದ ಒಂದು ಸಂವತ್ಸರಕ್ಕೆ ಮಿಾರದ ವಾಯಿದೆ ಇದ್ದರೆ:	ಒಂದಕ್ಕೆ: ರೂ. ಆ. / ದುಬಾರೆಪ್ರತಿಗೆ: ರೂ. ಆ. / ತಿದಾರೆಪ್ರತಿಗೆ: ರೂ. ಆ.
ಅದರ ಮೌಲ್ಯ ರೂಪಾಯಿ ೨೦೦ಕ್ಕೆ ಮಿಾರದಿದ್ದರೆ	೦ ೩ / ೦ ೧ / ೦ ೧
ರೂಪಾಯಿ ೨೦೦ಕ್ಕೆ ಮಿಾರಿ ೪೦೦ ,,	೦ ೪ / ೦ ೨ / ೦ ೨
,, ೪೦೦ ,, ೬೦೦ ,,	೦ ೬ / ೦ ೩ / ೦ ೩
,, ೬೦೦ ,, ೧೦೦೦ ,,	೦ ೧೦ / ೦ ೫ / ೦ ೪
,, ೧೦೦೦ ,, ೧೩೦೦ ,,	೦ ೧೩ / ೦ ೬ / ೦ ೪
,, ೧೩೦೦ ,, ೧೬೦೦ ,,	೧ ೦ / ೦ ೮ / ೦ ೬
,, ೧೬೦೦ ,, ೩೫೦೦ ,,	೧ ೯ / ೦ ೧೩ / ೦ ೮
೩೫೦೦ ರೂಪಾಯಿ ಮೇಲೆ ೧೦೦೦೦ ರೂ. ವರೆಗೆ ಪ್ರತಿ ರೂ. ೩೫೦೦ಕ್ಕೆ ಯಾ ಅದರ ಅಂತಕ್ಕೆ.	೧ ೯ / ೦ ೧೩ / ೦ ೮
೧೦೦೦೦ ರೂಪಾಯಿ ಮೇಲೆ ೬೦೦೦೦ ರೂಪಾಯಿ ವರೆಗೆ ಪ್ರತಿ ರೂಪಾಯಿ ೫೦೦೦ಕ್ಕೆ ಯಾ ಅದರ ಅಂತಕ್ಕೆ. . .	೨ ೦ / ೧ ೮ / ೧ ೦
೬೦೦೦೦ ರೂಪಾಯಿ ಮೇಲೆ ಪ್ರತಿ ರೂಪಾಯಿ ೧೦೦೦೦ಕ್ಕೆ ಯಾ ಅದರ ಅಂತಕ್ಕೆ	೬ ೦ / ೫ ೦ / ೩ ೦
c) ಬರದ ತಾರೀಕಿನಿಂದ ಇಲ್ಲವೆ ಕಂಡ ತಾರೀಕಿನಿಂದ ಒಂದು ಸಂವತ್ಸರದ ಮೇಲೆ ಪಾವತಿ ಆಗ ತಕ್ಕದ್ದಾದರೆ—	೧೩ನೇ ಅಂಕೆಯಲ್ಲಿ ಹೇಳಿರುವಷ್ಟೇ ಠಸೆ
12. (Bill of Lading) ಬಿಲ್ ಒಫ್ ಲೇಡಿಂಗ್ ಎಂಬ ಸಾಮಾನು (ಜಹಜಿನ ಮೇಲೆ) ಭರಾವಣಿಚೀಟು	೪ ಆಣೆ
13. ದಸ್ತಾವೇಜು (ಈ ಆಕ್ಟಿನಿಂದ ಅಥವಾ ೧೮೭೦ನೇ ಇಸ್ವಿ ಕೋರ್ಟ್‌ಫೀಸ್ ಆಕ್ಟಿನಿಂದ ಅನ್ಯಥಾ ನಿಬಂಧಿಸಲ್ಪಡದೆ ಇರುವಂಥಾದ್ದು):—	
ಇದರ ಮೊಬಲಗು ಅಥವಾ ಮೌಲ್ಯ೧೦ ರೂಪಾಯಿಗೆ ಮಿಾರದಿದ್ದರೆ	೨ ಆಣೆ
೧೦ ರೂಪಾಯಿಗೆ ಮಿಾರಿ ೫೦ ರೂಪಾಯಿಗೆ ಮಿಾರದಿದ್ದರೆ. .	೪ ಆಣೆ
೫೦ ,, ,, ೧೦೦ ,, ,, . .	೮ ಆಣೆ
೧೦೦ರೂ.ಮೇಲೆ ೧೦೦೦ರೂ. ವರೆಗೆಪ್ರತಿ ರೂ.೧೦೦ಕ್ಕೆ ಯಾ ಅದರಂತಕ್ಕೆ	೮ ಆಣೆ
೧೦೦೦,, ,, ಪ್ರತಿ ರೂ. ೫೦೦ಕ್ಕೆ ಯಾ ಅದರ ಅಂತಕ್ಕೆ . .	೩ ರೂಪಾಯಿ ೮ ಆಣೆ
14. (Bond or Mortgage-Deed) ದಸ್ತಾವೇಜು ಅಥವಾ ಅಡವು ದಸ್ತಾವೇಜು (ಒಂದು ಉದ್ಯೋಗ ಯಾ ಕೆಲಸವನ್ನು ಸರಿಯಾಗಿ ನೆರವೇರಿಸ ತಕ್ಕ ಬಗ್ಗೆ ಅಥವಾ ತದ್ವಾರಾ ಬಂದ ಹಣವನ್ನು ಕುರಿತು ಸಮಾಧಾನ ಪಡಿಸ ತಕ್ಕ ಬಗ್ಗೆ ಜವಾಬದಾರಿಯಾಗಿ ಬರಕೊಡುವಂಥಾದ್ದು):—	
a) ಇದರ ಮೊಬಲಗು ೧೦೦೦ ರೂಪಾಯಿಗೆ ಮಿಾರದಿದ್ದರೆ—	13ನೇ ಅಂಕೆಯಲ್ಲಿ ಹೇಳಿರುವಷ್ಟೆ ಠಸೆ
b) ಇತರ ಸಂಗತಿಯಲ್ಲಿ	೫ ರೂಪಾಯಿ

16. ಏಲಂ ಮಾಡಿದ ಆಸ್ತಿ ಬಗ್ಗೆ ಕೊಡ ತಕ್ಕ ದರಖಾಸ್ತಪಟ್ಟಿ—21ನೇ ಅಂಕೆಯಲ್ಲಿ ಹೇಳಿರುವಷ್ಟೆ ಠಸೆ

19. ಇಪ್ಪತ್ತು ರೂಪಾಯಿಗೆ ಮೀರಿದ ಹಣಕ್ಕೆ (Cheque) ಚೆಕ್ಕ್ ಯಾನೆ ಹುಂಡಿ (ಇದು ಹಣ ಕೇಳಿದಾಗಲೇ ಕೊಡ ತಕ್ಕದ್ದಾಗಿದ್ದರೆ). . ೧ ಆಣೆ

21. (Conveyance) ಕೊನ್ವೆಯನ್ಸ್ ಯಾನೆ ಕ್ರಯಸಾಧನ, ದಾನಸಾಧನ; ಇದರಲ್ಲಿ ಕಾಣಿಸಿದ ಪ್ರತಿಫಲದ ಮೊಬಲಗು

ರೂ. ೫೦ಕ್ಕೆ ಮೀರದಿದ್ದರೆ . . . . . ೯ ಆಣೆ

" ೫೦ ಮೀರಿ ರೂ. ೧೦೦ಕ್ಕೆ ಮೀರದಿದ್ದರೆ . . . . ೧ ರೂಪಾಯಿ

" ೧೦೦ " " ೧೦೦೦ವರೆಗೆ ಪ್ರತಿ ರೂ. ೧೦೦ಕ್ಕೆ ಯಾ ಅದರ ಅಂತಕ್ಕೆ ೧ ರೂಪಾಯಿ

" ೧೦೦೦ " " ಪ್ರತಿ ೫೦೦ ರೂಪಾಯಿಗೆ ಯಾ ಅದರ ಅಂತಕ್ಕೆ ೫ ರೂಪಾಯಿ

29. ಮೂಲ ದಸ್ತಾವೇಜುಗಳನ್ನು ಇಲ್ಲವೆ ಬೇರೆ ಬಿಲೆಯುಳ್ಳ ಸಾಧನಗಳನ್ನು ತೀವಣಿ ಇಟ್ಟು, ಅಥವಾ ಚರಸೊತ್ತು ಈಡು ಇಟ್ಟು ಮಾಡಿದ ಸಾಲವನ್ನು ತಿರಿಗಿ ಪಾವತಿ ಮಾಡುವ ಬಂದೋಬಸ್ತಿಗಾಗಿ ಮಾಡುವ ಕರಾರನ್ನು ತೋರಿಸುವ ದಸ್ತಾವೇಜು:—

a) ಸಾಲದ ಹಣವು ಅಂಥಾ ದಸ್ತಾವೇಜನ ತಾರೀಕಿನಿಂದ ಮೂರು ತಿಂಗಳ ಮೇಲೆ ಒಂದು ವರ್ಷದೊಳಗೆ ಸಂದಾಯವಾಗ ತಕ್ಕಂಥಾದ್ದಾಗಿದ್ದರೆ } 11ನೇ ಅಂಕೆಯ *b*ಯಲ್ಲಿ ಹೇಳಿರುವಷ್ಟೆ ಠಸೆ

b) ೩ ತಿಂಗಳೊಳಗೆ ಸಂದಾಯವಾಗ ತಕ್ಕಂಥಾದ್ದಾಗಿದ್ದರೆ— 11ನೇ *b*ಯಲ್ಲಿಯ ಠಸೆಯ ಅರೆವಾಸಿ

30. ಅಡವಿನ ಸೊತ್ತಿನ ಮೇಲೆ ಇನ್ನೂ ಸಾಲ ಹೊರಿಸಿ ಉಂಟಾಗುವ ದಸ್ತಾವೇಜು:— *a)* ಪ್ರಥಮತಾ ಆದ ಅಡವು 44ನೇ ಅಂಕೆಯ *a*ಯಲ್ಲಿ ಸೂಚಿಸಿರುವಂಥಾದ್ದಾಗಿದ್ದರೆ . . . . 21ನೇ ಅಂಕೆಯಲ್ಲಿ ಹೇಳಿದ ಕ್ರಯಸಾಧನದಷ್ಟೆ ಠಸೆ

b) ಅಂಥಾ ಅಡವು 44ನೇ ಅಂಕೆಯ *b*ಯಲ್ಲಿ ಹೇಳಿದಂಥಾದ್ದಾಗಿದ್ದರೆ, 13ನೇ ಅಂಕೆಯಲ್ಲಿರುವಷ್ಟೆ ಠಸೆ

32. ಪಾಲುಗಾರಿಕೇ ದಸ್ತಾವೇಜು. . . . . ೧೦ ರೂಪಾಯಿ

33. ಪಾಲುಗಾರಿಕೆ ಅಗಲಿಕೇ ದಸ್ತಾವೇಜು . . . . ೫ ರೂಪಾಯಿ

35. ಸೊತ್ತಿನ ಬದಲಾವಣೆ ಪತ್ರ— } ಅಂಥಾ ಸೊತ್ತಿನ ಕಿಮ್ಮತಿನ ಬಗ್ಗೆ 21ನೇ

36. ದಾನಪತ್ರ— } ಅಂಕೆಯಲ್ಲಿ ಹೇಳಿರುವಷ್ಟೆ ಠಸೆ.

37. ಪಾಲುಪಟ್ಟಿ:—ಇದರಲ್ಲಿ ಪಾಲು ಮಾಡಿಕೊಂಡ ಆಸ್ತಿಗೆ ಕಾಣಿಸಿದ ಮೌಲ್ಯದ ಮೇಲೆ (13ನೇ ಅಂಕೆಯಲ್ಲಿ) ದಸ್ತಾವೇಜಿಗೆ ಹೇಳಿರುವಷ್ಟೆ ಠಸೆ.

39. ಗೇಣಿಚೀಟು (ಗೇಣೀ ಬಗ್ಗೆ ಮಾಡುವ ಕರಾರು ಸಹ):—

a) ಗೇಣೀ ಮೊಬಲಗು ನಿಶ್ಚಯವಿದ್ದು, ಪ್ರೀಮಿಯಮ್ ಯಾನೆ ವಟ್ಟ ಇಲ್ಲದೆ, ಗೇಣಿ ವಾಯಿದೆ ಇಂಥಾದ್ದೆಂದು ನಮೂದಿಸಲ್ಪಟ್ಟು, ಸದರಿ ವಾಯಿದೆ

ಒಂದು ವರುಷಕ್ಕೆ ಮೀರದಿದ್ದರೆ . . . . . 13ನೇ ಅಂಕೆಯಲ್ಲಿ ಹೇಳಿರುವಷ್ಟೆ ಠಸೆ

ಒಂದು ವರುಷಕ್ಕೆ ಮೀರಿ, ೩ ವರ್ಷಕ್ಕೆ ಮೀರದಿದ್ದರೆ—ಸರಾಸರಿ ೧ ವರ್ಷದ ಗೇಣಿಗೆ 13ನೇ ಅಂಕೆಯಲ್ಲಿ ಹೇಳಿರುವಷ್ಟೆ ಠಸೆ

ಮೂರು ವರ್ಷಕ್ಕೆ ಮೀರಿ ಇದ್ದರೆ—ಸರಾಸರಿ ಒಂದು ವರ್ಷಕ್ಕೆ ಬೀಳುವ ಗೇಣಿಗೆ 21ನೇ ಅಂಕೆಯಲ್ಲಿ ಹೇಳಿರುವಷ್ಟೆ ಠಸೆ.

b) ಗೇಣಿ ಮೊಬಲಗು ನಿಶ್ಚಯವಿದ್ದು, ವಟ್ಟ ಕೊಡುವದಿಲ್ಲದೆ, ಗೇಣಿಚೀಟಿನ ವಾಯಿದೆ ಇಂಥಾದ್ದೆಂದು ನಿರಖು ಇಲ್ಲದಿದ್ದರೆ ಪ್ರಥಮದ ೧೦ ವರ್ಷದಲ್ಲಿ ಸರಾಸರಿ ವರ್ಷ ೧ಕ್ಕೆ ಬೀಳುವ ಗೇಣಿಗೆ 21ನೇ ಅಂಕೆಯಲ್ಲಿ ಹೇಳಿರುವಷ್ಟೆ ಠಸೆ

c) ಒಂದು ದಂಡ ಅಥವಾ ಪ್ರೀಮಿಯಮ್ ಯಾನೆ ವಟ್ಟ ಸಲುವಾಗಿ ಗೇಣಿಗೆ ಕೊಡೋಣಾಗಿ, ಗೇಣಿ ಏನಾದರೂ ಬರುವಂಥಾದ್ದು ಇಲ್ಲದಿದ್ದರೆ— ಗೇಣಿಚೀಟಿನಲ್ಲಿ ನಮೂದಿಸಿದ ಸದರಿ ದಂಡ ಯಾ ವಟ್ಟದ ಮೊಬಲಗಿಗೆ 21ನೇ ಅಂಕೆಯಲ್ಲಿ ಹೇಳಿರುವಷ್ಟೆ ಠಸೆ

d) ಗೇಣಿ ಬರುವದರ ಹೊರ್ತು ದಂಡ ಯಾ ಪ್ರೀಮಿಯಮ್ ಯಾನೆ ವಟ್ಟದ ಸಲುವಾಗಿ ಸಹಾ ಗೇಣಿಗೆ ಕೊಡೋಣಾಗಿದ್ದರೆ— ಗೇಣೀ ಬಗ್ಗೆ ಎಷ್ಟು ಠಸೆ ಬೇಕಾದೀತೋ ಅಷ್ಟು ಹಾಸಲು, ಮತ್ತು ಸದರಿ ದಂಡದ ಯಾ ವಟ್ಟದ ಮೊಬಲಗಿಗೆ 21ನೇ ಅಂಕೆಯಲ್ಲಿ ಹೇಳಿರುವಷ್ಟು ಠಸೆ ಸಹ.

41. (Letter of Credit) ಲೆಟರ್ ಒಫ್ ಕ್ರೆಡಿಟ್ (ಅಂದರೆ ಇದು ಯಾರ ಹೆಸರಿನಲ್ಲಿ ಬರಿಯಲ್ಪಡುತ್ತದೋ ಆತನಿಗೆ ನಂಬಿಕೆಯ ಮೇಲೆ ಸಾಲ ಕೊಡುವಂತೆ ಮತ್ತೊಬ್ಬನಿಗೆ ಅಧಿಕಾರ ಕೊಡುವಂಥಾ ದಸ್ತಾವೇಜು). ೧ ಆಣೆ

43. ಒಂದು ಕಂಪೆನಿಯ ಸಂಘದ ಯಾದಾಸ್ತು . . . ೧೫ ರೂಪಾಯಿ

44. ಅಡಮಾನಸಾಧನ (14, 15, 29, ಅಥವಾ 55ನೇ ಅಂಕೆಗಳಲ್ಲಿ ಎಣ್ಣಡಿಸದೆ ಇರುವಂಥಾ ತರದ್ದು):—

a) ಸಾಧನ ಬರೆದು ಕೊಡುವ ಸಮಯದಲ್ಲಿ ಆದರಲ್ಲಿ ನಮೂದಿಸಿದ ಸೊತ್ತನ್ನು ಯಾ ಆದರ ಅಂಶವನ್ನು ಅಡವುದಾರಗೆ ಒಪ್ಪಿಸಿಕೊಟ್ಟರೆ, ಇಲ್ಲವೆ ಒಪ್ಪಿಸಿಕೊಡುವರೆ ಸಮ್ಮತಿಸಿದರೆ . . . . . 21ನೇ ಅಂಕೆಯಲ್ಲಿ ಹೇಳಿರುವಷ್ಟೆ ಠಸೆ

b) ಸದರಿ ಸೊತ್ತಿನ ಸ್ವಾಧೀನತೆ ಬಿಟ್ಟುಕೊಡದೆ ಯಾ ಒಪ್ಪಿಸಲಿಕ್ಕೆ ಸಮ್ಮತಿಸದೆ ಇದ್ದ ಪಕ್ಷಕ್ಕೆ— . . . . . 13ನೇ ಅಂಕೆಯಲ್ಲಿ ಹೇಳಿರುವಷ್ಟೆ ಠಸೆ

46. (Note or Memorandum) ನೋಟು ಯಾ ಮೆಮೊರಂಡಮ್ (ಅಂದರೆ ಒಬ್ಬ ದಲಾಲ ಯಾ ಮುತ್ತಾಲಿಕನು ತನ್ನ ಧನಿಗೋಸ್ಕರ ಇಪ್ಪತ್ತು ರೂಪಾಯಿಗೆ ಏರಿದ ಯಾವ ಜೀನಸನ್ನಾಗಲೀ ಕೊಂಡಿರುವದಾಗಿ ಇಲ್ಲವೆ ಮಾರಿದ್ದಾಗಿ ಸದರಿ ಧನಿಗೆ ತಿಳಿಸುವ ಚೀಟು ಯಾ ಯಾದಾಸ್ತು) ೧ ಆಣೆ

50. (Power-of-Attorney) ಪವರ್-ಒಫ್-ಎಟ್ಟರ್ನಿ (ಮೊಕ್ತಾರನಾಮೆ):—

a) ಒಂದೇ ಕಾರ್ಯಕ್ಕೆ ಸಂಬಂಧವಾದ ಒಂದು ಯಾ ಅನೇಕ ದಸ್ತಾವೇಜುಗಳನ್ನು ರಿಜಿಸ್ತ್ರೀ ಬಗ್ಯೆ ಹಾಜರು ಪಡಿಸುವದಕ್ಕೆ ಪೂರ್ತಿ ಉಂಟಾದರೆ ೯ ಆಣೆ

b) ಬೇರೆ ಯಾವದಾದರೂ ಒಂದೇ ಕಾರ್ಯಕ್ಕಾಗಿ ಒಬ್ಬ ಯಾ ಅನೇಕ ಜನರಿಗೆ ಅಧಿಕಾರ ಕೊಡುವದಾದರೆ . . . . . ೧ ರೂಪಾಯಿ

c) ಸಮಷ್ಟಿಯಾಗಿ ಯಾ ಬೇರೆ ಬೇರೆಯಾಗಿ ಒಂದಕ್ಕಿಂತ ಹೆಚ್ಚು ಕಾರ್ಯಗಳಲ್ಲಿ ಆಗಲಿ ಸಾಮಾನ್ಯವಾಗಿ ಆಗಲಿ ಪ್ರವರ್ತಿಸಲಿಕ್ಕೆ *ಕ್ಕೆ ಏರಿದಷ್ಟು ಮಂದಿಗೆ ಅಧಿಕಾರ ಕೊಡುವದಾದರೆ . . . . . * ರೂಪಾಯಿ

d) ಸಮಷ್ಟಿಯಾಗಿ ಯಾ ಬೇರೆ ಬೇರೆಯಾಗಿ ಹೆಚ್ಚು ಕಾರ್ಯಗಳಲ್ಲಿ ಆಗಲಿ ಸಾಮಾನ್ಯವಾಗಿ ಆಗಲಿ ಪ್ರವರ್ತಿಸಲಿಕ್ಕೆ *ಕ್ಕೆ ಏರಿ ೧೦ಕ್ಕೆ ಏರದೆ ಇರುವ ಜನರಿಗೆ ಅಧಿಕಾರ ಕೊಡುವದಾದರೆ . . . . ೧೦ ರೂಪಾಯಿ

e) ಇತರ ಸಂಗತಿಯಲ್ಲಿ . . . . ಅಧಿಕಾರ ಹೊಂದುವ ಪ್ರತಿ ಮನುಷ್ಯನಿಗಾಗಿ ೧ ರೂಪಾಯಿ

52. ಪೊಬಲಗು ಯಾ ಮೌಲ್ಯ ಇಪ್ಪತ್ತು ರೂಪಾಯಿಗೆ ಏರಿದ ಯಾವ ಹಣವನ್ನಾಗಲೀ ಸೊತ್ತನ್ನಾಗಲೀ ಬಂದದ್ದಕ್ಕೆ ಕೊಡುವ ರಶೀದಿ . ೧ ಆಣೆ

53. ಅಡವಿನ ಸೊತ್ತನ್ನು ತಿರಿಗಿ ಕೊಡುವ ದಸ್ತಾವೇಜು:—

a) ಅಡವಿನ ಹಣ ೧೦೦೦ ರೂಪಾಯಿಗೆ ಏರದಿದ್ದರೆ. . 21ನೇ ಅಂಕೆಯಲ್ಲಿ ಹೇಳಿರುವಷ್ಟೆ ಠಸೆ

b) ಇತರ ಸಂಗತಿಯಲ್ಲಿ . . . . . ೧೦ ರೂಪಾಯಿ

54. (Release) ರಿಲೀಜ್ ಯಾನೆ ಖುಲಾಸಪತ್ರ (ಅಂದರೆ ಒಬ್ಬನು ಮತ್ತೊಬ್ಬನ ಮೇಲಾಗಲಿ ಫಲಾನೆ ಸೊತ್ತಿನ ಮೇಲಾಗಲಿ ತನಗಿರುವ ಬಾಧ್ಯತೆಯನ್ನು ಬಿಟ್ಟುಬಿಡುವ ದಸ್ತಾವೇಜು):—

a) ಬಾಧ್ಯತೆಯ ಪೊಬಲಗು ೧೦೦೦ರೂಪಾಯಿಗೆ ಏರದಿದ್ದರೆ—13ನೇ ಅಂಕೆಯಲ್ಲಿ ಹೇಳಿರುವಷ್ಟೆ ಠಸೆ

b) ಇತರ ಸಂಗತಿಯಲ್ಲಿ . . . . . * ರೂಪಾಯಿ

57. (Settlement) ಸೆಟ್ಲ್‌ಮೆಂಟ ಯಾನೆ ವ್ಯವಸ್ಥಾಪತ್ರ— 13ನೇ ಅಂಕೆಯಲ್ಲಿ ಹೇಳಿರುವಷ್ಟೆ ಠಸೆ

58. (Shipping Order) ಸಿಪ್ಪಿಂಗ್ ಒರ್ಡರ್ (ಅಂದರೆ ಜಹಜಿನ ಮೇಲೆ ಜೀನಸುಗಳನ್ನು ವೈಯುವದಕ್ಕೆ ಕೊಡುವ ಪತ್ರ) . . . . ೧ ಆಣೆ

59. ಗೇಣಿ ಸೋಡಚೀಟು:—

a) ಗೇಣಿಚೀಟಿನ ಠಸೆ * ರೂಪಾಯಿಗೆ ಏರದಿದ್ದರೆ— ಗೇಣಿಚೀಟಿನಷ್ಟೆ ಠಸೆ

b) ಇತರ ಸಂಗತಿಯಲ್ಲಿ . . . . . * ರೂಪಾಯಿ

60. (Transfer) ಟ್ರಾನ್ಸ್‌ಫರ್ (ಪರಭಾರೆಪತ್ರ ಯಾ ಮೇಲ್ವಾಧನ):—

a) ಯಾವದೊಂದು ಕಂಪನಿಯ ಯಾ ಸಂಘದ ಪಾಲುಗಳ— 21ನೇ ಅಂಕೆಯಲ್ಲಿ ಕಾಣಿಸಿದ ಹಾಸಲಿನ ಕಾಲವಾಸಿ.

b) ದಸ್ತಾವೇಜು, ಗೇಣಿ, ಅಡವು, ಯಾ ಪೊಲಿಸಿ ಆಫ್ ಇನ್ಶ್ಯೂರೆನ್ಸ (ಬೀಮ ಉತ್ರಾಯಿಸೋಣ)ದ ಏನೊಂದು ಸಮ್ಮಂಧ—ಆ ದಸ್ತಾವೇಜು, ಗೇಣಿ, ಅಡವುದಸ್ತಾವೇಜು, ಯಾ ಪೊಲಿಸಿ ಆಫ್ ಇನ್ಶ್ಯೂರೆನ್ಸ ಹಾಸಲು * ರೂಪಾಯಿಗೆ ಏರದಿದ್ದರೆ, ಆದರಷ್ಟೆ ಹಾಸಲು

ಇತರ ಸಂಗತಿಯಲ್ಲಿ— * ರೂಪಾಯಿ

ಠಸೇ ಹಾಸಲು ಮಾಫಿ ಇರುವ ಕೆಲವು ದಸ್ತಾವೇಜುಗಳು.

೨. *a*) 46ನೇ ಅಂಕೆಯಲ್ಲಿ ಹೇಳಿರುವ ನೋಟು ಯಾ ಮೆಮೊರಂಡಮ್ ಸ್ವಭಾವದ್ದಾಗಿರದೆ, ಯಾವ ದೊಂದು ಚರಸೊತ್ತು ಯಾ ಸರಕಿನ ಮಾರಾಟದ ಸಮ್ಮಂಧವಾಗುವ ಯಾವದೊಂದು ಕರಾರು ಯಾ ಕರಾರಿನ ಯಾದಾಸ್ತು.

೧೬. ಗೇಣಿಚೀಟುಗಳೂ ಅವುಗಳ ಎದುರ್ನುಡಿಗಳೂ:—*b*) ಯಾವ ದಂಡವಾಗಲೀ ವಟ್ಟವಾಗಲೀ ಕೊಡದೆ ಒಬ್ಬ ವ್ಯವಸಾಯಗಾರನು ಬರಕೊಡುವ ಗೇಣಿಚೀಟು; ಇದರಲ್ಲಿ ನಿರಖು ವಾಯಿದೆ ನಮೂದಿಸಿದ್ದರೆ ಮತ್ತು ಸದರಿ ವಾಯಿದೆ ಒಂದು ಸಂವತ್ಸರಕ್ಕೆ ಮೀರದೆ ಇದ್ದರೆ, ಅಥವಾ ಅದರ ವಸ್ತಾವಧಿ ಒಟ್ಟಾರೆ ಗೇಣಿ ೧೦೦ ರೂಪಾಯಿಗೆ ಮೀರದಿದ್ದರೆ; *c*) ಒಬ್ಬ ವ್ಯವಸಾಯಗಾರನಿಗೆ ಕೊಡುವ ಗೇಣಿಚೀಟಿನ ಎದುರ್ನುಡಿ.

೧೫. ರಶೀದಿ:—*a*) ಕ್ರಮವಾಗಿ ಠಸೇ ಮೇಲೆ ಆದಂಥಾ ಯಾವ ದಸ್ತಾವೇಜನಲ್ಲಾಗಲೀ ನಮೂದಿಸಿರುವ ಪ್ರತಿಫಲ ಬಂತೆಂದು ಅಥವಾ ಅದರಿಂದ ಭದ್ರ ಪಡಿಸಿರುವ ಅಸಲು ಆಗಲೀ ಬಡ್ಡಿ ಆಗಲೀ ವಸ್ತಾವನವಾಗಲೀ ಕಾಲಾವಧಿ ಸಂದಾಯವಾಗ ತಕ್ಕ ಬೇರೆ ಹಣವಾಗಲೀ ಬಂತೆಂದು ಕೊಡುವ ರಶೀದಿ; *b*) ಪ್ರತಿ ಫಲವಿಲ್ಲದೆನೇ ಹಣ ಪಾವತಿ ಆದ್ದಕ್ಕೆ ರಶೀದಿ; *h*) ಬೇಂಕರ್ ಅಂದರೆ ಒಬ್ಬ ಸಾವಕಾರನ ಕೈಯಲ್ಲಿ ಠೇವಣಿ ಇಟ್ಟ ಹಣದ ಬಗ್ಯೆ ಯಾ ಹಣದ ಖಾತರೀ ಬಗ್ಯೆ ಕೊಡುವ ರಶೀದಿ. ಪರಂತು ಸದರಿ ಹಣಕ್ಕಾಗಿ ಯಾರಿಗೆ ಉತ್ತರ ಹೇಳ ತಕ್ಕದ್ದೋ ಅವನಿಗೆ ಹೊರ್ತು ಬೇರೆ ಯಾರಾದರೂ ಈಸಿಕೊಳ್ಳುವಂತೆ ನಮೂದಿಸಿರ ಬಾರದು. ಈ ಮಾಫಿಯು ಒಂದು ಸಂಘದ ಹಿಸೆಗೆ, ಅಥವಾ ಹಿಸೆಯ ನಿರ್ಣಯವತ್ರದ ಪ್ರಕಾರ ಕೊಡೋಣಾಗುವ ಇಲ್ಲವೆ ಠೇವಣಿ ಇಡೋಣಾಗುವ ಹಣಕ್ಕಾಗಿ ಕೊಡುವ ರಶೀದಿಗೆ ಸಮ್ಮಂಧಿಸುವದಿಲ್ಲ.

೧೬. ಗೇಣಿಸೋದಚೀಟು—ಅಂಥಾ ಗೇಣಿಚೀಟಿಗೆ ಠಸೆ ಮಾಫಿ ಆಗಿದ್ದರೆ.

೧೭. ಮೇಲ್‌ಚೀಟು ಯಾನೆ ಎಂಡಾರಸ್ ಮೂಲಕವಾಗಿ ವಟಾಯಿಸ ತಕ್ಕ ಹುಂಡಿ, ಚೆಕ್ಕ್, ಇಲ್ಲವೆ ಪ್ರೊಮಿಸರಿ ನೋಟನ್ನು ವರ್ಗ ಯಾನೆ ಪರಾಧೀನ ಮಾಡುವ ಪತ್ರ.

ದಸ್ತಾವೇಜುಗಳನ್ನು ರಿಜಿಸ್ತ್ರಿ ಮಾಡುವ ಬಗ್ಯೆ ರಿಜಿಸ್ತ್ರಾರರಿಗೆ ತೆರ ತಕ್ಕ ಫೀಸಿನ ದರ.

									ರೂ.	ಆ.
ದಸ್ತೈವಜನ ಮೌಲ್ಯ		೨೫	ರೂಪಾಯಿಗೆ	ಮೀರದಿದ್ದರೆ	. . . . .				೦	೯
"	"	೨೫	"	ಮೀರಿ	೫೦	ರೂಪಾಯಿಗೆ	ಮೀರದಿದ್ದರೆ		೦	೧೨
"	"	೫೦	"	"	೧೦೦	"	"		೧	೦
"	"	೧೦೦	"	"	೫೦೦	"	"		೧	೯
"	"	೫೦೦	"	"	೬೦೦	"	"		೩	೦
"	"	೬೦೦	"	"	೧೦೦೦	"	"		೫	೦
"	"	೧೦೦೦	"	"	೫೦೧೦೦	ರೂಪಾಯಿ	ವರೆಗೆ	ಪ್ರತಿ ಹೆಚ್ಚಿಗೆ		
					೧೦೦೦	ರೂಪಾಯಿಗೆ	ಯಾ ಅದರ ಅಂಶಕ್ಕೆ		೧	೦
"	"	೫೦೦೦೦	ರೂ. ಮೇಲೆ	ಪ್ರತಿ ೧೦೦೦	ರೂಪಾಯಿಗೆ	ಯಾ ಅದರ ಅಂಶಕ್ಕೆ			೦	೯
ಪವರ್ ಒಫ್ ಎರ್ಟನಿ ಅಂದರೆ ವಕಾಲತಿನ ರಿಜಿಸ್ತ್ರಿ ಬಗ್ಯೆ									೩	೯

ಟಪ್ಪಾಲಿನ ವಿಷಯ ಮುಖ್ಯ ಕ್ರಮಗಳು.

ಮುಂದಿನ ಕ್ರಮಗಳು ಹಿಂದುಸ್ಥಾನದಲ್ಲಿಯೂ ಶಿಂಹಳ ದ್ವೀಪ ಆದೆನ್ ಬರ್ಮ ಮುಂತಾದ ಅದರ ನೆರೆಸೀಮೆಗಳಲ್ಲಿಯೂ ನಡಿಯುವ ಟಪ್ಪಾಲ ಸಮ್ಮಂಧವಾಗಿರುತ್ತವೆ.

ಕೋವಿಮದ್ದು ಮುಂತಾದ ಜ್ವಲನಾಸ್ಪದವಾದ ಒಡವೆಗಳು, ಗಾಜಿನ ಸಾಮಾನು, ತೆಳು ಜೀನಸು, ಇಂಥಾದ್ದನ್ನು ಟಪ್ಪಾಲಿನ ಮೇಲೆ ರವಾನಿಸ ಬಾರದು; ಪರಂತು ಔಷಧ ಮುಂತಾದ್ದು ಗಾಜಿನ ಬಾಟ್ಲಿಯಲ್ಲಿ ಹಾಕಿದ್ದಾಗ್ಯೂ, ಅಲ್ಲಾಡದಂತೆ ಬಂಮೋಬಸ್ತಾಗಿ ಕಟ್ಟಿದ್ದರೆ, ರವಾನಿಸುವದಕ್ಕೆ ಅಡ್ಡಿ ಇರುವದಿಲ್ಲ. ಅದಲ್ಲದೆ ಯಾವದಾದರೂ ಬಂಡು ತರದ ವಸ್ತು, ಬರಹ, ಭಾವೆ, ಚಿತ್ರ, ನಕ್ಷೆ, ಪುಸ್ತಕ ಇಂಥಾದ್ದನ್ನು, ಇಲ್ಲವೆ ಅಫೀಸಿ, ಗಾಂಜಾ ಮುಂತಾದ್ದನ್ನು ಟಪ್ಪಾಲಿನ ದ್ವಾರಾ ರವಾನಿಸಗೊಡುವದಿಲ್ಲ.

ಒಬ್ಬನು ತನ್ನ ಹೆಸರಿಗೆ ಬಂದ ತಬೋಟೆ ಇಲ್ಲವೆ ಕಟ್ಟನ್ನು ತೆರಿಯದೆ ವಾಪಸು ಮಾಡ ಬಹುದು; ಹಾಗೆ ವಾಪಸು ಮಾಡಿದ ಪಕ್ಷಕ್ಕೆ, ಅವನು ಅದರ ದಸ್ತೂರಿ ತೆರಲಿಕ್ಕೆ ಬದ್ಧನಾಗುವದಿಲ್ಲ; ಒಂದು ವೇಳೆ ಅವನು ಅದನ್ನು ತೆರದಾಗ್ಯೂ, ಅವನ ಮೇಲೆ ದ್ವೇಷದಿಂದ ಯಾರಾದರೂ ಕಳುಹಿಸಿದ್ದೆಂತ ಅದು ತಲ್ಪಿದ ಆಫೀಸಿನ ಪೋಸ್ಟ್‌ಮಾಸ್ತರಿಗೆ ಕಂಡನೆ, ಆ ಆಫೀಸರು ಅದರ ದಸ್ತೂರಿಯನ್ನು ಮಾಫು ಮಾಡ ಬಹುದು.

ಒಂದು ಲಿಫಾಪೆ ಇಲ್ಲವೆ ಕಟ್ಟನ್ನು ತೆರಿಯದೆ ಬೇರೊಂದು ವಿಳಾಸಕ್ಕೆ ತಿರಿಗಿ ರವಾನಿಸ ಬಹುದು; ಆ ಪ್ರಕಾರ ರವಾನಿಸಿದ್ದಾದರೆ, ಅದಕ್ಕೆ ಪ್ರತ್ಯೇಕ ದಸ್ತೂರಿ ಕೊಡ ಬೇಕೆಂದಿಲ್ಲ.

ಟಪ್ಪಾಲಿಗೆ ಹಾಕಿದ ಯಾವ ಲಿಫಾಪೆಗೆ, ಕಾರ್ಡಿಗೆ, ಯಾ ಕಟ್ಟಿಗೆ ರತೀದಿ ಸಿಕ್ಕುವದಿಲ್ಲವೋ, ಅಂಥಾದ್ದನ್ನು ಟಪ್ಪಾಲಿಗೆ ಹಾಕಿದ ಗುರುತಿಗಾಗಿ ಸರ್ಟಿಫಿಕೇಟನ್ನು ಪಡಕೊಳ್ಳಬಹುದು. ಹ್ಯಾಗಂದರೆ, ಅದರ ಮೇಲುವಿಳಾಸದ ಯಥಾಪ್ರತಿಯನ್ನು ಬೇರೊಂದು ಕಾಗದದ ಮೇಲೆ ಬರದು, ಅದಕ್ಕೆ ಅರ್ಧ ಆಣೆಯ ಚೀಟು ಹಚ್ಚಿ, ಆವೆರಡನ್ನು ಪೋಸ್ಟ್ ಆಫೀಸಿಗೆ ಹಾಜರು ಮಾಡಿದಲ್ಲಿ, ಚೀಟನ್ನು ರದ್ದು ಮಾಡಿ ತಾರೀಕಿನ ಮುದ್ರೆಯನ್ನು ಸಹ ಒತ್ತಿ, ಅದನ್ನು ಹಾಜರು ಮಾಡಿದ ಮನುಷ್ಯನಿಗೆ ವಾಪಸು ಕೊಡುವರು. ಇದು "ಸರ್ಟಿಫಿಕೇಟು" ಅನ್ನಿಸಿಕೊಳ್ಳುತ್ತದೆ.

ಒಂದು ಲಿಫಾಪೆಗೆ ಇಲ್ಲವೆ ಮುಂದೆ ಹೇಳಿರುವ ಬುಕ್‌ಪೆಕೆಟ್ ಯಾ ಪೆಟರ್ನ್‌ಪೆಕೆಟ್ ಎಂಬ ಕಟ್ಟಿಗೆ ದಸ್ತೂರಿ ಮುಂದಾಗಿ ಹಚ್ಚಿದೆ ಇದ್ದರೆ, ಇಲ್ಲವೆ ಹಚ್ಚಿದ ದಸ್ತೂರಿ ನಿರಬಿಗೆ ಕಡಿಮೆಯಾದರೆ, ಆ ಲಿಫಾಪೆಯನ್ನು ಯಾ ಕಟ್ಟನ್ನು ಹೊಂದುವವನು ಆ ದಸ್ತೂರಿಯ ಇಲ್ಲವೆ ಕಡಿಮೆಯಾದದರ ಇಮ್ಮಡಿ ಹಾಸಲ ತೆರ ಬೇಕು.

ಒಂದು ಟಪ್ಪಾಲ ಕಾರ್ಡು, ಲಿಫಾಪೆ, ಇಲ್ಲವೆ ಪೆಕೆಟು ಎಂಬ ಖುಲ್ಲಾ ಕಟ್ಟು ಹೆಚ್ಚು ಭದ್ರತೆಯಿಂದ ತಲಪ ಬೇಕೆಂಬವರು ಎರಡು (೨) ಆಣೆ ಕೊಟ್ಟು ಅದನ್ನು ರಿಜಿಸ್ತ್ರಿ ಮಾಡಿಸ ಬಹುದು. ಹ್ಯಾಗಂದರೆ: ರವಾನಿಸುವವನು ಅದಕ್ಕೆ ಮೇಲ್ವಿಳಾಸ ಬರದು, ಅದರ ಎಡಭಾಗದ ಕೆಳಗೆ ತನ್ನ ಹೆಸರು, ಎಳಾಸ ಸಹ ಬರೆದು, ಅದಕ್ಕೆ ನಿರಖು ಇರುವ ಚೀಟು ಮತ್ತು ರಿಜಿಸ್ತ್ರಿ ಬಗ್ಗೆ ಎರಡು ಆಣೇ ಚೀಟು ಸಹ ಹಚ್ಚಿ, ಟಪ್ಪಾಲು ಕೈದು ಆಗುವ ಮುಂಚೆ ಟಪ್ಪಾಲುಕಟ್ಟೆಯಲ್ಲಿ ಒಪ್ಪಿಸ ಬೇಕು; ಆವರು ಅದನ್ನು ರಿಜಿಸ್ತ್ರಿ ಮಾಡಿ, ಛಾಪಾ ರತೀದಿ ಕೊಡುವರು. ಮತ್ತು ಸದರಿ ಕಾರ್ಡು, ಲಿಫಾಪೆ, ಯಾ ಪೆಕೆಟು ಹೊಂದಿದವನಿಂದ ಪಾವತಿರತೀದಿ ತರಿಸಿ ಕೊಡ ಬೇಕಾದರೆ, ಹೆಚ್ಚಿಗೆ ೧ ಆಣೆ ಚೀಟು, ಮತ್ತು ಪಾರ್ಸೆಲು ಹೊಂದಿದವನಿಂದ ಪಾವತಿರತೀದಿ ತರಿಸಿ ಕೊಡ ಬೇಕಾದರೆ, ೧ ಆಣೆ ರೊಕ್ಕ ಸಹ ಹಾಜರು ಮಾಡಿದ್ದಲ್ಲಿ ಆ ಪ್ರಕಾರ ತರಿಸಿ ಕೊಡೋಣಾಗುವದು.

(Letter Post) ಕಾಗದಟಪ್ಪಾಲು.

ಎಲ್ಲಾ ಲಖೋಟೆಗಳೂ ಟಪ್ಪಾಲ ಕಾರ್ಡುಗಳೂ ೨೦ ತೊಲೆಗೆ ಮೀರದೆ ಇರುವ ಪೆಕೆಟುಗಳೂ ಟಪ್ಪಾಲಿಗೆ ಹಾಕಿದ ದಿವಸವೇ ಈ ಟಪ್ಪಾಲಿನ ದ್ವಾರಾ ರವಾನಿಸೋಣಾಗುತ್ತವೆ.

ಭಾರದಲ್ಲಿ ½ ತೊಲೆಗೆ ಮೀರದಿದ್ದರೆ	ಆ. ೦ ಪೈ ೬
" ೧ " "	೧ ೦
ಹೆಚ್ಚಿಗೆ ಪ್ರತಿ ೧ ತೊಲೆಗೆ ಯಾ ಅದರಂಶಕ್ಕೆ	೧ ೦
ಟಪ್ಪಾಲ ಕಾರ್ಡು ಒಂದಕ್ಕೆ	೦ ೩
ಉತ್ತರ ಸಿಗತಕ್ಕ ಜೋಡು ಕಾರ್ಡಿಗೆ	೦ ೬

ಕಾರ್ಡಿನ ಮುಂದಗಡೆ ಎಳಾಸ ಮಾತ್ರ ಹೊರ್ತು, ಹೆಚ್ಚಿಗೇನೂ ಬರಿಯ ಬಾರದು. ಅದರ ಹಿಂಬದಿಯಲ್ಲಿ ಬರಿಯುವದಾಗಲಿ ಛಾಪಿಸುವದಾಗಲಿ ಮಾತ್ರ ವಲ್ಲದೆ ರತೀದಿ ಮುಂತಾದ ಚೀಟು ಸಹ ಹಚ್ಚಬಹುದು. ಜೋಡು ಕಾರ್ಡನ್ನು ಬೇರೆ ಬೇರೆಯಾಗಿಯೂ ಪ್ರಯೋಗಿಸ ಬಹುದು.

೩ ಪೈ ಕಾರ್ಡು, ೬ ಪೈ ಜೋಡು ಕಾರ್ಡು, ½, ¾, ೧, ೧½, ೨, ೨½, ೩, ೪, ೫, ೬, ೭, ೧೨ ಆಣೇ, ೧ ರೂಪಾಯಿ ಚೀಟುಗಳೂ, ½, ¾, ೧, ೨ ½ ಆಣೆಯ ಚೀಟಿನ ಲಖೋಟೆಗಳೂ, ½, ೧ ಆಣೆಯ ಸುತ್ತುವಕಾಗದಗಳೂ ಸಿಗುತ್ತವೆ.

ಕಾಗದಟಪ್ಪಾಲಿನ ದ್ವಾರಾ ಕಳುಹಿಸುವ ಲಿಫಾಪೆ ೨೦ ತೊಲೆಗೆ ಮೀರ ಬಾರದು.

ಟಪ್ಪಾಲ ದಸ್ತೂರಿಯನ್ನು ತಪ್ಪಿಸಿಕೊಳ್ಳುವ ಬಗ್ಯೆ, ಬೇರೆ ಬೇರೆಯವರಿಗೆ ಪ್ರತ್ಯೇಕಪ್ರತ್ಯೇಕವಾಗಿ ಬರೆದ ಲೇಖನಗಳನ್ನು ಒಂದೇ ಲಿಫಾಪೆಯಲ್ಲಿ ಹಾಕಿ ಕಳುಹಿಸುವಂಥವರು ತಿಕ್ಷೆಗೆ ಗುರಿಯಾಗುತ್ತಾರೆ.

(Banghy Post) ಬಂಗಿಟಪ್ಪಾಲು.

೨೦ ತೊಲೆಗೆ ಮೀರಿದ ಪೆಕೆಟುಗಳೂ ಪಾರ್ಸೆಲುಗಳೂ ಈ ಟಪ್ಪಾಲ ದ್ವಾರಾ ರವಾನಿಸೋಣಾಗುತ್ತವೆ. ಇವುಗಳ ಟಪ್ಪಾಲು ಹಾಸಲಿನ ದರ ಹ್ಯಾಗಂದರೆ:—

ಬುಕ್‌ಪೆಕೆಟ್ ಮತ್ತು ಪೆಟರ್ನ್‌ಪೆಕೆಟ್

	ಆ. ಪೈ.
ಭಾರದಲ್ಲಿ ೧೦ ತೊಲೆಗೆ ಮೀರದಿದ್ದರೆ	೦ ೬
ಹೆಚ್ಚಿಗೆ ಪ್ರತಿ ೧೦ " ಯಾ ಅದರಂಶಕ್ಕೆ	೦ ೬

ಪೆಕೆಟು ಯಾವ ಆಕೃತಿಯಲ್ಲಿಯೂ ಇರಬಹುದು; ಆದರೆ ೩ ಫೂಟ್ ಉದ್ದ ೧ ಫೂಟ್ ಆಗಲ ಆಥವಾ ದಪ್ಪಕ್ಕೆ ಮೀರ ಬಾರದು. ಸಪುರವಾಗಿದ್ದರೆ, ೩೦ ಇಂಚಿಗೆ ಮೀರ ಬಾರದು. ಬುಕ್‌ಪೆಕೆಟಿನ ಭಾರದ ವಿಷಯದಲ್ಲಿ ಪ್ರತ್ಯೇಕ ನಿರಖು ಇಲ್ಲ; ಆದರೆ ಪೆಟರ್ನ್‌ಪೆಕೆಟು ಭಾರದಲ್ಲಿ ೪೦ ತೊಲೆಗೆ ಮೀರ ಬಾರದು.

ಪಾರ್ಸೆಲ್ ರಿಜಿಸ್ತ್ರಿ ಆದ್ದಕ್ಕೆ. ರಿಜಿಸ್ತ್ರಿ ಆಗದ್ದಕ್ಕೆ.

	ಆ.	ಆ.
೨೦ ತೊಲೆಗೆ ಮೀರದಿದ್ದರೆ	೪	೨
೪೦ " "	೬	೪
ಹೆಚ್ಚಿಗೆ ಪ್ರತಿ ೪೦ ತೊಲೆಗೆ ಯಾ ಅದರಂಶಕ್ಕೆ	೪	೪

ರಿಜಿಸ್ತ್ರಿ ಆಗದ ಪಾರ್ಸೆಲಿಗೆ ಹಾಸಲು ಚೀಟು ಹಚ್ಚಿ, ರಿಜಿಸ್ತ್ರಿ ಆದ್ದಕ್ಕೆ ರೊಕ್ಕವಾಗಿ ತೆರ ಬೇಕು. ರಿಜಿಸ್ತ್ರಿ ಆಗದ್ದು ೪೦ ತೊಲೆಗೆ, ರಿಜಿಸ್ತ್ರಿ ಆದ್ದು ೨೦೦೦ ತೊಲೆಗೆ ಮೀರ ಬಾರದು, ಮತ್ತು ವೈಯಲಿಕ್ಕೆ ತೊಂದರೆಯೂ ಜೋಕುಮೂ ಇರ ಬಾರದು.

"ಬುಕ್‌ಪೆಕೆಟ್" ಮತ್ತು "ಪೆಟರ್ನ್‌ಪೆಕೆಟ್":—(1) ಖಾಲಿ ಇಲ್ಲವೆ ಛಾಪೆಯಾದ ಪುಸ್ತಕ, ವರ್ತಮಾನಪತ್ರ, ಚಿತ್ರ, ನಕ್ಷೆ, ಬರದು ತಿಳಿಸುವ ಯಾ ಲೇಖನಸ್ವಭಾವದ್ದಾಗಿರದೆ ಕಾರ್ಯಸಮ್ಮಂಧವಾಗಿ ಬರೆಯಲ್ಪಟ್ಟ ದಸ್ತಾವೇಜು ಇಲ್ಲವೆ ಇತರ ಬರಹ, ಛರಾಪಣಿಚೀಟು, ಸಾಮಾನವಟ್ಟ, ಲೆಖ್ಖದ ಪಟ್ಟಿ ಎಂಬೀ ತರದ ಕಾಗದಗಳು; ಛಾಪಿಸುವದಕ್ಕಾಗಿ ಯಾವದೊಂದು ಛಾಪಖಾನೆಗೆ ಯಾ ವರ್ತಮಾನಪತ್ರಕ್ಕೆ ರವಾನಿಸಲ್ಪಡುವ ಕೈಬರಹದ ಕಾಗದಗಳು—ಇಂಥಾದ್ದೆಲ್ಲ "ಬುಕ್‌ಪೆಕೆಟಿಗೆ" ಸೇರುತ್ತವೆ. ಅದಲ್ಲದೆ ವ್ಯಾಪಾರದ ನಮೂನೆ ಯಾ ಕೆಲಸದ ಮಾದರಿಯುಳ್ಳ ಯಾವದೊಂದು ಕಟ್ಟು, ಅದಕ್ಕೆ ಕ್ರಯ ಹಿಡಿಯದೆ ರವಾನಿಸಲ್ಪಟ್ಟ ಪಕ್ಷಕ್ಕೆ, "ಪೆಟರ್ನ್‌ಪೆಕೆಟ್" ಅನ್ನಿಸಿಕೊಳ್ಳುತ್ತದೆ. (2) ಪೆಕೆಟು ಬರಿದಾಗಿ ಆಗಲಿ ಉಭಯ ಕಡೆಗಳಲ್ಲಿ ಖುಲ್ಲಾ ಬಿಟ್ಟು ಅದರೊಳಗಿರುವದನ್ನು ಬಿಚ್ಚಿ ನೋಡುವ ಹಾಗೆ ಕಟ್ಟ ಆಗಲಿ ತರ ಬೇಕು. (3) ಪೆಕೆಟಿಗಾಗಲೀ ಪೆಟರ್ನಿಗಾಗಲೀ ನಿರಖಿರುವ ದಸ್ತೂರಿ ಮುಂದಾಗಿ ಹಚ್ಚ ಬೇಕು; ಹಚ್ಚದೆ ರವಾನಿಸಿದರೆ, ದಸ್ತೂರಿಯ ದುಪ್ಪಾರೆ, ಇಲ್ಲವೆ ಹಚ್ಚಿದ ದಸ್ತೂರಿ ಕಡಿಮೆಯಾಗಿ ಹೋದರೆ, ಆ ಬಾಕಿಯ ದುಪ್ಪಾರೆ ಹಾಸಲು ರೊಕ್ಕವಾಗಿ ತೆರ ಬೇಕು. (4) ಪೆಕೆಟು ಇಲ್ಲವೆ ಪೆಟರ್ನ್ ಟಪ್ಪಾಲಿಗೆ ಹಾಕದ್ದಕ್ಕೆ ರತೀದಿ ಸಿಗುವದಿಲ್ಲ; ಅದರೆ ಅದಕ್ಕೆ ಸರ್ಟಿಫಿಕೇಟು ಪಡಕೊಳ್ಳ ಬಹುದು ಇಲವೇ ರಿಜಿಸ್ತ್ರಿ ಮಾಡಿಸ ಬಹುದು.

ಯಾವದೊಂದು ವರ್ತಮಾನಪತ್ರದ* ಮಾಲಿಕನಾಗಲೀ ಪ್ರಸಿದ್ಧಕನಾಗಲೀ ತಾನು ಕಾಲಾವಧಿಯಾಗಿ ಟಪ್ಪಾಲಿಗೆ ಹಾಕುವ ತನ್ನ ವರ್ತಕ್ಕಾಗಿ ಇಂತಿಷ್ಟು ಕಾಲಕ್ಕೆಂತ ಒಮ್ಮೆಯೇ ಹಾಸಲಿನ ಹಣ ನಗದಾಗಿ ಕೊಟ್ಟು ತೀರಿಸ ಬಹುದು. ಹಾಗೆ ಮಾಡಿದಂಥಾ ಪತ್ರವನ್ನು ಟಪ್ಪಾಲಚೀಟಿಲ್ಲದೆ ಮತ್ತು ಪ್ರತ್ಯೇಕ ಹಾಸಲಿಗೆ ಗುರಿಯಾಗದೆ ರವಾನಿಸ ಬಹುದು. ಈ ಅವಧಿಯು ಸಾಮಾನ್ಯ ೩ ತಿಂಗಳಾಗಿರುವದು. ಮುಂಗಡ ದಸ್ತೂರಿಯನ್ನು ಎಣಿಸುವಲ್ಲಿ, ವರ್ತಮಾನಪತ್ರಕರ್ತರು ತಮ್ಮೊಳಗೆ ಉಚಿತಾರ್ಥವಾಗಿ ಬದಲಾಯಿಸಿಕೊಳ್ಳುವಂಥಾ ಪ್ರತಿಗಳಿಗೆ ಟಪ್ಪಾಲ ಹಾಸಲು ಪೂರಾ ಮಾಫಿಯಾಗಿಯೂ, ಪೂರಾಟದ ಬಗ್ಗೆ ಏಜೆಂಟರಿಗೆ ರವಾನಿಸುವ ಪ್ರತಿಗಳ ಕಟ್ಟುಗಳು ಇಲ್ಲಿ ನಮೂದಿಸಿರುವ ಹಾಸಲಿನ ಅರೆವಾಸಿಗೂ, ಉಳಿದ ಪ್ರತಿಗಳು ಪೂರಾ ಹಾಸಲಿಗೂ ಗುರಿಯಾಗಿರುವವು.

ವರ್ತಮಾನಪತ್ರದ ಒಂದೊಂದು ಪ್ರತಿಯು		
೬ ತೊಲೆಗೆ ಮೀರದಿದ್ದರೆ	೧೦ ತೊಲೆಗೆ	ಪ್ರತಿ ಹೆಚ್ಚಿಗೆ ೧೦ ತೊಲೆಗೆ ಯಾ ಅದರ ಅಂಶಕ್ಕೆ
೩ ಪೈ	೬ ಪೈ	೬ ಪೈ

"ಪಾರ್ಸೆಲು":—(1) ರಿಜಿಸ್ತ್ರಿ ಆಗದ ಮತ್ತು ರಿಜಿಸ್ತ್ರಿ ಮಾಡಿಸಿದ ಪಾರ್ಸೆಲು ಎಂಬ ಎರಡು ವಿಧ (2) ಇವನ್ನು ಪೂರಾ ಬಂದು ಮಾಡಿ ಕಟ್ಟಿ ತರ ಬೇಕು. (3) (ನಿಷೇಧಿಸಲ್ಪಟ್ಟ ಸಾಮಾನುಗಳ ವಿನಹ) ಬೇರೇನಾದರೂ ಇದರಲ್ಲಿ ಗರ್ಭಿಸ ಬಹುದು. (4) ರಿಜಿಸ್ತ್ರಿ ಆಗದ ಪಾರ್ಸೆಲು ಬರಿದಾಗಿ ಟಪ್ಪಾಲು ಆಫೀಸಿಗೆ ಒಪ್ಪಿಸ ಬೇಕು; ಅದರೆ ರಿಜಿಸ್ತ್ರೀ ಪಾರ್ಸೆಲು ಸಂಗಡ ಅದರ ತಪಶೀಲಿನ ಫಾರ್ಮು† ಛರಾಯಿಸಿ ತರ ಬೇಕು, ಇದಕ್ಕೆ ರತೀದಿ ಸಿಕ್ಕುವದು, ಅದರೆ ರಿಜಿಸ್ತ್ರಿ ಆಗದ ಪಾರ್ಸೆಲಿಗೆ ಸಿಕ್ಕುವದಿಲ್ಲ. (5) ರಿಜಿಸ್ತ್ರೀ ಪಾರ್ಸೆಲು ಮುಟ್ಟದಕ್ಕೆ ರತೀದಿ ಕೊಡಬೇಕು, ಅದರೆ ರಿಜಿಸ್ತ್ರೀ ಆಗದ ಪಾರ್ಸೆಲಿಗೆ ಬೇಡ. (6) ರಿಜಿಸ್ತ್ರೀ ಪಾರ್ಸೆಲಿಗೆ ದಸ್ತೂರಿ ಮುಂದಾಗಿ ಕೊಡಲೂ ಬಹುದು, ಕೊಡದೆ ಇರಲೂ ಬಹುದು; ಎರಡನೇ ಸಂಗತಿಯಲ್ಲಿ ಪಾರ್ಸೆಲು ಹೊಂದಿದವನು ಆ ದಸ್ತೂರಿಯ ಮೌಲ್ಯ ಮಾತ್ರ ಕೊಡ ಬೇಕಷ್ಟೆ; ಅದಲ್ಲದೆ ೧ ಆಣೇ ದಸ್ತೂರಿ ಕೊಟ್ಟು ರಿಜಿಸ್ತ್ರೀ ಪಾರ್ಸೆಲು ಹೊಂದಿದವನಿಂದ ರತೀದಿ ತರಿಸಿ ಕೊಡ ಬಹುದು. (7) ೪೪೦ ತೊಲೆಗೆ ಮೀರದ ಪಾರ್ಸೆಲು ರಿಜಿಸ್ತ್ರಿ ಇಲ್ಲದೆ ರವಾನಿಸ ಬಹುದು; ಆದರೆ ಅದಕ್ಕೆ ಮೀರಿದರೆ, ಅಥವಾ ದಸ್ತೂರಿ ಇಲ್ಲದೆ ಯಾ "ವೆಲ್ಯು ಪೇಬಲ್" ಆಗಿ, ಯಾ "ಇನ್‌ಶೂರ್ಡ್" ಆಗಿ ರವಾನಿಸಿದರೆ, ರಿಜಿಸ್ತ್ರಿ ಮಾಡಿಸುವದು ಅಗತ್ಯ.

(Value Payable Article) "ವೇಲ್ಯೂ ಪೇಯಬ್‌ಲ್ ಆರ್ಟಿಕಲ್" ಅಂದರೆ ಪೋಸ್ಟ್ ಆಫೀಸಿನವರು ತಮ್ಮ ವಶಕ್ಕೆ ಬಂದ ಲಿಫಾಪೆ ಯಾ ಕಟ್ಟನ್ನು ಅದರ ಮೇಲ್‌ವಿಳಾಸಕ್ಕೆ ಮುಟ್ಟಿಸಿ, ಅದರ ಮೇಲೆ ವಾಗ್ದೂಷ ಪಡಿಸಿರುವ ಮೌಲ್ಯವನ್ನು ಅದನ್ನು ಹೊಂದಿದವನಿಂದ ವಸೂಲು ಮಾಡಿ ಅದನ್ನು ರವಾನಿಸಿದವನಿಗೆ ಕೊಡುತ್ತಾರೆ. ಈ ಪ್ರಕಾರ ಪೆಕೆಟುಗಳಾಗಲೀ ರಿಜಿಸ್ತ್ರಿಯಾದ ಪಾರ್ಸೆಲುಗಳಾಗಲೀ ಲಕೋಟೆಗಳಾಗಲೀ ಮನಿಆರ್ಡರ್ ಆಫೀಸುಳ್ಳ ಯಾವ ಪೋಸ್ಟ್ ಆಫೀಸಿನಲ್ಲಾದರೂ ಟಪ್ಪಾಲಿಗೆ ಹಾಕ ಬಹುದು; ಅವುಗಳ ಮೌಲ್ಯ ಮಾತ್ರ ನಾಲ್ಕು ಆಣೆಗೆ ಕಡಿಮೆಯಾಗಲೀ ಸಾವಿರ ರೂಪಾಯಿಗೆ ಮೀರಿ ಆಗಲೀ ಇರ ಬಾರದು; ಮತ್ತು ಅದರಲ್ಲಿ ಆಣೆಯ ಅಂಶವಿರ ಬಾರದು. ಹೀಗೆ ರವಾನಿಸುವವನು ಅದನ್ನು ಹೊಂದತಕ್ಕವನ ವಿಳಾಸ, ಮೌಲ್ಯ ಮುಂತಾದ್ದನ್ನು ಒಂದು ಛಾಪಾಫಾರ್ಮಿನ† ಮೇಲೆ ಬರದು ಅದರ ಸಂಗಡ ಕೊಡ ಬೇಕು. ವೆಲ್ಯುಪೇಯಬ್‌ಲ್ ಆಗಿ ರವಾನಿಸುವ ಪೆಕೆಟು ಯಾ ಲಿಫಾಪೆ ರಿಜಿಸ್ತ್ರಿ ಮಾಡ ಬಹುದು, ಇಲ್ಲವೆ ಮುಂದೆ ವಿವರಿಸಿದ ರೀತಿಯಲ್ಲಿ "ಇನ್ಶೂರ್" ಮಾಡಲೂ ಬಹುದು. ಈ ಪ್ರಕಾರ ರವಾನೆಯಾದ ಕಟ್ಟು ಇಲ್ಲವೆ ಲಿಫಾಪೆ ಅದರ ರಿಕಾಣಿಗೆ ಬಂದು ಮುಟ್ಟುತ್ತಲೇ, ಅದರ ಮೌಲ್ಯ ಹತ್ತು ರೂಪಾಯಿಗೆ ಮೀರಿದ್ದರೆ, ಅದು ಹೊಂದ ತಕ್ಕವನಿಗೆ ಅದನ್ನು ಕುರಿತು ಚೀಟು ಬರದು ತಿಳಿಸಲಾಗಿ, ಅದರ ಮೇಲೆ ಅತನು ದಸ್ಕತು ಹಾಕಿ ಅದರ ಮೌಲ್ಯ ಸಮೇತ ಅದೇ ಪೋಸ್ಟ್ ಆಫೀಸಿಗೆ ರವಾನಿಸಿ, ಅದನ್ನು ತರಿಸಿಕೊಳ್ಳ ಬಹುದು.

* ಅಂದರೆ ೩೧ ದಿವಸಗಳಿಗೆ ಮೀರದ ಕಾಲಾವಧಿಯಾಗಿ ಪ್ರಕಟವಾಗುವ ಪತ್ರಗಳು.

† ಈ ಫಾರ್ಮು ಟಪ್ಪಾಲುಕಟ್ಟೆಯಲ್ಲಿ ಕ್ರಯವಿಲ್ಲದೆ ಸಿಕ್ಕುತ್ತದೆ.

ಅದರೆ ಅದು ಹತ್ತು ರೂಪಾಯಿಯೊಳಗಿನದಾಗಿದ್ದರೆ, ಅದನ್ನು ಟಪ್ಪಾಲಪೇದೆಯು ಅದರ ವಿಳಾಸವಿರುವ ವನಿಗೆ ಮುಟ್ಟಿಸಿ, ಅದರ ನಿರಖು ಮೌಲ್ಯವನ್ನು ಅವನಿಂದ ಈಸಿಕೊಳ್ಳುವನು.

(Insurance) "ಇನ್ಯೂರೆನ್ಸ್". ರಿಜಿಸ್ತ್ರಿಯಾದ ಲಿಫಾಪೆ, ಪಾರ್ಸೆಲು, ಪೆಕೆಟು, ವೆಲ್ಯುಪೇಯಬ್‌ಲ್ ಲಿಫಾಪೆ ಇಲ್ಲವೆ ಕಟ್ಟು ಭದ್ರತೆಯಿಂದ ತಲ್ಪಿಸುವ ವಿಷಯದಲ್ಲಿ ಟಪ್ಪಾಲಿನವರು ಜವಾಬದಾರಿಕೆಯನ್ನು ವಹಿಸಿಕೊಳ್ಳುತ್ತಾರೆ. ಬ್ರೇಂಚು ಆಫೀಸುಗಳಲ್ಲಿ ರೂ. ೫೦೦ ವರೆಗೆ, ಇತರ ಆಫೀಸುಗಳಲ್ಲಿ ರೂ. ೧೦೦೦ ವರೆಗೆ ಇನ್ಯೂರ್ ಮಾಡಿಸಬಹುದು. ಈ ಪ್ರಕಾರ ರವಾನಿಸುವಂಥಾದ್ದು ಭದ್ರವಾಗಿ ಬಂದು ಮುಡಲ್ಪಟ್ಟು, ಅಂಚುಗಳಲ್ಲಿ ಎರಡೆರಡು ಇಂಚುಗಳಿಗೆ ಮೊಹರು ಪಾಕಿ ತರ ಬೇಕು; ಮತ್ತು ಅದರ ಮೇಲ್ಗಡೆಯಲ್ಲಿ ಮೇಲ್ ವಿಳಾಸವನ್ನೂ, ಅಕ್ಷರದಿಂದಲೂ ಅಂಕೆಯಿಂದಲೂ ಅದರ ವಾಜಬಿ ಮೌಲ್ಯವನ್ನೂ ಬರಿಯ ಬೇಕು; ಬರಿಯುವಾಗ ಚಿತ್ತು ಮಾಡ ಬಾರದು. ಇದರ ಯಾವತ್ತು ದಸ್ತೂರಿ ಮುಂದಾಗಿ ತೆರಲೇ ಬೇಕು. ಈ ಪ್ರಕಾರ ಇನ್ಯೂರ್ ಮಾಡ ತಕ್ಕ ಲಯೋಟೆ ಯಾ ಕಟ್ಟು ಟಪ್ಪಾಲಕಟ್ಟೆಗೆ ಹಾಜರು ಮಾಡುವಾಗ ಅದರ ಸಂಗಡ ಅದರ ಮುಲಪೂಪುಗಳನ್ನೂ ಮೌಲ್ಯವನ್ನೂ ಕುರಿತು (ಟಪ್ಪಾಲಕಟ್ಟೆಯಿಂದ ಮೂಫಿಯಾಗಿ ಸಿಕ್ಕುವ ಫಾಫಾಫಾರ್ಮಿದಲ್ಲಿ) ವಾಗ್ರೂಪ ಬರದು ತರ ಬೇಕು. ಸುಳ್ಳು ವಾಗ್ರೂಪ ಪಡಿಸುವವನು ಶಿಕ್ಷೆಗೆ ಗುರಿಯಾಗುವನು.

"	"	"	೧೦	೦	ಕುಜ " " ಕುಜ ಭಾ. ೨II "
"	೨೫	"	೧೦	೦	ಬುಧ " " ಬುಧ ಭಾ. II. ದಕ್ಷಿಣ
"	೨೯	ಸಾಯಂಕಾಲ	೭	೦	ಬುಧಸ್ತಂಭ
"	೩೧	ಪ್ರಾತಃಕಾಲ	೪	೦	ಶುಕ್ರ ಕುಜ ಸಮಾಗಮ, ಶುಕ್ರ ಭಾ. III ಉತ್ತರ

ಲೋಕವೃತ್ತಾಂತವು.

"ಆಕಾಶಗಳನ್ನು ನಿರ್ಮಿಸಿದ ಯೆಹೋವ ಹೀಗೆ ಹೇಳುತ್ತಾನೆ; ಅವನೇ ದೇವರು, ಭೂಮಿಯನ್ನು ರೂಪಿಸಿದವನೂ ಅದನ್ನು ಉಂಟುಮಾಡಿದವನೂ ಅದನ್ನು ಸ್ಥಾಪಿಸಿದವನೂ ಅವನೇ. ಅದನ್ನು ವ್ಯರ್ಥವಾಗಿ ನಿರ್ಮಿಸಲಿಲ್ಲಾ. ನಿವಾಸಕ್ಕಾಗಿ ಅದನ್ನು ನಿರ್ಮಿಸಿದನು. ಮಹೋನ್ನತನಾದ ದೇವರು ಮನುಷ್ಯರ ರಾಜ್ಯದಲ್ಲಿ ಆಳುತ್ತಾನೆ; ತನ್ನ ಮನಸ್ಸಿಗೆ ಸರಿಯಾದವರಿಗೆ ಅದನ್ನು ಕೊಡುತ್ತಾನೆ." ಮಹಾಮಹಿಮನಾದ ದೇವರು ನಮ್ಮ ದೇಶದಲ್ಲಿ ಕ್ಷೇಮವನ್ನೂ ಸಮಾಧಾನವನ್ನೂ ಕಾಪಾಡಿ ಕ್ಷಾಮಡಾಮರಗಳನ್ನು ದೂರ ಮಾಡಿ ನಮ್ಮ ಅರಸ್ಥಾನದವರಲ್ಲಿ ಪ್ರಜಾಪಾಲನಾಸಕ್ತಿಯನ್ನೂ ಹಿತಚಿಂತನೆಯನ್ನೂ ಪ್ರಜೆಯವರಲ್ಲಿ ರಾಜನಿಷ್ಠೆಯನ್ನೂ ನೆಲೆಗೊಳಿಸಿ ಸದಾ ಸಲಹುವವನಾಗಲಿ ಎಂದು ಪ್ರಾರ್ಥಿಸಿ, ಗತವರ್ಷದಲ್ಲಿ ಲೋಕದಲ್ಲಿ ಸಂಭವಿಸಿದ ಮುಖ್ಯ ಮುಖ್ಯ ವಿಷಯಗಳನ್ನು ಪ್ರಸ್ತಾಪಿಸುತ್ತೇವೆ.

ಇದೇ ಕಳದ ೧೮೯೬ನೇ ವರ್ಷದ ಮಳೆಗಾಲವು ಅಪೂರ್ವವಾದದ್ದೇ ಸರಿ. ಮಳೆ ಪ್ರಾರಂಭವಾಗಿ ಎರಡುವರೆ ತಿಂಗಳೊಳಗೆ ೧೧೫ ಇಂಚುಗಳ ವರೆಗೆ ಮಳೆ ಸುರಿಯಿತು. ಇಡೀ ವರ್ಷಕ್ಕೆ ನಮ್ಮ ಸೀಮೆಯಲ್ಲಿ ಬೀಳುವ ಮಳೆ ೧೨೦ ಇಂಚು. ಹೊಳೆಗಳಿಗೆಲ್ಲಾ ನೆರೆ ಬಂದು ಪಾರ್ಶ್ವಾಂತರದಲ್ಲಿರುವ ಹಳ್ಳಿಪಳ್ಳಿಗಳು ಕೊಚ್ಚಿಹೋದವು; ಕೃಷ್ಣಾ ಗೋದಾವರಿ ಹೊಳೆಗಳ ಸಾಲಿನಲ್ಲಿ ನೀರಿನ ಹೊಯಿಲಿಗೆ ಬಿದ್ದು ತೇಲಿ ಹೋಗುವ ಹೇರಳ ಜನರನ್ನು ಸರಕಾರದವರು ದೋಣಿಗಳಲ್ಲಿ ಹತ್ತಿಸಿ ರಕ್ಷಣೆ ಮಾಡಿದರು; ರೈಲುಬಂಡಿಯ ಮಾರ್ಗಗಳು ಕೆಲವು ಕಡೆಯಲ್ಲಿ ಹಾಳಾಗಿ ಸೇತುಗಳು ಬಿದ್ದುಹೋದವು. ಉತ್ತರ ಹಿಂದುಸ್ಥಾನದ ಕೆಲವು ಪ್ರದೇಶಗಳಲ್ಲಿ ಬೆಳೆ ಹಾಳಾದದರಿಂದ ಧಾನ್ಯದವಸವು ಬಹಳ ತುಟ್ಟಿಯಾಗಿ ಬಡವರು ಬಗ್ಗರು ಬಳಲುವವರಾದ್ದರಿಂದ ಸರಕಾರದವರು ಅಂಥವರ ಸಹಾಯಾರ್ಥವಾಗಿ ಬೇರೆ ಬೇರೆ ಕಾಮಗಾರಿಗಳನ್ನು ಪ್ರಾರಂಭಿಸುವದು ಅವಶ್ಯವಾಯಿತು. ಆದರೆ ಮಹಾದೇವರ ಕೃಪಾಕಟಾಕ್ಷದಿಂದ ಬರಗಾಲವು ಹೆಚ್ಚು ಕಾಲ ಹಾವಳಿ ಮಾಡಲಿಲ್ಲಾ.

ಸರಕಾರದವರು ಕೃಷ್ಣಾ ಗೋದಾವರಿ ಜಿಲ್ಲೆಗಳಲ್ಲಿ ಕೃಷ್ಣಾ ಗೋದಾವರಿ ನದಿಗಳಿಗೆ ಭಾರಿ ಅಣೆಕಟ್ಟು ಮಾಡಿಸಿ ನೀರನ್ನು ಕಾಲಿವೆಗಳಲ್ಲಿ ತರಿಸಿ ವ್ಯವಸಾಯ ಕೆಲಸಕ್ಕೆ ಉಪಯೋಗವಾಗುವಂತೆ ಮಾಡಿಸಿದರು. ಹಾಗೆ ತಂಜಾವೂರು ಜಿಲ್ಲೆಯಲ್ಲಿ ಕಾವೇರಿ ನದಿಗೆ ಅಣೆಕಟ್ಟು ಹಾಕಿರುವದರಿಂದ ಸಾಗುಸಂತು ಹೆಚ್ಚು ಹಸನಾಯಿತು. ಇದೇ ಪ್ರಕಾರ ತಿರುವಂಕೋಡು ಸಂಸ್ಥಾನದಿಂದ ಪಶ್ಚಿಮ ಸಮುದ್ರಕ್ಕೆ ಹರಿದು ಹೋಗುವ ಪೆರಿಯಾರ ಹೊಳೆಗೆ ಅಣೆಕಟ್ಟು ಹಾಕಿದರೆ, ಮಧುರೆ ಜಿಲ್ಲೆಯ ಬೇಸಾಯವನ್ನು ವೃದ್ಧಿ ಪಡಿಸಬಹುದೆಂದು ಸರಕಾರದವರು ಆಲೋಚಿಸಿ ಸುಮಾರು ಏಳೆಂಟು ವರ್ಷಗಳ ಹಿಂದೆ ಅಣೆಕಟ್ಟು ಕಟ್ಟಿಸುವದಕ್ಕೆ ಅಪ್ಪಣೆ ಮಾಡಿದರು. ಗಟ್ಟಿಗರಾದ ಶಿಲ್ಪಿಗಳಿ

ಗೂ ಅಶಕ್ಯವೆಂದು ತೋರಿದ ಈ ಬಹುದೊಡ್ಡ ಕೆಲಸವು ಇತ್ತಲಾಗೆ ಮುಗಿದು ಪೆರಿಯಾರ ನದಿಯ ನೀರು ಸರಾಗವಾಗಿ ಮಧುರೆ ಜಿಲ್ಲೆಗೆ ಬರುವಂತೆ ಆಗಿದೆ. ಈ ಅಣೆಕಟ್ಟಿಗೆ ೮೭ ಲಕ್ಷ ರೂಪಾಯಿ ಖರ್ಚುಮುಟ್ಟಿತು.

ಗೋವೆಯಲ್ಲಿ ಸೈನ್ಯಾಂಶವು ಮುಷ್ಕರ ಹಿಡಿದು ಅಧಿಕಾರಸ್ಥಾನಕ್ಕೆ ಮೂರ್ಮಲೆತು, ಕಾಡು ಸೇರಿ, ಪುರಾತನ ಕೋಟೆಯನ್ನು ಹೊಕ್ಕು, ಅದನ್ನು ಬಲುಕಾಯಿಸಿ ತಮ್ಮ ಸಂಗಡ ಬೇರೆಯವರನ್ನು ಕೂಡಿಸಿಕೊಂಡು, ಸೀಮೆಯಲ್ಲೆಲ್ಲಾ ಪುಂಡುಕೃತ್ಯಗಳನ್ನು ಮಾಡುವದಕ್ಕೆ ಆರಂಭಿಸಿದರು. ರಾಣಾ ಎಂಬ ತುಂಡು ಪಾಳೆಯಗಾರನೊಬ್ಬನು ಅವರನ್ನು ಒಡಗೂಡಿದ್ದರಿಂದ ಬಂಡಾಯಗಾರರ ಬಲವು ಹೆಚ್ಚಿತು. ಇವರು ಪ್ರಜೆಗಳಲ್ಲಿ ದೊಡ್ಡ ದೊಡ್ಡವರ ಮನೆಗೆ ಬಂದು ಬಲೋದ್ಬಂದಿಯಿಂದ ಧಾನ್ಯದವಸವನ್ನೂ ಹಣವನ್ನೂ ಸೂರೆ ಮಾಡಿ ಉಪಟಳ ಮಾಡುತ್ತಿದ್ದರು. ಇವರ ಅವಾಂತರವನ್ನು ಅಣಗಿಸುವದಕ್ಕೆ ಅಲ್ಲಿಯ ಅಧಿಕಾರಸ್ಥರಿಂದ ಆಗದೆಹೋದದರಿಂದ ಪೊರ್ತುಗಲ ಅರಸನು ತನ್ನ ಕಡೆಯಿಂದ ಶ್ರೀಮಂತ ಪ್ರಭುವನ್ನೂ ಸೈನ್ಯವನ್ನೂ ಕಳಿಸಿದನು. ಆದರೆ ದಂಗೆಗಾರರು ಬಯಲಿಗೆ ಬಾರದೆ ಕಾಡು ಸೇರಿ ಗಿಡಗಳ ಮರೆಯಲ್ಲಿ ನಿಂತು ಕೋವಿ ಹೊಡೆಯುವವರಾದ್ದರಿಂದ ಪೊರ್ತುಗಲಿನಿಂದ ಬಂದ ಸೈನ್ಯಕ್ಕೂ ಅವರನ್ನು ಅಣಗಿಸುವದು ಕರಕಷ್ಟವಾಯಿತು. ಈಗ ತಕ್ಕಮಟ್ಟಿಗೆ ಸೀಮೆಯಲ್ಲಿ ವ್ಯವಸ್ಥೆಯುಂಟಾಗಿದೆ ಎಂದು ಹೇಳುತ್ತಾರೆ.

ಕಳದ ವರ್ಷದಲ್ಲಿ ನೆಶನಲ್ ಕಂಗ್ರೆಸ್ ಎಂಬುವ ರಾಷ್ಟ್ರೀಯ ಸಭೆಯವರು ಪುಣೆಯಲ್ಲಿ ನೆರೆದುಬಂದು, ಪ್ರಜೆಗಳ ಯೋಗಕ್ಷೇಮಕ್ಕೆ ಸಂಬಂಧವಾದ ಆಯಾ ವಿಷಯಗಳನ್ನು ಚರ್ಚೆಮಾಡಿದರು. ಈ ಸಂಘವು ನಡಿಯುವ ಸಮಯದಲ್ಲಿಯೇ ಸೋಶಲ್ ಕನ್ಫರೆನ್ಸ್ ಎಂಬುವ ಸಂಘಪರಿಷ್ಕರಣ ಸಂಘದವರೂ ಕೂಡಿಬಂದು, ದೇಶದಲ್ಲಿ ಪುರಾತನ ಕಾಲದಿಂದ ವಾಡಿಕೆಯಾದ ಅಹಿತಕರವಾದ ಆಯಾ ಪದ್ಧತಿಗಳನ್ನು ತಿದ್ದುಪಡಿ ಮಾಡಿ ಜನರನ್ನು ಉತ್ತಮ ಸ್ಥಿತಿಗೆ ತರುವ ವಿಷಯವನ್ನು ಕುರಿತು ಆಲೋಚಿಸಿದರು. ಈ ಉಭಯ ಸಂಘಗಳವರಲ್ಲಿ ವಿವಾದವಾಗಿ ಸಂಘಪರಿಷ್ಕರ ಸಭೆಯವರು ರಾಷ್ಟ್ರೀಯ ಸಭೆಯವರಿಂದ ಅಗಲಿ ಪ್ರತ್ಯೇಕ ಸ್ಥಳದಲ್ಲಿ ತಮ್ಮ ಕೆಲಸವನ್ನು ನಡಿಸಿದರು. ಇದೇ ತರದ ಸಂಘಗಳನ್ನು ಹಿಂದುಸ್ಥಾನದಲ್ಲಿ ಬೇರೆ ಬೇರೆ ಪಟ್ಟಣಗಳಲ್ಲಿ ಸ್ಥಾಪಿಸಿಕೊಂಡಿದ್ದಾರೆ.—ಕಲ್ಕತ್ತಕ್ಕೆ ಸಮೀಪವಾದ ಒಂದು ಊರಿನಲ್ಲಿ ಭಯಂಕರವಾದ ಅಗ್ನಿಪ್ರಳಯವಾಗಿ ಬೆಂಕಿಯನ್ನು ಆರಿಸುವದರೊಳಗೆ ಹೇರಳ ಮನೆಮಾರು ಭಸ್ಮವಾದದ್ದಲ್ಲದೆ ಬಹಳ ಮನುಷ್ಯರು ಆಹುತಿಯಾದರು.

ಪಾರ್ಶಿಸ್ತಾನದ ಅರಸರಾದ ನಸರುದ್ದಿನ್ ಶಾಹರನ್ನು ಒಬ್ಬ ದುಷ್ಮಾನನು ಕೊಂದುಹಾಕಿದನು. ಅವರು ರಾಜಧಾನಿಯಿಂದ ಸ್ವಲ್ಪ ದೂರವಿರುವ ಕೀರ್ತಿಪಟ್ಟ ಮಶೀದಿಗೆ ಹೋದಾಗ ಅವರನ್ನು ಕೊಲ್ಲಬೇಕೆಂತಲೇ ಕಾಯುತ್ತಿದ್ದ ದುಷ್ಮಾನನು ಅವರಿಗೆ ಗುಂಡು ಹೊಡೆದನು. ಆದದರಿಂದ ಅವರು ಮಾರನೆ ದಿನ ಪ್ರಾಣ ಬಿಟ್ಟರು. ಅವರ ಹಿರಿಯ ಮಗ ಮುಸ್ಸಾಫರ್ ಏದ್ದೀನರೆಂಬವರು ಪಾರ್ಶಿಸ್ತಾನದ ಸಿಂಹಾಸನವನ್ನೇರಿದ್ದಾರೆ. ಸೀಮೆಯಲ್ಲಿ ವಿಶೇಷ ಗಡಿಬಿಡಿ ಸಂಭವಿಸಲಿಲ್ಲಾ. ಪಾರ್ಶಿಸ್ತಾನದ ಅರಸರಲ್ಲಿರುವಷ್ಟು ಅಮೂಲ್ಯ ಆಭರಣಗಳು ಇನ್ನ್ಯಾವ ಅರಸರಲ್ಲಿಯೂ

೪೦ ತನ್ನ ನೆಟ್ಟನೆತನದಲ್ಲಿ ನಡೆದುಕೊಳ್ಳುವವನು ಯೆಹೋವನಿಗೆ ಭಯ ಪಡುತ್ತಾನೆ;

ಇಲ್ಲವಂತೆ. ಸುಮಾರು ೧೫೭ ವರ್ಷಗಳ ಹಿಂದೆ ನದೀರ್‌ಶಾಹನು ದಂಡೆತ್ತಿಕೊಂಡು ಹಿಂದುಸ್ಥಾನಕ್ಕೆ ಬಂದು ಡಿಲ್ಲಿಯನ್ನು ಹಿಡಿದು ಸೂರೆಮಾಡಿ ಅಲ್ಲಿಂದ ವೈದ ನವಿಲುಗದ್ದಿಗೆ ಎಂಬುವ ಪ್ರಖ್ಯಾತ ಸಿಂಹಾಸನವು ಈಗಲೂ ಪಾರ್ಶಿರಾಜರ ಮನೆವರಸೆಯ ಸೊತ್ತಾಗಿ ಪಟ್ಟದ ಕುಮಾರನಿಗೆ ಸಿಕ್ಕುತ್ತದೆ.

ಪಾರ್ಶಿಸ್ತಾನದ ಶಾಹಾ ನಸರುದ್ದೀನರು.

ಆಫ್ರಿಕ ಖಂಡದ ಪೂರ್ವತೀರದ ಸಮುದ್ರದಲ್ಲಿ ಮದಗಾಸ್ಕರವೆಂಬುವ ದೊಡ್ಡ ದ್ವೀಪವದೆ. ಅಲ್ಲಿ ಹೋವಾ ಎಂಬ ಜಾತಿಯವರು ರಾಜ್ಯಭಾರ ಮಾಡುತ್ತಾರೆ. ಅದನ್ನು ಸ್ವಾಧೀನ ಮಾಡಿಕೊಳ್ಳಬೇಕೆಂದು ಫ್ರೆಂಚರು ಇನ್ನೂರು ವರ್ಷಗಳಿಂದ ಪ್ರಯತ್ನ ಮಾಡುತ್ತಾ ಬರುತ್ತಿದ್ದರು. ಆದರೆ ಇಂಗ್ಲಿಷ ಅರಸ್ಥಾನದ ದಾಕ್ಷಿಣ್ಯದಿಂದ ಆ ದ್ವೀಪದ ಹೋವಾ ಜನರು ಸ್ವತಂತ್ರರಾಗಿರುತ್ತಿದ್ದರು. ಇತ್ತಲಾಗೆ ಇಂಗ್ಲಿಷರು ಅದರ ಗೊಡವೆಗೆ ಬರುವದಿಲ್ಲವೆಂದು ಫ್ರೆಂಚರು ಕಂಡು, ತಮ್ಮ ಪೂರ್ವದ ಹೇತುವನ್ನು ನೆರವೇರಿಸುವ ಬಗ್ಯೆ ಅಲ್ಲಿಗೆ ಸೈನ್ಯವನ್ನು ಕಳಿಸಿದರು. ಹೋವಾ ಜನರ ಸೈನ್ಯವು ಫ್ರೆಂಚರನ್ನು ಎದುರಾಯಿಸಲಾರದ್ದರಿಂದ ಫ್ರೆಂಚರು ಸರಾಗವಾಗಿ ದ್ವೀಪದ ರಾಜ್ಯಧಾನಿಯ ವರೆಗೆ ಕೂಚುಮಾಡಿ, ದೇಶವನ್ನು ಕೈವಶ ಮಾಡಿಕೊಂಡು, ರಾಣಿಯನ್ನು ಹೆಸರಿನ ಪೂರ್ತಿಗೆ ಮಾತ್ರ ಅರಮನೆಯಲ್ಲಿಟ್ಟು, ರಾಜ್ಯದ ಕಾರ್ಯಭಾರವೆಲ್ಲ ತಾವೇ ನಡಿಸುತ್ತಾರೆ. ಏಕಾಏಕಿ ರಾಜ್ಯದ ಆಡಳಿತೆ ಪಲ್ಲಟವಾದದರಿಂದ ದ್ವೀಪದ ಕೆಲ ಊರುಗಳಲ್ಲಿ ಲಂಡಪುಂಡರು ಕೂಡಿ ನಾನಾ ಉಪಟಳ ಮಾಡುವದಕ್ಕೆ ಪ್ರಾರಂಭಿಸಿ ಕೆಲ ಮಿಶನೆರಿಗಳನ್ನು ಜೀವದರಿಸಿ ಕೊಂದರು.

ಮಿಸ್ರದೇಶಕ್ಕೆ ದಕ್ಷಿಣದಲ್ಲಿ ಸೌದಾನವೆಂಬುವ ವಿಶಾಲವಾದ ಸೀಮೆಯದೆ. ಆಲ್ಲಿಯ ನಿವಾಸಿಗಳಿಗೆ ದರವೇಶಿಗಳು ಅನ್ನುತ್ತಾರೆ. ಈ ದೇಶವು ಮೊದಲು ಮಿಸರ ಸಂಸ್ಥಾನಕ್ಕೆ ಸೇರಿದ್ದು. ಆದರೆ ಕೆಲ ವರ್ಷಗಳ ಹಿಂದೆ ಒಸ್ಮಾನಡಿಗ್ಮಾ ಎಂಬವನೊಬ್ಬ ರಣಧೀರನಾದ ದರವೇಶನು ಎದ್ದು, ಸೈನ್ಯವನ್ನು ಶೇಖರಿಸಿಕೊಂಡು, ಆ ಸೀಮೆಯನ್ನೆಲ್ಲಾ ಕೈವಶಮಾಡಿಕೊಂಡನು. ಮಿಸರರಾಜನ ಸೈನ್ಯವು ಅವನನ್ನು ಸೋಲಿಸಲಾರದೆ ಹೋಯಿತು. ಇತ್ತಲಾಗೆ ಆ ಒಸ್ಮಾನಡಿಗ್ಮಾನೆಂಬವನು ಸತ್ತುಹೋದನು. ಅವನಂತೆ ರಣಧೀರನಾದ ಉತ್ತರಾಧಿಕಾರಿ ಏಳಲಿಲ್ಲಾ. ಆದ್ದರಿಂದ ಆ ಸೀಮೆಯನ್ನು ಪುನಹ ಸ್ವಾಧೀನ ಪಡಿಸಿಕೊಳ್ಳುವಂತೆ ಮಿಸರ ಅರಸನಿಗೆ ಸಹಾಯ ಮಾಡಬೇಕೆಂದು ಇಂಗ್ಲಿಷ ಅರಸ್ಥಾನದವರು ಆಲೋಚಿಸಿ, ಅಲ್ಲಿಗೆ ಇಂಗ್ಲಾಂಡಿನಿಂದ ಸೈನ್ಯಕಳಿಸಿದ್ದಲ್ಲದೆಹಿಂದುಸ್ಥಾನದಿಂದಲೂ ಕೆಲವು ಪಟ್ಟಾಳಗಳನ್ನು ಕಳಿಸಿದ್ದಾರೆ. ಆದರೆ ಅಲ್ಲಿ ಹೆಚ್ಚಿನ ಯುದ್ಧವೇನೂ ನಡಿಯಲಿಲ್ಲಾ. ಆ ದರವೇಶರು ವಿಧೇಯರಾಗುವ ಭಾವವನ್ನು ತೋರಿಸುತ್ತಾರೆ.

ಸರ್ ಹೆರ್ಬರ್ಟ್ ಕಿಚನರ್ Sir Herbert Kitchener.

ಮಿಸ್ರದೇಶಕ್ಕೆ ದಕ್ಷಿಣದಲ್ಲಿ ಅಬಿಸಿನ್ಯವೆಂಬುವ ಸ್ವತಂತ್ರ ಸಂಸ್ಥಾನವದೆ. ಆ ರಾಜ್ಯದ ಅರಸನು ಕ್ರೈಸ್ತನು. ಇತಲಿ ಅರಸ್ಥಾನದವರು ಅಫ್ರಿಕದಲ್ಲಿ ತಮಗೆ ವಸಾಹತವು ಬೇಕೆಂದು ಅಬಿಸಿನ್ಯಕ್ಕೆ ಸಮೀಪವಾದ ಪ್ರದೇಶವನ್ನು ಕೈವಶಮಾಡಿಕೊಳ್ಳುವಾಗ ಅಬಿಸಿನ್ಯದ ಅರಸನು ಅವರೆನ್ನು ಎದುರಾಯಿಸಿದ್ದರಿಂದ ಉಭಯ ಪಕ್ಷದವರಿಗೆ ಕೆಲವು ಕಾಲದಿಂದ ಖೂಡಾಖೂಡಿ ಯುದ್ಧ ನಡೆಯುತ್ತಿತ್ತು. ಇತ್ತಲಾಗೆ ಆದ ಯುದ್ಧದಲ್ಲಿ ಅಬಿಸಿನ್ಯದವರು ಇತಲಿಯವರನ್ನು ಪೂರ್ಣ ಪರಾಜಯ ಪಡಿಸಿ ಹೇರಳ ಮನುಷ್ಯರನ್ನೂ ಯುದ್ಧಸಾಮಾಗ್ರಿಯೆನ್ನೂ ಪಶುಗಳನ್ನೂ ಕೈಸೆರೆ ಹಿಡಿದರು. ಇಂಗ್ಲಿಷ ಅರಸ್ಥಾನದವರು ಮಿಸರ ದೇಶಕ್ಕೆ ಸೈನ್ಯವನ್ನು ಕಳಿಸಿದ್ದರಲ್ಲಿ ಇತಲಿಯದವರು ಅಫ್ರಿಕದಲ್ಲಿ ಕಳಕೊಂಡ ವಸಾಹತವನ್ನು ತಿರಿಗಿ ಪಡಕೊಳ್ಳುವಂತೆ ಸಹಾಯವಾಗ ಬೇಕೆಂಬ ಉದ್ದೇಶವೂ ಉಂಟು.

ಅಬಿಸಿನ್ಯದ ಅರಸನ ಒತ್ತೋಲಗ.

ಆಫ್ರಿಕದ ಗೋಲ್ಡಕೋಸ್ಟ್ ಎಂಬ ಸೀಮೆಯ ನೆರೆಯಲ್ಲಿ ಅಶಂತಿಯೆಂಬ ಚಿಕ್ಕ ಸಂಸ್ಥಾನವದೆ. ಅಲ್ಲಿಯ ಕಾಫರಿ ಅರಸನು ಮೂರ್ಖನಾಗಿ ಇಂಗ್ಲಿಷ ಸೀಮೆಗೂ ಪ್ರಜೆಗೂ ಕಿರುಕುಳ ಮಾಡುತ್ತಿದ್ದದರಿಂದ ಇಂಗ್ಲಿಷ ಅರಸ್ಥಾನದವರು ಅವನಿಗೆ ತಕ್ಕ ದಂಡನೆ ಮಾಡಬೇಕೆಂದು ಅವನ ಸೀಮೆಗೆ ಸೈನ್ಯವನ್ನು ಕಳಿಸಲಾಗಿ ಆ ಅರಸನು ಮಣಿದದರಿಂದ ಅವನನ್ನು ಹಿಡಿದು ಬೇರೆ ಊರಿನಲ್ಲಿ ಇರಿಸಿದ್ದಾರೆ. ಈ ಸಣ್ಣ ಕಾಳಗವನ್ನು ಪ್ರಸ್ತಾಪಿಸುವದು ಯಾಕೆ ಅಗತ್ಯವಾಯಿತೆಂದರೆ: ಆ ಸೈನ್ಯದೊಂದಿಗೆ ಮಹಾರಾಣಿಚಕ್ರವರ್ತಿನಿಯವರ ಕಿರಿಯ ಕುಮಾರ್ತೆಯವರ ಪತಿಯಾದ ಪ್ರಿನ್ಸ್ ಹೆನ್ರಿಯವರು ಹೋಗಿದ್ದರು. ಅವರು ಆ ಅಶಂತಿಗೆ ಮುಟ್ಟಿದ ಕೂಡಲೇ ಕಾಡುಪ್ರದೇಶದ ಜ್ವರವು ಹಿಡಿಯಿತು. ಅವರನ್ನು ಅಲ್ಲಿಂದ ಇಂಗ್ಲಾಂಡಿಗೆ ತರುವಾಗ ಮಾರ್ಗದಲ್ಲಿಯೇ ತೀರಿಹೋದರು. ಮಹಾರಾಣಿ ಚಕ್ರವರ್ತಿನಿಯವರು ತಮ್ಮ ಕಿರಿಯ ಕುಮಾರ್ತೆಯನ್ನು ರಾಜಗೃಹದಲ್ಲಿಯೇ ಇಟ್ಟುಕೊಳ್ಳಬೇಕೆಂದು ಅಪೇಕ್ಷೆಯುಳ್ಳವರಾಗಿ ಮೇಲೆ ಹೇಳಿದ ಪ್ರಿನ್ಸ್ ಹೆನ್ರಿಯವರಿಗೆ ಮದುವೆ ಮಾಡಿಸಿದ್ದರು. ಪ್ರಿನ್ಸ್ ಹೆನ್ರಿಯವರು ಅಕಾಲದಲ್ಲಿ ಮರಣವಾದದರಿಂದ ಅವರ ಪತ್ನಿಯವರೂ ಚಕ್ರವರ್ತಿನಿಯವರೂ ಮಹಾ ದುಃಖವನ್ನು ಅನುಭವಿಸುವವರಾದರು.

ಅಶಂತಿ ಸೀಮೆಯ ದಕ್ಷಿಣಲ್ಲಿ ತ್ರನ್ಸವಾಲ್ ಎಂಬುವದೊಂದು ದಚ್ಚ ಜನರು ಸ್ಥಾಪಿಸಿದ ಸ್ವತಂತ್ರ ಸಂಸ್ಥಾನವದೆ. ಪ್ರಜೆಯವರು ಅದುಕೊಂಡ ಹೆಗ್ಗಡೆ ಅದನ್ನು ಆಳುತ್ತಾನೆ. ಸೀಮೆಯಲ್ಲಿ ಇಂಗ್ಲಾಂಡ ಜರ್ಮನಿ ಮೊದಲಾದ ದೇಶಗಳಿಂದ ಉದ್ದಿಮೆಗಾಗಿಯೂ ಚಿನ್ನ ಅಗಿದು ತೆಗಿಯುವದಕ್ಕೋಸ್ಕರವಾಗಿಯೂ ಬಂದು ವಸ್ತಿಯಾಗಿರುವ ಪರದೇಶಸ್ಥರೂ ಇದ್ದಾರೆ. ಈ ಪರದೇಶಸ್ಥರ ಪ್ರೇರಣೆಯಿಂದ ಇಂಗ್ಲಿಷ ಸರದಾರನೊಬ್ಬನು ಏಳುನೂರು ಫವುಜು ಕಟ್ಟಿಕೊಂಡು ಸೀಮೆಯೊಳಗೆ ನುಗ್ಗಲು, ತ್ರನ್ಸವಾಲದವರು ಅವರೆಲ್ಲರನ್ನು ಸೋಲಿಸಿ ಸೆರೆ ಹಿಡಿದು, ಇಂಗ್ಲಿಷ ಸರಕಾರಕ್ಕೆ ಒಪ್ಪಿಸಿದರು. ಇವರು ಸರಕಾರದ ಹುಕುಮಿಲ್ಲದೆ ದವುಡು ಮಾಡಿದರೆಂಬ ಅಪಾದನೆ ಪಟ್ಟದ್ದರಿಂದ ತಕ್ಕ ವಿಚಾರಣೆಯಾಗಿ ಅವರಿಗೆ ಶಿಕ್ಷೆ ವಿಧಿಸಲಾಯಿತು. ಈ ಸೀಮೆ

ಜುಲು ದೇಶದ ಅಧಿಕಾರಿ.

ಯ ನೆರೆಯಲ್ಲಿಯೇ ಮತಬೇಲೆಲಾಂಡ್ ಮಶೋನಾಲಾಂಡ್ ಎಂಬುವ ಸೀಮೆಗಳನ್ನು ಇತ್ತಲಾಗೆ ಇಂಗ್ಲಿಷ ಸರಕಾರದವರು ಸ್ವಾಧೀನ ಪಡಿಸಿಕೊಂಡರು. ಆದರೆ ಆ ಸೀಮೆಯ ಮೂಲನಿವಾಸಿಗಳಾದ ನೀಗ್ರೊ ಜನರು ಇಂಗ್ಲಿಷ ಆಳಿಕೆಗೆ ಮಣಿಯಲೊಲ್ಲದೆ ಮಾರ್ಮಲಿತು ದೇಶದಲ್ಲಿ ವಸ್ತಿ ಮಾಡಿಕೊಂಡಿರುವ ಬಿಳೀ ಜನರನ್ನು ಸಂಹಾರ ಮಾಡ ಲಾರಂಭಿಸಿದ್ದಲ್ಲದೆ ಬಂಡಾಯವನ್ನು ಅಣಗಿಸುವದಕ್ಕೆ ಕಳಿಸಿದ ಸೈನ್ಯವನ್ನು ಎದುರಿಸಿ ಯುದ್ಧ ಮಾಡುತ್ತಾರೆ. ಆದರೆ ಬೇಗನೆ ಸಮಾಧಾನವು ನೆಲೆಗೊಳ್ಳುವಂತೆ ತೋರು ತ್ತದೆ.

ಅರ್ಮೆನ್ಯದಲ್ಲಿ ಕ್ರೈಸ್ತರು ತುರ್ಕಿ ಸರಕಾರದವರಿಂದ ಬಹಳ ಹಿಂಸೆ ಪಡುತ್ತಾರೆ. ಅರ್ಮೆನ್ಯರು ವಿದ್ಯಾಬುದ್ಧಿಯಲ್ಲಿಯೂ ಉದ್ಧಿಮೆಯಲ್ಲಿಯೂ ಅಭಿವೃದ್ಧಿ ಮಾಡು ತ್ತಾ ಹೆಚ್ಚೆಚ್ಚಾಗಿ ಉನ್ನತ ಸ್ಥಿತಿಗೆ ಬರುತ್ತಾರೆ. ಅರ್ಮೆನ್ಯರ ಪುರೋಭಿವೃದ್ಧಿಯನ್ನು ನೋಡಿ ತುರ್ಕರು ಅವರನ್ನು ಸಂಹಾರ ಮಾಡುವದಕ್ಕೆ ಪ್ರಾರಂಭ ಮಾಡಿದರೆಂದು ವರ್ತಮಾನಪತ್ರಗಳಿಂದ ತಿಳಿದುಬರುತ್ತದೆ. ಕುರ್ದರು ಎಂಬವರು ನಿರಾಯುಧ ರಾದ ಅರ್ಮೆನ್ಯರು ವಸ್ತಿಯಾಗಿರುವ ಗ್ರಾಮಗಳನ್ನು ಮನೆಮಾರು ವಸ್ತುಒಡವೆ ಯಾವತ್ತು ಸುಲಿಗೆ ಮಾಡಿದ್ದಲ್ಲದೆ ಗಂಡಸರು ಹೆಂಗಸರು ಮಕ್ಕಳು ಎಂದು ನೋ ಡದೆ ಹೇರಳ ಜನರನ್ನು ಕೊಂದುಹಾಕಿದರು; ಹೆಚ್ಚುಕಡಿಮೆ ನಾಲ್ವತ್ತು ಐವತ್ತು ಸಾವಿರ ಮಂದಿ ನಾಶವಾದರು. ಅವರು ಆರಾಧನೆ ಮಾಡುವ ದೇವಾಲಯಗಳು ನೆಲ ಗತವಾದವು. ಸಾವಿರಾರು ಜನರು ಕುರ್ದರ ಉಪದ್ರವ ಸೈರಿಸಲಾರದೆ ಕಾಡುಸೇರಿ ಹೊಟ್ಟೆಗೆ ಕೂಳಿಲ್ಲದೆ ಛಳಿ ತಡಿಯುವದಕ್ಕೆ ಬಟ್ಟೆ ಬರೆ ಇಲ್ಲದೆಯೂ ಬಹಳ ಪರಿಪಾ ಟಲೆ ಪಟ್ಟರು. ಅಮೇರಿಕದ ಮತ್ತು ಯುರೋಪಿನ ಕ್ರೈಸ್ತರು ಅರ್ಮೆನ್ಯರು ಪಡುವ ಭಂಗಭವಣೆಯನ್ನು ಕೇಳಿ, ಅವರ ಸಹಾಯಾರ್ಥವಾಗಿ ಹಣ ಶೇಖರಿಸಿ ಕಳುಹಿಸು ತ್ತಾರೆ. ಎಷ್ಟು ಸಹಾಯ ಮಾಡಿದಾಗ್ಯೂ ಸಮುದ್ರದಲ್ಲಿ ಕಸಕಸೆ ಹಾಕಿದಂತೆ ಮಾತ್ರ ವಾಗುತ್ತದೆ.—ತುರ್ಕಿ ಸುಲ್ತಾನರ ಸೀಮೆಯಾಗಿರುವ ಕ್ರೇತ ಎಂಬ ದ್ವೀಪದ ನಿವಾಸಿ ಗಳು ಅರಸ್ಥಾನಕ್ಕೆ ಮಾರ್ಮಲೆತು ಯುದ್ಧ ಮಾಡುತ್ತಾರೆ. ಯುರೋಪಿನ ಪ್ರಮುಖ ಅರಸ್ಥಾನದವರು ಕ್ರೇತದ ನಿವಾಸಿಗಳ ಮನವಿಯನ್ನು ಲಕ್ಷ್ಯಕ್ಕೆ ತಂದು, ಆ ದ್ವೀಪಕ್ಕೆ ಕ್ರೈಸ್ತನಾದ ಗವರ್ನರರನ್ನು ನೇಮಿಸಿ, ಯುದ್ಧವನ್ನು ಮುಕ್ತಾಯ ಮಾಡಬೇಕೆಂದು ಸುಲ್ತಾನರಿಗೆ ಆಲೋಚನೆ ಹೇಳಿದ್ದಾರೆ. ಗ್ರೀಕ ಸಂಸ್ಥಾನದವರು ರಹಸ್ಯದಲ್ಲಿ ಕ್ರೇತ ದ್ವೀಪದವರಿಗೆ ಒತ್ತಾಸೆ ಮಾಡಬೇಕೆಂದು ಯುದ್ಧಸಾಮಗ್ರಿಯನ್ನು ಕೊಡಿಸಿದ್ದಲ್ಲದೆ ಸುಲ್ತಾನರ ಸೀಮೆಯಾದ ಮಸೆದೋನ್ಯದೊಳಗೆ ತಮ್ಮ ಸೇನೆಯನ್ನು ನುಗ್ಗಿಸಿದ್ದರಿಂದ ಯುರೋಪಿನ ಪ್ರಮುಖ ಅರಸ್ಥಾನದವರು ಹೀಗೆ ಮಾಡಬಾರದೆಂದು ಗ್ರೀಕರಿಗೆ ಆಜ್ಞೆ ಮಾಡಿದ್ದಾರೆ.

ಸ್ಪೇನ ದೇಶದ ರಾಜಧಾನಿ ಮದ್ರಿದಿನಲ್ಲಿಯೂ ಇತರ ಊರುಗಳಲ್ಲಿಯೂ ಅಂತ ರಿಕ್ಷದಲ್ಲಿ ದೊಡ್ಡದೊಂದು ಉಲ್ಕಾಪಾಷಾಣವು ಸುತ್ತಲೂ ಕೆಂಪು ಅಂಚುಳ್ಳ ಬಿಳೀ ಮೇಘಾಕಾರವಾಗಿ ಕಾಣಿಸಿಕೊಂಡು ಭೂಮಿಗೆ ತಕ್ಕಷ್ಟು ಸವಿಾಪವಾಗಿ ಬಹು ಬೇಗವಾಗಿ ಚಲಿಸುತ್ತಾ ಮಹಾ ಅಬ್ಬರದೊಡನೆ ಹೊಟ್ಟಹೋಯಿತು. ಅದು ಹೋದ ಮಾರ್ಗದಲ್ಲಿ ಬಿಳೀ ಧೂಳು ತೋರುತ್ತಿತ್ತು. ಈ ಉತ್ಪಾತವನ್ನು ಕಂಡ

ಕೂಡಲೇ. ಹಲವರು ತಲ್ಲಣಿಸಿ ಬಿದ್ದು ಸತ್ತರು. ಹಲವರು ಭೂಕಂಪವಾಗುತ್ತ ದೆಂದು ಹೆದರಿ ಬೇಗ ಹೊರಗೆ ಹೋಗಲಿಕ್ಕೆ ನೋಡುವಾಗ್ಯೆ ನೂಕುನುಗ್ಗಿನಲ್ಲಿ ಸತ್ತರು.—ಸ್ಪೇನ ಅರಸ್ಥಾನಕ್ಕೆ ಅಮೇರಿಕ ಖಂಡದ ಸವಿಾಪದಲ್ಲಿ ಕೂಬ ಎಂಬ ದ್ವೀಪವು ಒಳಿತವಾಗಿದೆ. ಆ ದ್ವೀಪವಾಸಿಗಳು ಸರಕಾರಕ್ಕೆ ಮಾರ್ಮಲೆತು ಯುದ್ಧ ಮಾಡುತ್ತಾ ಕೆಲವು ಸಾರಿ ಸರಕಾರಿ ಸೈನ್ಯವನ್ನು ಪರಾಜಯ ಪಡಿಸಿದರು. ಆದ್ದರಿಂದ ಬಂಡಾಯವನ್ನು ಅಣಗಿಸುವದಕ್ಕೆ ಸ್ಪೇನರು ಹೆಚ್ಚು ಸೈನ್ಯ ಕಳಿಸಿದ್ದಾರೆ.

ರುಸ್ಯ ಚಕ್ರವರ್ತಿಯವರ ಪಟ್ಟಾಭಿಷೇಕದ ಮಹೋತ್ಸವವು ಮಸ್ಕಾವು ಪಟ್ಟಣದಲ್ಲಿ ನೆರವೇರಿತು. ಇದಕ್ಕಾಗಿ ಬೇರೆ ಬೇರೆ ಅರಸ್ಥಾನಗಳಿಂದ ಪ್ರತಿನಿಧಿಗಳು ಬಂದಿದ್ದರು. ಚಕ್ರವರ್ತಿಯವರು ಉತ್ಸವದ ಜ್ಞಾಪಕಾರ್ಥವಾಗಿ ಪ್ರಜೆಗಳಿಂದ ವಸೂಲಾಗದೆ ಉಳಿದ ಕಂದಾಯವನ್ನು ಮಾಪು ಮಾಡಿ, ಇನ್ನು ಹತ್ತು ವರ್ಷಗಳ ವರೆಗೆ ಕಂದಾಯವನ್ನು ಅರೆವಾಸಿ ಕಡಿಮೆ ಮಾಡಿದ್ದಲ್ಲದೆ ಸಣ್ಣ ಸಣ್ಣ ತಪ್ಪುಗಳಿಗಾಗಿ ಸೆರೆಮನೆಯಲ್ಲಿ ಬಿದ್ದವರನ್ನು ಬಿಡುಗಡೆ ಮಾಡಿಸಿದರು. ಪಟ್ಟಣದ ಹೊರಗೆ ಪ್ರಜೆಗಳಿಗಾಗಿ ಮಹಾ ಔತಣ ಮಾಡಿಸಿದರು. ಅಲ್ಲಿ ಬೇಗ ಸೇರಬೇಕೆಂದು ಸಾವಿರಸಾವಿರ ಜನರು ಓಡುವಾಗ ನೂಕುನುಗ್ಗಾಗಿ ಒಬ್ಬರನ್ನೊಬ್ಬರು ತುಳಿದದರಿಂದ ಬಹುಜನರು ಗಾಸಿಯಾಗಿ ಹೋದರು. ಮಹಾರಾಜರು ಈ ಸುದ್ದಿ ಕೇಳಿ ಸತ್ತವರ ಕುಟುಂಬಗಳ ಜೀವನಾರ್ಥವಾಗಿ ಹಣ ಕೊಟ್ಟು ಸಹಾಯ ಮಾಡಿದರು.

ರುಸ್ಯ ಚಕ್ರವರ್ತಿ ಎನೇ ನಿಕೊಲೌಸ Nicolaus II.

ಚೀನಿಯವರಿಗೂ ಜಪನಿಯವರಿಗೂ ಯುದ್ಧವುಂಟಾಯಿತೆಂತಲೂ ಚೀನಿಯವರು ಸೋತು ಹೇರಳ ಹಣ ಕೊಟ್ಟು ಸಂಧಾನ ಮಾಡಿದರೆಂತಲೂ ಹಿಂದಿನ ಪಂಚಾಂಗದಲ್ಲಿ ಪ್ರಸ್ತಾಪಿಸಿದೆವು. ಯುದ್ಧದ ಅನಂತರದಲ್ಲಿಯೇ ಚೀನಿಯರಲ್ಲಿ ಮುಖ್ಯವಾಗಿ ಅಧಿಕಾರಸ್ಥರಲ್ಲಿ ಪರದೇಶಸ್ಥರಾದ ಯುರೋಪೀಯರ ಮೇಲೆ ಕಡು ದ್ವೇಷಭಾವವು ತಲೆ

ದೋರುವದಾಯಿತು. ದ್ವೇಷಭಾವದ ಉಗ್ರತ್ವಕ್ಕೆ ಮೊತ್ತಮೊದಲು ಅಲ್ಲಿರುವ ಮಿಶನೆರಿಗಳು ಆಹುತಿಯಾದರು. ಕೆಲವು ಊರುಗಳಲ್ಲಿ ಚೀನಿಯವರು ಕೋಪೋನ್ಮತ್ತರಾಗಿ ಮಿಶನೆರಿಗಳು ವಾಸವಾಗಿರುವ ಮನೆಗಳನ್ನು ಹೊಕ್ಕು ಸರ್ವಸ್ವವನ್ನು ಸೂರೆ ಮಾಡಿ ಕೈಗೆ ಸಿಕ್ಕಿದ ಪುರುಷರನ್ನೂ ಸ್ತ್ರೀಯರನ್ನೂ ಭೇದವಿಲ್ಲದೆ ಸಂಹಾರ ಮಾಡಿದರು. ಈ ವರ್ತಮಾನವು ಇಂಗ್ಲಾಂಡಿಗೆ ಮುಟ್ಟುತ್ತಲೇ ಪ್ರಧಾನ ಮಂತ್ರಿಯವರು ಚೀನಿ ಮಹಾರಾಜರನ್ನು ಎಚ್ಚರಿಸಿದ್ದಲ್ಲದೆ ಸಂಹಾರ ನಡೆದ ಸ್ಥಳಗಳಲ್ಲಿ ತಮ್ಮ ಕಡೆಯಿಂದಲೂ ನಿಯುಕ್ತರನ್ನು ಕಳುಹಿಸಿ ವಿಚಾರಣೆ ಮಾಡಿಸಿ ಅಪರಾಧಿಗಳಿಗೆ ತಕ್ಕ ದಂಡನೆ ಮಾಡಿಸಿದರು. ಈಗ ಅಲ್ಲಿ ತಮ್ಮಣಿಯದೆ. ಚೀನ ದೇಶದಲ್ಲಿರುವ ಮಿಶನೆರಿಗಳು ತಮ್ಮಿಂದ ಚೀನ ರಾಜ್ಯಕ್ಕೆ ವಿದ್ಯಾವಿಷಯದಲ್ಲಿಯೂ ಸಾಮಾನ್ಯ ಕೈಗಾರಿಕೆಯ ಸುಕೃತದ ವಿಷಯಗಳಲ್ಲಿಯೂ ಎಷ್ಟು ಮೇಲು ಉಂಟಾಯಿತೆಂತಲೂ ಸಮಸ್ತ ಮಿಶನೆರಿಗಳೂ ಅವರ ಉಪದೇಶದಿಂದ ಕ್ರೈಸ್ತಧರ್ಮವನ್ನು ಸ್ವೀಕರಿಸಿದ ದೇಶಸ್ಥರೂ ರಾಜ್ಯಕಾರ್ಯಗಳಲ್ಲಿ ಪ್ರವೇಶವಾಗದೆ ಸಮಾಧಾನವನ್ನು ಕಾವಾಡುವವರೂ ರಾಜನಿಷ್ಠರೂ ದೇಶದ ಹಿತವನ್ನು ಕಾಂಕ್ಷಿಸುವವರೂ ಆಗಿದ್ದಾರೆಂತಲೂ ವಿವರವಾಗಿ ಬಿನ್ನವತ್ತಳಿ ಬರೆದು ಮಹಾರಾಜರಿಗೆ ಒಪ್ಪಿಸಿದ್ದಾರೆ.—ಚೀನಿ ಅರಸ್ಥಾನದ ಕಡೆಯಿಂದ ರುಸ್ಯ ಮಹಾರಾಜರ ಪಟ್ಟಾಭಿಷೇಕ ಮಹೋತ್ಸವಕ್ಕಾಗಿ ಯುರೋಪಿಗೆ ಹೋದ ಚೀನಿ ರಾಯಭಾರಿಯು ರುಸ್ಯ ಮಹಾರಾಜರ ಭೇಟಿಮಾಡಿದನಂತರ ಜರ್ಮನಿ ಫ್ರಾನ್ಸು ಇಂಗ್ಲಾಂಡು ದೇಶಗಳಿಗೂ ಪಯಣ ಮಾಡಿ ಅಮೇರಿಕದ ಮಾರ್ಗವಾಗಿ ಸ್ವದೇಶಕ್ಕೆ ಮರಳಿದರು.—ಜಪನದವರು ಚೀನಿಯವರಿಂದ ಯುದ್ಧದ ಖಂಡನೆ ಹಣವಾಗಿ ಈಸಿಕೊಂಡ ಹಣದಿಂದ ಯುದ್ಧನಾವೆಗಳನ್ನು ಮುಂತಾಗಿ ಕಟ್ಟಿಸುವದರಲ್ಲಿದ್ದಾರೆ. ಜಪನ ದೇಶದ ಒಂದು ಭಾಗದಲ್ಲಿ ಸಮುದ್ರದಿಂದ ಮಹಾ ದೊಡ್ಡ ತೆರೆ ಉಕ್ಕಿ ಬಂದು ಊರೊಳಗೆ ಹೊಕ್ಕು ಸಾವಿರ ಕಟ್ಟಳೆಯಲ್ಲಿ ಮನುಷ್ಯರನ್ನೂ ಇತರ ಪ್ರಾಣಿಗಳನ್ನೂ ನಾಶ ಮಾಡಿತು.

ಅಮೇರಿಕದಲ್ಲಿ ಮೆಕ್ಸಿಕೋ ಎಂಬ ದೇಶದ ಒಂದು ಸರೋವರದಲ್ಲಿ ಅಪೂರ್ವವಾದ ಉತ್ಪಾತವು ಸಂಭವಿಸಿತು. ಸರೋವರದ ನೀರು ಸುತ್ತಿಸುತ್ತಿ ದೊಡ್ಡ ಸರ್ಪಾಕಾರವಾಗಿ ಹೊರಳುತ್ತಾ ನಾಲ್ಕು ಕಡೆಯಿಂದಲೂ ಮಧ್ಯಭಾಗಕ್ಕೆ ಓಡಿ ಅಲ್ಲಿ ಉಂಟಾದ ಅಗಾಧವಾದ ತಗ್ಗಿಗೆ ಸೇರಿತು. ಸರೋವರದ ಅಡಿಯು ಕಂತುವದರಿಂದ ಉಂಟಾಗಿದ್ದ ಆ ಅಗಾಧ ಹೊಂಡವೂ ನೀರಿನ ಸುಳಿಯೂ ಬಹು ವಿಶಾಲವಾಗಿದ್ದು, ಗಾಳ ಹಾಕುವದಕ್ಕೆ ಜನರು ಕೂತುಕೊಂಡು ಹೋಗಿದ್ದ ಅನೇಕ ದೋಣಿಗಳನ್ನು ಅದು ಸೆಳಕೊಂಡು ಮುಣುಗಿಸಿತು. ನೀರಿನ ಸೆಳವಿಗೆ ದೂರವಿದ್ದ ದೋಣಿಗಳೂ ಸೆಳವಿನ ಒತ್ತರಕ್ಕೆ ಸಿಕ್ಕಿ ಮುಣುಗಿದವು. ದೋಣಿಯವರು ಕೆಲವರು ಸೆಳವನ್ನು ತಪ್ಪಿಸಿಕೊಳ್ಳುವದಕ್ಕೆ ಯಾವತ್ತೂ ಶಕ್ತಿಯಿಂದ ಹುಟ್ಟು ಹಾಕಿದರೂ ತೀರದೆ ದೋಣಿಗಳೊಡನೆ ಕಾಣದೆ ಹೋದರು. ಐವತ್ತು ಮೈಲು ಉದ್ದವೂ ಹತ್ತು ಮೈಲು ಅಗಲವೂ ಆಗಿದ್ದ ಆ ಸರೋಸರವು ಸಣ್ಣದಾಯಿತು. ಈ ಉತ್ಪಾತವು ಭೂಕಂಪದಿಂದ ಆದದ್ದು; ನೀರು ಸುಳಿಯುತ್ತಿರುವಾಗ ನೆಲದ ಅಡಿಯಲ್ಲಿ ಗಂಭೀರವಾದ ಘೋಷವು ಕೇಳುತ್ತಿತ್ತು.—ಅಮೇರಿಕದಲ್ಲಿ ಒಬ್ಬಳು ಧನವಂತೆ ಸ್ತ್ರೀಯು ಹಿಂದುಸ್ಥಾನದವರು ಕ್ರೈಸ್ತಧರ್ಮದ ಸತ್ಯಾರ್ಥವನ್ನು ತಿಳಿಯುವವರಾಗಬೇಕೆಂದು ಬಹಳವಾಗಿ ಅಪೇಕ್ಷಿಸಿ

ವಿದ್ವಾಂಸರಾದವರು ಹಿಂದುಸ್ಥಾನಕ್ಕೆ ಕಾಲಕಾಲಕ್ಕೂ ಹೋಗಿ ಕ್ರೈಸ್ತ ಧರ್ಮದ ವಿಷಯದಲ್ಲಿ ಉಪನ್ಯಾಸಗಳನ್ನು ಮಾಡುವ ಹಾಗೆ ಅವರ ಖರ್ಚಿನ ಬಗ್ಗೆ ಹೇರಳ ದ್ರವ್ಯ ಕೊಟ್ಟಿದ್ದಾಳೆ. ಹಾಗೆ ಉಪನ್ಯಾಸ ಮಾಡುವ ಪಂಡಿತರು ಕೆಲವರು ಸದ್ಯಾ ಬರುವವರಿದ್ದಾರೆ. ವಿವೇಕಾನಂದಸ್ವಾಮಿ ಎಂತ ಹೆಸರಿಟ್ಟುಕೊಂಡ ಒಬ್ಬ ಬಂಗಾಳಿ ಮನುಷ್ಯನು ಅಮೇರಿಕದವರನ್ನು ಹಿಂದುಗಳಾಗಿ ಮಾಡುತ್ತೇನೆಂದು ಹೇಳಿ, ಅಲ್ಲಿಗೆ ಹೋಗಿ, ಒಂದೆರಡು ವರ್ಷಗಳಿಂದ ಉಪನ್ಯಾಸಗಳನ್ನು ಮಾಡುತ್ತಿದ್ದನು. ಅವನ ಉಪನ್ಯಾಸಗಳನ್ನು ಕೇಳಿದವರು ಹಲವರು ಅವನ ವಾಕ್ಚಾತುರ್ಯಾದಿಗಳಿಗೆ ಮೆಚ್ಚಿದರಲ್ಲದೆ ಅವನ ಶಿಷ್ಯರಾಗಲಿಲ್ಲಾ. ಅವನು ಮಾಡುವ ಉಪದೇಶವು ಸ್ವಕಪೋಲಕಲ್ಪಿತವಲ್ಲದೆ ಭರತಖಂಡದ ಯಾವ ಶಾಸ್ತ್ರದಲ್ಲಿ ಪ್ರತಿಪಾದಿತವಾದದ್ದಲ್ಲ. ಅಲ್ಲಿಂದ ಅವನು ಇಂಗ್ಲಾಂಡಿಗೆ ಬಂದು ಉಪನ್ಯಾಸ ಮಾಡುವದಕ್ಕೆ ಪ್ರಾರಂಭಿಸಿದ್ದಾನೆ.

ಪರಮಪೂಜ್ಯನಾಮವು.

ಲೋಕದಲ್ಲಿ ಪರಮಪೂಜ್ಯವಾದ ನಾಮವು ಯಾವದು ಅಂದರೆ ದೇವರ ನಾಮವೇ ಎಂದು ಹೇಳಬೇಕು. ದೇವರ ನಾಮವೆಂದರೆ ಮನುಷ್ಯರು ಆತನಿಗೆ ಹೆಸರಿಡಲಾರರು. ಆತನ ಪವಿತ್ರ ಗುಣಾವಳಿಯನ್ನೂ ಮಹಿಮೆಯನ್ನೂ ಶೋಧಿಸಿದವರಿಲ್ಲಾ. ಸಮಸ್ತಲಕ್ಷಣಾಯೋಗ ಏವ ಯಸ್ಯೋಪಲಕ್ಷಣಂ || ಎಂಬ ಶ್ಲೋಕದ ಪ್ರಕಾರ ಎಷ್ಟೆಷ್ಟು ಶುಭ ಗುಣಗಳನ್ನು ಆಲೋಚಿಸಿದರೂ ಅವೆಲ್ಲವೂ ಉಪಲಕ್ಷಣ ಮಾತ್ರವಾಗುತ್ತವೆ. ಭಗವಂತನು, ಪರಮಾತ್ಮನು, ಪರಮೇಶ್ವರನು, ಭಕ್ತವತ್ಸಲನು, ಪತಿತಪಾವನನು, ದೀನಬಂಧು ಎಂಬೀ ಮೊದಲಾದ ನಾಮಗಳಿಂದ ಭಕ್ತರು ಆತನನ್ನು ಕೊಂಡಾಡುತ್ತಾರೆ. ಈ ನಾಮಗಳಿಗೆ ಆತನು ಯೋಗ್ಯನಾಗಿದ್ದಾನೆ. ಈ ನಾಮಗಳಲ್ಲದೆ ದೇವರೇ ಕರುಣೆಯಿಂದ ಮನುಷ್ಯರಿಗೆ ಪ್ರಕಟ ಮಾಡಿದ ಇನ್ನೊಂದು ಪೂಜ್ಯವಾದ ನಾಮವದೆ. ಆ ನಾಮದಿಂದ ಆತನು ಪವಿತ್ರ ವೇದದಲ್ಲಿ ತನ್ನನ್ನು ಹೊಗಳಿಸಿಕೊಂಡಿದ್ದಾನೆ. ಅದು ಯಾವದು ಎಂತ ವಿವರಿಸುತ್ತೇವೆ. ಬಹು ಪುರಾತನ ಕಾಲದಲ್ಲಿ ಮಿಸ್ರ ದೇಶದಲ್ಲಿ ಮೋಶೆ ಎಂಬ ಮಹಾಜ್ಞಾನಿ ಇದ್ದನು. ಅವನು ಆ ದೇಶದಿಂದ ಬಹು ದೂರವಾದ ಮಿದಿಯಾನ ದೇಶಕ್ಕೆ ತೆರಳಿ ಹೋಗಿ ಅಲ್ಲಿ ಊರಿನ ಹೆಗ್ಗಡೆಯಲ್ಲಿ ತಂಗಿ, ಅವನ ಅಳಿಯನಾಗಿ ಪಶುಪಾಲನೆ ಮಾಡಿಕೊಂಡಿದ್ದನು. ಒಂದಾನೊಂದು ದಿನ ಅವನು ಅರಣ್ಯದಲ್ಲಿ ಪಶುಗಳನ್ನು ಮೇಯಿಸುತ್ತಿರುವಾಗ ಎದುರಿನಲ್ಲಿ ಒಂದು ಹೊದರಿನಲ್ಲಿ ಜಾಜ್ವಲ್ಯಮಾನವಾದ ಬೆಂಕಿಯನ್ನು ಕಂಡು ಹತ್ತರ ಹೋಗಿ ದೃಷ್ಟಿಸಲಾಗಿ, ಮೋಶೆ, ಮೋಶೆ ಎಂದು ತನ್ನ ಹೆಸರು ಕರೆದು ಮಾತಾಡುವ ಧ್ವನಿ ಕೇಳ್ದಿದನು. ಆವಾಗ ಮೋಶೆಗೂ ದೇವರಿಗೂ ಸಂಭಾಷಣೆಯಾಗುವಲ್ಲಿ, ಸ್ವಾಮೀ, ನಿನ್ನ ನಾಮವೇನು? ಯಾವ ನಾಮದಿಂದ ನಿನ್ನನ್ನು ಮನುಷ್ಯರ ಮುಂದೆ ಹೊಗಳಬೇಕೆಂದು ಮೋಶೆ ಪ್ರಾರ್ಥಿಸಲಾಗಿ ದೇವರು ಪವಿತ್ರ ನಾಮವನ್ನು ಅವನಿಗೆ ಪ್ರಕಟಿಸಿದನು. ಅದೇ **ಯೆಹೋವ** ಎಂಬ ನಾಮವು. ಅಂದರೆ: ಅನಾದ್ಯನಂತನಾದ ಸ್ವಾಮಿ; ಇರುವವನೇ ಆಗಿರುವವನು.

ಳಲ ದೇವರು ಒಬ್ಬನು; ದೇವರಿಗೂ ಮನುಷ್ಯರಿಗೂ ಮಧ್ಯಸ್ಥನು ಒಬ್ಬನು—

ಅದು ಮನುಷ್ಯರು ದೇವರಿಗಿಟ್ಟ ನಾಮವಲ್ಲಾ, ದೇವರೇ ಮನುಷ್ಯರಿಗೆ ಪ್ರಕಟಿಸಿದಂಥಾ, ಮನುಷ್ಯರು ಭಯಭಕ್ತಿಯಿಂದ ಉಚ್ಚರಿಸ ತಕ್ಕಂಥಾ ನಾಮವು.

ಮೋಶೆ ಬರೆದ ಪಂಚಗ್ರಂಥವೆಂಬ ಪುಸ್ತಕದಲ್ಲಿ ಯೆಹೋವ ಎಂಬ ನಾಮವೇ ಪ್ರಸಿದ್ಧವಾಗಿದೆ. ಅನಂತರದಲ್ಲಿ ಯೆಹೂದಿ ಜನಾಂಗದಲ್ಲಿ ಹುಟ್ಟಿದ ದೀರ್ಘದರ್ಶಿಗಳು ಜನರಿಗೆ ದೇವರ ವಾಕ್ಯವನ್ನು ಸಾರುವಾಗ, ದೇವರಾದ ಯೆಹೋವನು ಹೀಗೆ ಹೇಳುತ್ತಾನೆ, ಎಂದು ಹೇಳುತ್ತಿದ್ದರು. ದೇವರು ಮನುಷ್ಯರಿಗೆ ತಿಳಿಸಬೇಕೆಂದು ಮೋಶೆಗೆ ಹತ್ತು ಆಣತಿಗಳನ್ನು ನಿವೇದಿಸಿದನು. ಮೊದಲನೇ ಆಣತಿಯಾವದಂದರೆ: ನಿನ್ನ ದೇವರಾದ ಯೆಹೋವ ನಾನೇ, ನನ್ನ ಮುಂದೆ ನಿನಗೆ ಬೇರೆ ದೇವರು ಇರಬಾರದು. ಎರಡನೆ ಆಣತಿ: ಮೇಲಣ ಆಕಾಶದಲ್ಲಾಗಲಿ ಕೆಳಗಣ ಭೂಮಿಯಲ್ಲಾಗಲಿ ಇರುವ ಯಾವದೊಂದು ರೂಪವನ್ನೂ ವಸ್ತುವನ್ನೂ ಮಾಡಿಕೊಂಡು ಅದಕ್ಕೆ ಸಾಷ್ಟಾಂಗವೆರಗಿ ಪೂಜಿಸಬೇಡಾ. ಮೂರನೇದು: ನಿನ್ನ ದೇವರಾದ ಯೆಹೋವನ ನಾಮವನ್ನು ವ್ಯರ್ಥವಾಗಿ ನಾಲಿಗೆಯಲ್ಲಿ ಎತ್ತಬೇಡಾ.

ದೇವರನ್ನು ಹ್ಯಾಗೆ ಉಪಾಸನೆ ಮಾಡಬೇಕೆಂಬುವದಕ್ಕೆ ಮೋಶೆ ಹೇಳಿದ್ದು: ನಿನ್ನ ದೇವರಾದ ಯೆಹೋವನನ್ನು ನಿನ್ನ ಪೂರ್ಣ ಹೃದಯದಿಂದಲೂ ನಿನ್ನ ಪೂರ್ಣ ಪ್ರಾಣದಿಂದಲೂ ನಿನ್ನ ಪೂರ್ಣ ಬುದ್ಧಿಯಿಂದಲೂ ನಿನ್ನ ಪೂರ್ಣ ಶಕ್ತಿಯಿಂದಲೂ ಪ್ರೀತಿ ಮಾಡಬೇಕು. ಈ ವಾಕ್ಯವು ಧರ್ಮಸರ್ವಸ್ವವಾಗಿದೆ.

ಈಗ ನಮ್ಮ ದೇಶದ ಆಚಾರ್ಯರೂ ಶಾಸ್ತ್ರಿಗಳೂ ಪ್ರಶ್ನೆ ಮಾಡಬಹುದು: ಇಂಥಾ ಪರಮ ಪೂಜ್ಯವಾದ ಯೆಹೋವ ಎಂಬ ನಾಮವು ನಮ್ಮ ಶ್ರುತಿಸ್ಮೃತಿಗಳಲ್ಲಿ ಎಲ್ಲಿಯಾದರೂ ಗೋಚರವಾಗುತ್ತದೋ? ಈ ಪ್ರಶ್ನೆಗೆ ಉತ್ತರವು: ದೇವರು ಮೋಶೆಗೆ ತಿಳಿಯಪಡಿಸಿ ಯೆಹೂದಿ ಜನಾಂಗದಲ್ಲಿ ಪ್ರಸಿದ್ಧವಾದ ಆ ನಾಮವು ಅವರಿಂದಲೇ ಇತರ ಜನಾಂಗಗಳಲ್ಲಿಯೂ ಪ್ರಸಿದ್ಧವಾಯಿತೆಂಬುವದಕ್ಕೆ ಸುಳುಹು ಕಾಣುತ್ತದೆ. ಯೆಹೂದಿ ಜನರು ಯಾವ ಯಾವ ಜನಾಂಗದವರೊಂದಿಗೆ ವಹಿವಾಟು ಮಾಡಿದರೋ ಆ ಜನಾಂಗಗಳೂ ಅವರಿಂದ ಆ ನಾಮವನ್ನು ಕೇಳಿದರೆಂಬುವದಕ್ಕೆ ಸಂದೇಹವಿಲ್ಲಾ. ಹೀಗಾಗಿ ಆ ನಾಮವು ಋಗ್ವೇದದ ಕೆಲವು ಸೂಕ್ತಗಳಲ್ಲಿ ಕಾಣುತ್ತದೆ. ಅದು ವೇದಸೂಕ್ತಗಳನ್ನು ರಚಿಸಿದ ಋಷಿಗಳ ಬಾಯಿಯಲ್ಲಿ ಸ್ವಲ್ಪ ವಿಕೃತಿ ಪಟ್ಟು ಎರಡು ರೂಪಗಳಲ್ಲಿ ಪ್ರಯೋಗವಾಗಿದೆ. ಅವು ಯಾವವಂದರೆ: ೧ನೇದು ಯಹು ಎಂಬುವದು, ಇದರ ಸಂಬೋಧನವಿಭಕ್ತಿ ಯಹೋ ಎಂತಾಗುತ್ತದೆ. ಇದು ಸಹಸಃ ಎಂಬ ಶಬ್ದದೊಂದಿಗೆ ಸಹಸೋ ಯಹೋ ಎಂತ ಋಗ್ವೇದದಲ್ಲಿ ಏಳು ಸಾರಿ ಬರುವದು. ಇದು ಅಗ್ನಿಗೂ ಅಂಗೀರಸನಿಗೂ ವಿಶೇಷಣವಾಗಿರುವಾಗ ಪ್ರಖ್ಯಾತ ವೇದಭಾಷ್ಯಕಾರನಾದ ಸಾಯಣಾಚಾರ್ಯನು ಬಲಸ್ಯ ಪುತ್ರ ಅಂದರೆ ಬಲನ ಮಗನೇ ಎಂತ ಟೀಕಿಸಿದ್ದಾನೆ. ಇಂದ್ರನಿಗೆ ವಿಶೇಷಣವಾದಾಗ ಶ್ರೇಷ್ಠ ಇಂದ್ರನೇ ಎಂತ ಟೀಕಿಸಿದ್ದಾನೆ. ೨ನೇದು: ಯಹ್ವ ಎಂಬುವದು ಗುಣವಾಚಕವಾಗಿ ಪ್ರಯೋಗವಾಗಿದೆ. ಇದರಲ್ಲಿ ಹ ವ ಎಂಬ ಎರಡು ವ್ಯಂಜನಗಳ ನಡುವೆ ಓಕಾರವನ್ನು ಸೇರಿಸಿದರೆ, ಸರಿಯಾಗಿ ಯಹೋವಾ ಎಂತ ಆಗುತ್ತದೆ. ಯಹ್ವ ಎಂಬ ಶಬ್ದವು ವೇದದಲ್ಲಿ ಬಹಳ ಸಾರಿ ಬರುತ್ತದೆ. ಅದಕ್ಕೆ ಸಾಯಣಾಚಾರ್ಯನು ದೊಡ್ಡ ಇಲ್ಲವೆ

ಪರಮ ಎಂತ ಅರ್ಥಕೊಟ್ಟಿದ್ದಾನೆ. ಯಹ್ವಮಗ್ನಿಂ ಅಂದರೆ ದೊಡ್ಡ ಅಗ್ನಿಯನ್ನು, ಅಗ್ನೇ ಯಹ್ವಸ್ಯ ತವ ಭಾಗಧೇಯಂ ಅಂದರೆ ಅಗ್ನಿಯೇ ದೊಡ್ಡವನಾದ ನಿನ್ನ ಭಾಗ್ಯವು, ನದ್ಯಃ ಸಪ್ತಯಹ್ವೀ ಅಂದರೆ ಏಳು ದೊಡ್ಡ ನದಿಗಳು. ಹೀಗೆ ಯಹ್ವ ಎಂಬ ಮಾತು ಮೂವತ್ತು ನಾಲ್ಕು ಸಾರಿ ಬರುತ್ತದೆ. ಯಹು ಯಹ್ವ ಎಂಬ ಎರಡು ಹೆಸರು ಸಂಸ್ಕೃತವಲ್ಲದ್ದರಿಂದ ಅವುಗಳಿಗೆ ಧಾತ್ವರ್ಥವಾಗುವದಿಲ್ಲಾ. ಅವು ಪುರಾತನ ಋಗ್ವೇದದಲ್ಲಿಯೇ ಕಾಣುತ್ತಾವಲ್ಲದೆ ಅನಂತರದಲ್ಲಿ ಉಂಟಾದ ಸ್ಮೃತಿಪುರಾಣೇತಿಹಾಸ ಮುಂತಾಗಿ ಯಾವ ಗ್ರಂಥಗಳಲ್ಲಿಯೂ ಕಾಣುವದಿಲ್ಲಾ.

ಋಗ್ವೇದದಲ್ಲಿ ಬರುವ ಯಹೋ ಯಹ್ವ ಎಂಬೆರಡು ಪದಗಳು ಮಹಾದೇವರ ಪರಮಪೂಜ್ಯವಾದ ಯಹೋವಾ ಎಂಬ ನಾಮದ ಶೇಷಾಂಶವು. ಆ ನಾಮದ ಘನವಾದ ಅರ್ಥವನ್ನು ಋಷಿಗಳು ಮರೆತಿದ್ದರೆಂದು ಸಾಯಣನ ಭಾಷ್ಯದಿಂದ ತಿಳಿಯಬಹುದು. ಶಬ್ದವು ಭಾಷೆಯಲ್ಲಿ ಕಾಣದೆ ಹೋದಂತೆ ಸತ್ಯದೇವರ ಜ್ಞಾನವೂ ಋಷಿಗಳಲ್ಲಿ ಮಾಜಿತು. ಅವರೂ ಇತರ ಮನುಷ್ಯರೂ ದೇವರನ್ನು ತಿಳಿದಾಗ್ಯೂ ದೇವರೆಂದು ಮಹಿಮೆ ಪಡಿಸದೆ ದೇವರ ಜ್ಞಾನವೆಂಬ ನಿಕ್ಷೇಪವನ್ನು ಶುದ್ಧ ಹೃದಯದಲ್ಲಿಟ್ಟುಕೊಳ್ಳದೆ ಹೋದದರಿಂದ ಅವರ ಹೃದಯವು ಅಂಧಕಾರಮಯವಾಯಿತು. ಕತ್ತಲೆಯಲ್ಲಿ ಬಿದ್ದವನು ಕಣ್ಣು ಕಾಣದೆ ತಡವ್ಯಾಡುವಂತೆ ಮನುಷ್ಯರು ಅಜ್ಞಾನಾಂಧಕಾರದಲ್ಲಿ ತೊಳಲುತ್ತಾ ನಿರ್ಮಾಣ ಕರ್ತನು ವಿಶ್ವದಲ್ಲಿಟ್ಟ ಮಹಾ ಶಕ್ತಿಗಳಿಗೆ ಹೆದರಿ ಅಗ್ನಿ ವಾಯು ಸೂರ್ಯರನ್ನು ದೇವತೆಗಳಾಗಿ ಮಾಡಿ ಇವರೂ ಸಾಲದೆ ಮೂವತ್ತು ಮೂರು ದೇವತೆಗಳನ್ನು ಏರ್ಪಡಿಸಿದ್ದಲ್ಲದೆ ಬರಬರುತ್ತಾ ಸಾವಿರಾರು ದೇವತೆಗಳನ್ನು ಕಲ್ಪಿಸಿದರು. ಇಷ್ಟಿದ್ದಾಗ್ಯೂ ಋಗ್ವೇದದ ೧೦ನೆ ಮಂಡಲದಲ್ಲಿ ಹಿರಣ್ಯಗರ್ಭಃ ಸಮವರ್ತತಾಗ್ರೇ ಎಂಬ ಸೂಕ್ತದಲ್ಲಿ ಕಸ್ಮೈ ದೇವಾಯ ಹವಿಷಾ ವಿಧೇಮ ಅಂದರೆ ಯಾವ ದೇವರಿಗೆ ಹವಿಸ್ಸ್ಯದಿಂದ ಹೋಮ ಮಾಡುವ ಎಂಬುವ ಮಾತು ಪದೇಪದೇ ಬರುತ್ತದೆ. ಆದ್ದರಿಂದ ಅವರಿಗೆ ಯಾವ ದೇವರು ನಿಜವಾದವನು ಎಂಬ ಗೊತ್ತು ಇಲ್ಲದೆ ಸಂದೇಹವಿತ್ತು ಎಂಬದು ವಿಶದವಾಗಿದೆ. ನಮ್ಮ ದೇಶದವರು ಮಾತ್ರ ಸತ್ಯ ದೇವರನ್ನು ಮರೆಯುವ ದೋಷಕ್ಕೊಳಗಾದರೆಂದು ನಾವು ಹೇಳೆವು. ಪೂರ್ವದಲ್ಲಿ ಮಹಾ ಜ್ಞಾನಿಗಳಾದ ಯವನರ ರಾಜ್ಯದ ಅಥೇನೆ ಎಂಬ ಪಟ್ಟಣದಲ್ಲಿ ಒಮ್ಮೆ ಮಾರಿಕಾ ಉಪದ್ರವವಾದಾಗ ಜನರು ಕಕ್ಕಾಬಿಕ್ಕಿಯಾಗಿ ಊರಲ್ಲಿದ್ದ ಯಾವತ್ತೂ ದೇವತೆಗಳಿಗೆ ಆಹುತಿಕೊಟ್ಟಾಗ್ಯೂ ರೋಗ ತಮ್ಮಣೆಯಾಗದಿರಲು, ತಮಗೆ ಗೊತ್ತಿಲ್ಲದ ಇನ್ನೊಬ್ಬ ದೇವರಿಗಬಹುದೆಂದು ಮಾಡಿ ವಿಂಗಡವಾಗಿ ಒಂದು ಪೀಠವನ್ನು ಕಟ್ಟಿಸಿ, ಅದರ ಮೇಲೆ ತಿಳಿಯದ ದೇವರಿಗೆ ಎಂದು ಲಿಪಿಯನ್ನು ಕೆತ್ತಿಸಿ ಆಹುತಿ ಅರ್ಪಿಸಿದ್ದರು. ಪವಿತ್ರವೇದದಲ್ಲಿ ಬುದ್ಧಿವಂತನೂ ದೇವರನ್ನು ಹುಡುಕುವವನೂ ಇದ್ದಾನೋ ಎಂದು ನೋಡುವದಕ್ಕೆ ದೇವರು ಆಕಾಶದಿಂದ ಮನುಷ್ಯರ ಮಕ್ಕಳ ಮೇಲೆ ಕಣ್ಣಿಟ್ಟನು; ಎಲ್ಲರೂ ಹಿಂದಿರುಗಿದ್ದಾರೆ, ಏಕವಾಗಿ ಕೆಟ್ಟು ಹೋಗಿದ್ದಾರೆ, ಒಳ್ಳೇದನ್ನು ಮಾಡುವವನಿಲ್ಲಾ, ಒಬ್ಬನಾದರೂ ಇಲ್ಲಾ ಎಂದು ಹೇಳಿದ ವಾಕ್ಯವು ಸತ್ಯವಾಗಿದೆ.

ಹೀಗೆ ಮನುಷ್ಯರು ದೇವರನ್ನು ಬಿಟ್ಟು ಲೋಕಾರಣ್ಯದಲ್ಲಿ ತೊಳಲಿ ಬಳಲಿ ಕಂಗೆಡುವವರಾಗಿದ್ದಾರೆಂದು ದೇವರು ನೋಡಿ, ಮನುಷ್ಯರ ಮೇಲೆ ಕರುಣೆ ಪಟ್ಟು, ತನ್ನ

ದಿವ್ಯ ಜ್ಞಾನವನ್ನು ಸೂರ್ಯ ಪ್ರಕಾಶದೋಪಾದಿಯಲ್ಲಿ ಮೂಡಿಸಿ, ಭೂಮಂಡಲದ ಮೇಲಿರುವ ಸರ್ವೇ ಮನುಷ್ಯರಿಗೆ ಪ್ರಕಟಿಸುತ್ತಾನೆ. ರಕ್ಷಣ್ಯ ಮಾಡುವ ದೇವರ ದ ಯೆಯನ್ನೂ ಪ್ರೀತಿಯನ್ನೂ ಸುವಾರ್ತೆಯು ನಮಗೆ ಸಾರುತ್ತದೆ. ಒಬ್ಬನೇ ಸತ್ಯದೇವ ರಾಗಿರುವಾತನನ್ನು ಆತನು ಈ ಲೋಕಕ್ಕೆ ಕಳುಹಿಸಿದ ಒಬ್ಬನೇ ರಕ್ಷಕನಾದ ಯೇಸು ಕ್ರಿಸ್ತನನ್ನೂ ತಿಳಿಯುವದೇ ನಿತ್ಯಜೀವವು. ಕೆಲವರು ದೇವರ ಜ್ಞಾನವು ನಮಗೆ ಬೇಕು, ದೇವರಲ್ಲಿ ವಿಶ್ವಾಸವಿಡುತ್ತೇವೆ, ಯೇಸು ಕ್ರಿಸ್ತನು ನಮಗೆ ಬೇಡ ಎಂದನ್ನುತ್ತಾರೆ. ಹೀ ಗನ್ನುವವರು ತಮ್ಮ ಮಾತಿನ ಅಭಿಪ್ರಾಯ ತಾವೇ ಅರಿಯರು. ತಂದೆಯಿಂದ ಕೇಳಿ ಕಲಿತವರು ನನ್ನ ಬಳಿಗೆ ಬರುತ್ತಾರೆ ಎಂತಲೂ, ಮಗನು ಯಾರೆಂದು ತಂದೆಯಲ್ಲದೆ ಯಾವನೂ ಅರಿಯನು, ಮತ್ತು ತಂದೆಯು ಯಾರೆಂದು ಮಗನಲ್ಲದೆ ಮತ್ತು ಯಾ ರಿಗೆ ಪ್ರಕಟಿಸುವದಕ್ಕೆ ಮಗನು ಚಿತ್ತಯಿಸಿದನೋ ಅವನಲ್ಲದೆ ಯಾರೂ ಅರಿಯರು ಎಂತಲೂ ಯೇಸು ಕ್ರಿಸ್ತನು ಹೇಳಿದ್ದಾನೆ. ಮಗನು ಬೇಡವೆನ್ನುವ ಪ್ರತಿ ಮನುಷ್ಯನು ತಂದೆಯನ್ನು ಸಹಾ ಹೊಂದದೆ ಇದ್ದಾನೆ; ಮಗನನ್ನು ಸ್ವೀಕರಿಸುವವನು ತಂದೆಯನ್ನು ಸಹಾ ಹೊಂದಿದ್ದಾನೆ. ಈ ವಾಕ್ಯಗಳನ್ನು ವಾಚಕರು ಮನನ ಮಾಡ ತಕ್ಕದ್ದು.

ಸ್ವರ್ಗಲೋಕವು.

ಕಠೋಪನಿಷತ್ತಿನಲ್ಲಿ ಅರುಣಿಋಷಿಯ ಮಗನಾದ ನಚಿಕೇತನು ಯಮಲೋ ಕಕ್ಕೆ ತೆರಳಿ ಹೋಗಿ ಯಮನನ್ನು ಒಲಿಸಿಕೊಂಡು ಅವನಿಂದ ಕೆಲವು ವರಗಳನ್ನು ಪಡಕೊಂಡನೆಂದು ಕಥೆಯದೆ. ನಚಿಕೇತನು ಯಮನೊಂದಿಗೆ ಮಾತಾಡುವಾಗ ಸ್ವರ್ಗವನ್ನು ಕುರಿತು ಹೇಳುವದೇನಂದರೆ: ಸ್ವರ್ಗೇ ಲೋಕೇ ನ ಭಯಂ ಕಿಂಚನಾಸ್ತಿ ನ ತತ್ರ ತ್ವಂ ನ ಜರಾಯಾ ಬಿಭೇತಿ | ಉಭೇ ತೀರ್ತ್ವಾತನಾಪಿ ಪಾಸೇ ಶೋಕಾತಿಗೋ ಮೋದತೇ ಸ್ವರ್ಗಲೋಕೇ || ಅಂದರೆ: ಸ್ವರ್ಗಲೋಕದಲ್ಲಿ ಭಯವೇನೂ ಇಲ್ಲಾ, ಅಲ್ಲಿ ನೀನು (ಅಂದರೆ ಯಮನು) ಇಲ್ಲಾ; ಮುಪ್ಪು ಬರುವದೆಂಬ ಭಯವಿಲ್ಲಾ; ಮನುಷ್ಯ ನು ಹಸಿವೆ ಬಾಯಾರಿಕೆಗಳೆರಡನ್ನೂ ದಾಟಿ ಶೋಕರಹಿತನಾಗಿ ಸ್ವರ್ಗದಲ್ಲಿ ಸಂತೋ ಷ ಪಡುತ್ತಾನೆ.—ನಚಿಕೇತನು ಸ್ವರ್ಗದಲ್ಲಿ ಏನೇನುಂಟು? ಅದು ಎಂಥಾ ಸ್ಥಳವು? ಎಂದು ವರ್ಣನೆ ಮಾಡಿದ್ದು ವಾಸ್ತವ್ಯವಾಗಿದೆ. ಅಲ್ಲಿ ದುಷ್ಟ ಮೃಗಗಳಿಂದಲೂ ದುಷ್ಟ ಮನುಷ್ಯರಿಂದಲೂ ರೋಗರುಜನೆಯಿಂದಲೂ ಮರಣದಿಂದಲೂ ಬರುವ ಭಯವಿಲ್ಲಾ. ಹಸು ಬಾಯಾರಿಕೆಗಳ ಬಾಧೆಯೂ ಮುಪ್ಪಿನ ಕ್ಲೇಶವೂ ಇಲ್ಲಾ, ಅದು ನಿರಂತರ ಸುಖವಿರುವ ಲೋಕವು. ಮೇಲೆ ಹೇಳಿದ ದಾವತಿಗಳೆಲ್ಲಾ ಈ ಮರ್ತ್ಯ ಲೋಕದಲ್ಲಿ ಸಾಧಾರಣವಾಗಿದ್ದು ಸರ್ವೇ ಮನುಷ್ಯರು ಅವುಗಳಿಗೆ ಅಧೀನರಾಗಿದ್ದಾರೆ. ಈ ಲೋ ಕದ ಅನಿತ್ಯವಾದ ವಿದ್ಯಮಾನವನ್ನು ಚನ್ನಾಗಿ ಆಲೋಚನೆ ಮಾಡಿದವರು ಮರಣಾ ನಂತರವಾದರೂ ತಮಗೆ ದಾವತಿಗಳು ಯಾವವೂ ಇಲ್ಲದೆ ನಿತ್ಯವೂ ಒಂದೇ ಪ್ರಕಾರ ಸುಖವಿರುವ ಲೋಕವು ಪ್ರಾಪ್ತವಾಗಬೇಕೆಂದು ಕಾಂಕ್ಷಿಸಿದರು.

ಇಂಥಾ ಸುಖಮಯವಾದ ಲೋಕವು ಉಂಟೆಂದು ಸರ್ವ ಮನುಷ್ಯರು ಬಲ್ಲರು. ಈ ದೇಶದ ಶಾಸ್ತ್ರಗಳಲ್ಲಿಯೂ ಅದರ ವರ್ಣನೆ ಬರುತ್ತದೆ. ವೇದಗಳಲ್ಲಿ ಬರುವ ಸ್ವರ್ಗವರ್ಣನೆಯನ್ನು ಓದಿದರೆ, ಆ ಸ್ವರ್ಗವು ಲೌಕಿಕ ಮನುಷ್ಯರು ಯಾವ ಯಾವ ವಸ್ತುಗಳನ್ನು ಬಯಸುವರೋ ಅವೇ ಅಲ್ಲಿ ಧಾರಾಳವಾಗಿ ಸಿಕ್ಕುವ ಲೋಕವೆಂದು ಕಾಣುವದು. ಅಲ್ಲಿ ಅನಾದಿಯಿಂದ ದೇವತೆಗಳಾಗಿದ್ದ ಆಜಾನದೇವತೆಗಳೂ ಈ ಲೋಕದಲ್ಲಿ ಮಾಡಿದ ಪುಣ್ಯಕೃತ್ಯಗಳಿಂದ ದೇವತ್ವವನ್ನು ಪಡೆದ ಕರ್ಮದೇವತೆಗಳೂ ಇದ್ದಾರೆ; ಅವರು ನಿತ್ಯವೂ ಹರೆಯದವರಾಗಿದ್ದಾರೆ; ದೇವತಾ ಸ್ತ್ರೀಯರೂ ನರ್ತನ ಗಾಯನ ಮಾಡುವ ವೇಶ್ಯೆಗಳೂ ಇದ್ದಾರೆ. ಆದ್ದರಿಂದ ಭಗವದ್ಗೀತೆಯ ರಚಕನು ಇಂಥಾ ಸ್ವರ್ಗ ತುಚ್ಛವೆಂದೆಣಿಸಿ, "ತ್ರೈಗುಣ್ಯವಿಷಯಾ ವೇದಾ ನಿಸ್ತ್ರೈಗುಣ್ಯೋ ಭವಾರ್ಜುನ||" ಅಂದರೆ ವೇದಗಳಲ್ಲಿ ಭೌಮಿಕ ವಿಷಯಗಳು ಹೇಳಿಯವೆ. ನೀನು ಭೌಮಿಕ ವಿಷಯಗಳನ್ನು ಬಯಸ ಬೇಡಾ ಎಂದು ಕೃಷ್ಣನಿಗೆ ಬೋಧಿಸಿದನೆಂದು ಹೇಳಿದ್ದಾನೆ. ಹೀಗಿದ್ದಾಗ್ಯೂ ಸ್ವರ್ಗದ ಸುಖವು ನಿತ್ಯವಲ್ಲವಂತೆ; ಜೀವಾತ್ಮನು ಹೇರಳ ಜನ್ಮಗಳಲ್ಲಿ ಸುಳಿದಾಡುವಾಗ ಮನುಷ್ಯಜನ್ಮದಲ್ಲಿಯಾಗಲಿ ಮತ್ತೊಂದು ಜನ್ಮದಲ್ಲಿಯಾಗಲಿ ತಿಳಿದೋ ತಿಳಿಯದೆಯೋ ಮಾಡಿದ ಪುಣ್ಯಕೃತ್ಯದಿಂದ ಸ್ವರ್ಗವನ್ನು ಪಡಿಯುತ್ತಾನೆಂತಲೂ ಬಳಿಕ "ಕ್ಷೀಣೇ ಪುಣ್ಯೇ ಮರ್ತ್ಯಲೋಕಂ ವಿಶಂತಿ||" ಅಂದರೆ ಪುಣ್ಯವು ಅನುಭವಿಸಿ ಮುಗಿತಾಯವಾದನಂತರ ಮರಳಿ ಈ ಭೂಮಿಯಲ್ಲಿ ಹುಟ್ಟುತ್ತಾನೆಂತಲೂ ಅನ್ನುತ್ತಾರೆ. ಹೀಗೆ ಪದೇ ಪದೇ ಜನನ ಮರಣಗಳಿಗೊಳಗಾಗುವದೇ ಪುನರಾವೃತ್ತಿ ಎಂಬುವದು.

ಸ್ವರ್ಗವು ಅನಿತ್ಯವಾದ ಸುಖಾನುಭವನನ್ನು ಕೊಡಿಸುವ ಸ್ಥಳವಾದರೆ, ಅದನ್ನು ಪಡೆದು ಪುರುಷಾರ್ಥವೇನು? ಸುಖಾನುಭವವನ್ನು ತೊರೆದು ಬರುವದೂ ದುಃಖವಲ್ಲವೇ? ಹೀಗಾದದರಿಂದ ದರ್ಶನಕರ್ತರು ಇಂದ್ರಿಯಸುಖವಿರುವಂಥಾ, ಅವಧಿಗೊಳಪಟ್ಟಂಥಾ ಸ್ವರ್ಗವನ್ನು ಜ್ಞಾನಿಯು ಬಯಸದೆ, ಪುನರಾವೃತ್ತಿ ಇಲ್ಲದ ಮೋಕ್ಷವನ್ನು ಕಾಂಕ್ಷಿಸಬೇಕೆಂದು ಹೇಳಿದರು. ಅವರ ಮೋಕ್ಷ ಯಾವದಂದರೆ: ಜೀವಾತ್ಮನು ಸರ್ವ ಪ್ರಕಾರದ ಭಾನವನ್ನು ಕಳಕೊಂಡು ಸುಷುಪ್ತಿಯ ಅವಸ್ಥೆಯಲ್ಲಿ, ಅಂದರೆ ಕನಸಿಲ್ಲದ ಗಡುದು ನಿದ್ರೆಯಲ್ಲಿ ಇರುವದು; ಇಲ್ಲವೆ ಅದ್ವೈತದ ಪ್ರಕಾರ ಪ್ರತ್ಯಗಾತ್ಮನು ಅಧ್ಯಾತ್ಮವಾದ ಬ್ರಹ್ಮದಲ್ಲಿ ಐಕ್ಯವಾಗುವದು. ಜ್ಞಾನವಿರುವಲ್ಲಿ ರಾಗದ್ವೇಷಗಳುಂಟಾಗಿ ಪುನಹಾ ಪಾಪಕೃತ್ಯಗಳಿಗೆ ಕಾರಣವಾಗುವದೆಂಬ ಭಯದಿಂದ ಮೋಕ್ಷದಲ್ಲಿ ಸರ್ವ ಪ್ರಕಾರದ ಭಾನವಿಲ್ಲವೆಂದು ಹೇಳಿದರು. ಆದರೆ ಜ್ಞಾನರಹಿತವಾದ ಅವಸ್ಥೆಯು ಆನಂದಮಯವಾದದ್ದಲ್ಲಾ. ಜ್ಞಾನವನ್ನು ಕಳಕೊಳ್ಳುವದು ಅಂದರೆ ಮನುಷ್ಯತ್ವವನ್ನೇ ಕಳಕೊಳ್ಳುವದೆಂಬುವದಾಗುತ್ತದೆ. ಇಂಥಾ ಮೋಕ್ಷವೂ ನಾಸ್ತಿಕದ ನಿರ್ವಾಣವೂ ಒಂದೇ ಆಯಿತು. ನಿತ್ಯಕ್ಕೂ ಜಡಮಯವಾಗಿರುವ ಅವಸ್ಥೆಯನ್ನು ಯಾರು ಅಪೇಕ್ಷಿಸುವರು?

ಮನುಷ್ಯನು ಈ ಲೋಕದಿಂದ ತೆರಳಿ ಹೋಗುವಾಗ್ಯೆ ಮುಂದೆ ಅವನಿಗೆ ಸದ್ಗತಿಯೋ ದುರ್ಗತಿಯೋ ಪ್ರಾಪ್ತವಾಗುತ್ತದೆ, ಮೂರನೇ ಗತಿ ಇಲ್ಲಾ ಎಂಬುವದಕ್ಕೆ ಎಲ್ಲರೂ ಒಪ್ಪುತ್ತಾರೆ. ಪುಣ್ಯಮಾಡಿದವನಿಗೆ ಸದ್ಗತಿ, ಪಾಪ ಮಾಡಿದವನಿಗೆ ದುರ್ಗತಿ.

ಜೀವಮಾನವನ್ನೆಲ್ಲಾ ಪಾಪಾಚರಣೆಯಲ್ಲಿಯೇ ಕಳದವನು ಕಡೇ ಕಾಲದಲ್ಲಿ ತನಗೆ ಸದ್ಗತಿ ಸಿಕ್ಕ ಬೇಕೆಂದು ಬಯಸಿದರೆ, ಹ್ಯಾಗೆ ಸಿಕ್ಕುವದು? "ಪಾಪಿಗೆ ಪರಲೋಕವಿಲ್ಲಾ, ಪಾಪೋಸಿಗೆ ಮಡಿ ಇಲ್ಲಾ". ಸದ್ಗತಿಯನ್ನು ಪಡೆಯ ಬೇಕಾದರೆ, ಪುಣ್ಯಾಚರಣೆಯಲ್ಲಿ ನಿರತನಾಗಿರಬೇಕು, ಪಾಪದ ಕೊಳೆಯನ್ನು ತೊಳಕೊಂಡು ಪವಿತ್ರನಾಗಬೇಕು. ಈ ಮಾತಿಗೆ ಮನಸ್ಸು ಹೌದನ್ನುತ್ತದೆ. ಮತ್ತು ಸ್ವರ್ಗವನ್ನು ದುಡಿಯ ತಕ್ಕಂಥಾ ಪುಣ್ಯ ಕೃತ್ಯಗಳನ್ನು ತಾನು ಮಾಡುವೆನೆಂದು ಅನ್ನುತ್ತಾನೆ. ಆದ್ದರಿಂದ ಸ್ವರ್ಗವೆಂಬುವದಕ್ಕೆ ಸುಅರ್ಗ ಅಂದರೆ ಸತ್‌ಕ್ರಿಯೆಗಳಿಂದ ಅರ್ಜಿಸ ತಕ್ಕ ಸ್ಥಳವೆಂಬುವ ಅರ್ಥ ಮಾಡುತ್ತಾರೆ. ಆದರೆ ಸ್ವರ್ಗವು ಪುಣ್ಯಾಚರಣೆ ಎಂಬ ಕ್ರಯಕೊಟ್ಟು ಕೊಂಡುಕೊಳ್ಳ ತಕ್ಕ ಸ್ಥಳವಲ್ಲಾ. ಮಾರಾಟಕ್ಕೆ ಪೇಟೆಯಲ್ಲಿಟ್ಟ ಒಡವೆಯಂತೆ ಅದು ಬೆಲೆಗೆ ಸಿಕ್ಕುವದಲ್ಲಾ. ತ್ರಿಜಗದೊಡೆಯನಾದ ದೇವರು ಸ್ವರ್ಗಕ್ಕೂ ಒಡೆಯನು; ಆತನು ಅಖಿಲಾಂಡದಲ್ಲಿ ಭರಿತನಾಗಿದ್ದರೂ ಪರಲೋಕವು ವಿಶೇಷಾರ್ಥದಲ್ಲಿ ಆತನ ವಾಸಸ್ಥಾನವೆನಿಸಿಕೊಳ್ಳುವದು. "ದ್ಯೌಃ ಪಿತೃ" ಎಂದು ವೇದದಲ್ಲಿ ಹೇಳಿದಂತೆ, ಪರಲೋಕದಲ್ಲಿರುವ ನಮ್ಮ ತಂದೆ ನಾವು ಆತನನ್ನು ತಂದೆ ಎಂದು ಕರೆಯಬೇಕೆಂದು ಯೇಸುಕ್ರಿಸ್ತನು ನಮಗೆ ಬೋಧಿಸಿದ್ದಾನೆ. ಆ ತಂದೆಯನ್ನು ಮನುಷ್ಯರು ನೆನವರಿಕೆ ಮಾಡದೆ ಆತನಿಂದಲೇ ನಿತ್ಯಸುಖದ ಪದವಿಯನ್ನು ಪ್ರಾಪ್ತಿಸಿಕೊಳ್ಳುವದು ಬಿಟ್ಟು ತೊಳಲುವವರಾದರು. ನಿರ್ಮಲವಾದ ನೀರಿನ ಝರಿ ಇರುತ್ತಿರುವಾಗ ಅದರಲ್ಲಿ ದಾಹಶಾಂತಿ ಮಾಡಿಕೊಳ್ಳದೆ, ನೀರಿಲ್ಲದ ಠಾವಿನಲ್ಲಿ ಬಾವಿ ತೋಡುವ ಹೆಡ್ಡನು ತನ್ನ ಕಷ್ಟಕ್ಕೆ ಫಲವನ್ನು ಕಾಣದೆ, ಕಡೆಗೆ ಕಂಗೆಡುವಂತೆ ಮನುಷ್ಯರು ದೇವರನ್ನು ಬಿಟ್ಟವರಾದ್ದರಿಂದ ಸತ್ಯವನ್ನು ಎಲ್ಲಿಯೂ ಪಡೆಯರು. ದೇವರ ಅನ್ಯೋನ್ಯವು ತನಗೆ ಬೇಕು, ಆತನ ಕೃಪೆಗೆ ತಾನು ಪಾತ್ರನಾಗಿ ಆತನ ಪವಿತ್ರ ಸ್ಥಾನದಲ್ಲಿ ತಾನೂ ಇರಬೇಕೆಂಬುವದೊಂದು ಕಾಂಕ್ಷೆ ಮನುಷ್ಯನ ಹೃದಯದಲ್ಲಿ ಅದೆ. ಆ ಕಾಂಕ್ಷೆ ದೇವರ ಮಾರ್ಗದಲ್ಲಿ ನಡೆದರೆನೇ ತೃಪ್ತಿಯಾಗುವದಲ್ಲದೆ ಅನ್ಯಥಾ ಎಂದೆಂದಿಗೂ ತೃಪ್ತಿಯಾಗದು.

ತಂದೆಯ ಮನೆಯಿಂದ ಹೊರಟು ದೂರ ಹೋಗಿ ಕಂಡ ಕಡೆಯಲ್ಲೆಲ್ಲಾ ಅಡ್ಡಾಡುವ ಮಗನು ಯಾವ ಒಳ್ಳೇ ಕೃತ್ಯ ಮಾಡಿ ತಂದೆಯ ಪ್ರೀತಿಯನ್ನು ಸಂಪಾದಿಸುವನು? ತಾನು ತಂದೆಯ ಮನೆಯಿಂದ ಹೊರಟು ಕೃತಘ್ನನಾಗಿ ದೂರ ದೇಶಕ್ಕೆ ಬಂದು ಮನಸೋಇಚ್ಛೆಯಾಗಿ ನಡೆದು, ಮಹಾ ಪಾಪಿಯಾದೆ ಎಂದು ದುಃಖಪಟ್ಟು, ತಿರಿಗಿ ತಂದೆಯ ಮನೆಗೆ ಬಂದು ಅವನ ಪಾದಗಳಿಗೆ ಬಿದ್ದು, ನನ್ನ ತಪ್ಪನ್ನು ಸೈರಿಸು, ನನ್ನನ್ನು ಮಗನೆಂದು ಅಂಗೀಕಾರ ಮಾಡು! ಎಂದು ಬೇಡುವದೇ ತಂದೆಯ ಕೃಪೆಯ ಪುನಹಾ ಪಡೆಯುವದಕ್ಕೆ ಯೋಗ್ಯವಾದ ಮಾರ್ಗವಾಗಿದೆಯಲ್ಲವೇ. ಹಾಗೆಯೇ ತಂದೆಯಾದ ದೇವರನ್ನು ಬಿಟ್ಟು ಲೋಕಾರಣ್ಯದಲ್ಲಿ ತೊಳಲುತ್ತಾ ಬಳಲುತ್ತಾ ಭಯಾಕೂಲರಾದ ನಾವು ನಮ್ಮನ್ನು ತಿರಿಗಿ ಸೇರಿಸಿಕೊಳ್ಳುವದಕ್ಕೆ ಚಿತ್ತವಿಸಿ ಕಾದಿರುವ ನಮ್ಮ ತಂದೆಯ ಬಳಿಗೆ ಬರಬೇಕು. ಲೋಕಾರಣ್ಯದಲ್ಲಿ ನಾವು ಅಲೆಯುತ್ತಿದ್ದಾಗ ತಿಳಿದೂ ತಿಳಿಯದೆಯೂ ಆತನ ಚಿತ್ತವನ್ನು ವಿರೋಧಿಸಿ ಮಾಡಿದ ಅಪರಾಧಗಳನ್ನೆಲ್ಲಾ ಕ್ಷಮಿಸುತ್ತಾನೆ. ದೇವರು ಕ್ರಿಸ್ತನಲ್ಲಿದ್ದು ಲೋಕದಲ್ಲಿರುವ ಮನುಷ್ಯರನ್ನು ತನಗೆ ಅನ್ಯೋನ್ಯ ಮಾಡುವದಕ್ಕೆ ಮನಸ್ಕರಿಸಿದನೆಂದು ಸತ್ಯವೇದದಲ್ಲಿ ಹೇಳಿಯದೆ.

ನೀನು ದೇವರಿಗೆ ಸಂಧಾನವಾಗುವದು ಹ್ಯಾಗೆ ಎಂದು ಒಮ್ಮೆಯಾದರೂ ಆಲೋಚಿಸಿದಿಯಾ? ದೇವರು ನಮಗೆ ಆಜ್ಞಾಪಿಸಿದ ಮಾರ್ಗವಾಗಿಯೇ ನಾವು ದೇವರಿಗೆ ಸಂಧಾನವಾಗ ಬಹುದಲ್ಲದೆ ನಾವೇ ಕಲ್ಪಿಸಿದ ಉಪಾಯಗಳಿಂದ ದೇವರ ಕೃಪೆಯನ್ನು ಪಡಕೊಳ್ಳ ಬಹುದೆಂಬ ಯೋಚನೆಯು ವ್ಯರ್ಥವಾದದ್ದು. ದೇವರು ತನಗೂ ನಮಗೂ ಮಧ್ಯಸ್ಥನಾಗಿ ನೇಮಿಸಿದ ಯೇಸು ಕ್ರಿಸ್ತನ ಶರಣು ಹೊಗುವದರಿಂದ ಆತನೇ ನಮ್ಮ ವಿಮೋಚಕನೂ ತಾರಕನೂ ಎಂದು ಪರಿಪೂರ್ಣವಾಗಿ ವಿಶ್ವಾಸಿಸುವದರಿಂದ ನಾವು ದೇವರ ದಯವನ್ನು ಪಡೆದು ದೇವರ ಮಕ್ಕಳು ಎಂಬ ಅಧಿಕಾರವನ್ನು ಹೊಂದುವೆವು. ಇಲ್ಲಿ ಪುತ್ರತ್ವದ ಪದವಿ ಪಡೆದವರು ಅಲ್ಲಿ ತಂದೆಯ ಮನೆಯಲ್ಲಿ ನಿತ್ಯವೂ ಸುಖಸಂಪನ್ನರಾಗಿ ವಾಸಿಸುವರು. ಅಲ್ಲಿಗೆ ತೆರಳುವ ಕಾಲವು ಬಂದಾಗ ಭಕ್ತನು ಸ್ವಾಮಿಯು ನುಡಿದ ಅಭಯ ವಾಕ್ಯಗಳನ್ನು ನೆನಸಿ ಧೈರ್ಯವಂತನಾಗುತ್ತಾನೆ: "ನಾನು ನಿಮಗೆ ಸ್ಥಳವನ್ನು ಸಿದ್ಧ ಮಾಡುವದಕ್ಕೆ ಹೋಗುತ್ತೇನೆ, ಮತ್ತು ಪುನಹಾ ಬಂದು ನಾನಿರುವಲ್ಲಿ ನೀವೂ ಇರುವಂತೆ ನಿಮ್ಮನ್ನು ಅಲ್ಲಿಗೆ ಕರಕೊಂಡು ಹೋಗುತ್ತೇನೆ" ಎಂದು ಸ್ವಾಮಿಯು ಶಿಷ್ಯರಿಗೆ ಹೇಳಿದನು. ಈ ವಾಕ್ಯವೂ ಭಕ್ತರಿಗೆ ಆಪ್ತ ವಾಕ್ಯವಾಗಿದೆ.

ಗೋಪಾಲಶಾಸ್ತ್ರಿ.

ಇವರು ೧೮೫೩ನೇ ವರ್ಷದಲ್ಲಿ ಮಣಿಪುರ ಸಂಸ್ಥಾನದಲ್ಲಿ ಹುಟ್ಟಿದವರು; ಎಳೇ ಪ್ರಾಯದಲ್ಲಿ ಕಲ್ಕತ್ತೆಗೆ ಬಂದು ಇಂಗ್ಲಿಷು ವಿದ್ಯಾಭ್ಯಾಸ ಮಾಡಿ ಎಮ್. ಎ. ಬಿರುದು ಪಡೆದು, ಕೆಲವು ವರ್ಷಗಳು ಸರಕಾರಿ ಉದ್ಯೋಗ ನೋಡುವಾಗ ಹಿಂದು ಧರ್ಮವನ್ನು ಸಂಸ್ಥಾಪನೆ ಮಾಡಬೇಕೆಂಬುವ ಅಭಿನಿವೇಶವು ಅವರ ಹೃದಯದಲ್ಲಿ ಹುಟ್ಟಿತು. ಅದಕ್ಕಾಗಿ ಅವರು ಸರಕಾರಿ ಉದ್ಯೋಗವನ್ನು ಬಿಟ್ಟು, ಉತ್ತರ ಹಿಂದುಸ್ಥಾನದ ಬೇರೆ ಬೇರೆ ಪಟ್ಟಣಗಳಲ್ಲಿ ಉಪನ್ಯಾಸ ಮಾಡುತ್ತಾ ಸಂಚರಿಸುತ್ತಿದ್ದರು. ಅವರು ಕ್ರೈಸ್ತಧರ್ಮಕ್ಕೆ ಕಡುವೈರಿಯಾಗಿದ್ದು ಉಪನ್ಯಾಸಗಳಲ್ಲಿ ಅದನ್ನೇ ಖಂಡನೆ ಮಾಡುತ್ತಿದ್ದರು. ಇಂಥಾ ಈ ಗೃಹಸ್ಥರು ಕೆಲ ತಿಂಗಳ ಹಿಂದೆ ನಾಸಿಕಕ್ಕೆ ಬಂದು, ತಾನು ಕ್ರೈಸ್ತನಾಗುತ್ತೇನೆ, ತನಗೆ ಸ್ನಾನ ಕೊಡಬೇಕೆಂದು ಮಿಶನೆರಿಯನ್ನು ಬೇಡಿಕೊಂಡರು. ಸ್ನಾನವಾದ ದಿನದಲ್ಲಿ ಅವರು ನೆರೆದ ಸಭೆಯ ಮುಂದೆ ನಿಂತು ಹೇಳಿದ್ದು: ನಾನು ೪೨ ವರ್ಷಗಳು ಬ್ರಾಹ್ಮಣಧರ್ಮದಲ್ಲಿದ್ದೆ; ಹೃದಯಶಾಂತಿ ಪಡೆಯಲಿಲ್ಲಾ; ಕ್ರೈಸ್ತಧರ್ಮವೇ ಸತ್ಯ ಧರ್ಮವು, ಕ್ರಿಸ್ತನೇ ನನಗೆ ನಿಜತಾರಕನು ಎಂದು ನನ್ನಲ್ಲಿ ಪೂರ್ಣ ವಿಶ್ವಾಸವಾಗಿದೆ; ಅನೇಕಾವರ್ತಿ ನಾನು ಬೈಬಲು ಓದಿದ್ದೇನೆ; ಅದರಿಂದಲೇ ನನಗೆ ಕ್ರೈಸ್ತಧರ್ಮವು ಪೂರ್ಣ ಅಂಗೀಕಾರವಾಯಿತು; ಮನುಷ್ಯರಲ್ಲಾ, ಬೈಬಲೇ ನನ್ನನ್ನು ಕ್ರಿಸ್ತನ ಬಳಿಗೆ ಕರಕೊಂಡು ಬಂದದೆ.

ದಕ್ಷಿಣ ಹಿಂದುಸ್ಥಾನದಲ್ಲಿ ರೂಢಿಯಾಗಿ ಎಣಿಸುವ

ಶಕಗಳ ಮೊಕಾಬಿಲೆ ಪಟ್ಟಿ.

ಕ್ರಿಸ್ತಶಕ A. D.		ಹಿಂದು ಶಕಗಳು				ಫಸಲಿ		ಮಹಮ್ಮದಿ ಹಿಜರಿ	
		ಚಾಂದ್ರಮಾನ		ಸೌರಮಾನ					
		ಸಂವತ್ಸರಗಳು	ಶಾಲಿವಾಹನ ಶಕ	ಮಲಯಾಳ ಕೊಲ್ಲಮ್					
1807	1867	ಪ್ರಭವ	1729	1789	982	1042	1216	1276	1222	1284
1808	1868	ವಿಭವ	1730	1790	983	1043	1217	1277	1223	1285
1809	1869	ಶುಕ್ಲ	1731	1791	984	1044	1218	1278	1224	1286
1810	1870	ಪ್ರಮೋದೂತ	1732	1792	985	1045	1219	1279	1225	1287
1811	1871	ಪ್ರಜೋತ್ಪತ್ತಿ	1733	1793	986	1046	1220	1280	1226	1288
1812	1872	ಆಂಗೀರಸ	1734	1794	987	1047	1221	1281	1227	1289
1813	1873	ಶ್ರೀಮುಖ	1735	1795	988	1048	1222	1282	1228-29	1290
1814	1874	ಭಾವ	1736	1796	989	1049	1223	1283	1230	1291
1815	1875	ಯುವ	1737	1797	990	1050	1224	1284	1231	1292
1816	1876	ಧಾತು	1738	1798	991	1051	1225	1285	1232	1293
1817	1877	ಈಶ್ವರ	1739	1799	992	1052	1226	1286	1233	1294-95
1818	1878	ಬಹುಧಾನ್ಯ	1740	1800	993	1053	1227	1287	1234	1296
1819	1879	ಪ್ರಮಾಥಿ	1741	1801	994	1054	1228	1288	1235	1297
1820	1880	ವಿಕ್ರಮ	1742	1802	995	1055	1229	1289	1236	1298
1821	1881	ವಿಷು	1743	1803	996	1056	1230	1290	1237	1299
1822	1882	ಚಿತ್ರಭಾನು	1744	1804	997	1057	1231	1291	1238	1300
1823	1883	ಸ್ವಭಾನು	1745	1805	998	1058	1232	1292	1239	1301
1824	1884	ತಾರಣ	1746	1806	999	1059	1233	1293	1240	1302
1825	1885	ಪಾರ್ಥಿವ	1747	1807	1000	1060	1234	1294	1241	1303
1826	1886	ವ್ಯಯ	1748	1808	1001	1061	1235	1295	1242	1304
1827	1887	ಸರ್ವಜಿತು	1749	1809	1002	1062	1236	1296	1243	1305
1828	1888	ಸರ್ವಧಾರಿ	1750	1810	1003	1063	1287	1297	1244	1306
1829	1889	ವಿರೋಧಿ	1751	1811	1004	1064	1238	1298	1245	1307
1830	1890	ವಿಕೃತಿ	1752	1812	1005	1065	1239	1299	1246	1308
1831	1891	ಖರ	1753	1813	1006	1066	1240	1300	1247	1309
1832	1892	ನಂದನ	1754	1814	1007	1067	1241	1301	1248	1310
1833	1893	ವಿಜಯ	1755	1815	1008	1068	1242	1302	1249	1311
1834	1894	ಜಯ	1756	1816	1009	1069	1243	1303	1250	1312

ಕ್ರಿಸ್ತಶಕ		ಸಂವತ್ಸರಗಳು	ಶಾಲಿವಾಹನ ಶಕ		ಮುಲಯಾಳ ಕೊಲ್ಲಮ್		ಫಸಲಿ		ಮಹಮ್ಮದಿ ಹಿಜರಿ	
1835	1895	ಮನ್ಮಥ	1757	1817	1010	1070	1244	1304	1251	1313
1836	1896	ದುರ್ಮುಖಿ	1758	1818	1011	1071	1245	1305	1252	1314
1837	1897	ಹೇವಿಳಂಬಿ	1759	1819	1012	1072	1246	1306	1253	1315
1838	1898	ವಿಳಂಬಿ	1760	1820	1013	1073	1247	1307	1254	1316
1839	1899	ವಿಕಾರಿ	1761	1821	1014	1074	1248	1308	1255	1317
1840	1900	ಶಾರ್ವರಿ	1762	1822	1015	1075	1249	1309	1256	1318
1841	1901	ಪ್ಲವ	1763	1823	1016	1076	1250	1310	1257	1319
1842	1902	ಶುಭಕೃತು	1764	1824	1017	1077	1251	1311	1258	1320
1843	1903	ಶೋಭಕೃತು	1765	1825	1018	1078	1252	1312	1259	1321
1844	1904	ಕ್ರೋಧಿ	1766	1826	1019	1079	1253	1313	1260	1322
1845	1905	ವಿಶ್ವಾವಸು	1767	1827	1020	1080	1254	1314	1261-62	1323
1846	1906	ಪರಾಭವ	1768	1828	1021	1081	1255	1315	1263	1324
1847	1907	ಪ್ಲವಂಗ	1769	1829	1022	1082	1256	1316	1264	1325
1848	1908	ಕೀಲಕ	1770	1830	1023	1083	1257	1317	1265	1326
1849	1909	ಸೌಮ್ಯ	1771	1831	1024	1084	1258	1318	1266	1327-28
1850	1910	ಸಾಧಾರಣ	1772	1832	1025	1085	1259	1319	1267	1329
1851	1911	ವಿರೋಧಿಕೃತು	1773	1833	1026	1086	1260	1320	1268	1330
1852	1912	ಪರಿಧಾವಿ	1774	1834	1027	1087	1261	1321	1269	1331
1853	1913	ಪ್ರಮಾದೀಚ	1775	1835	1028	1088	1262	1322	1270	1332
1854	1914	ಆನಂದ	1776	1836	1029	1089	1263	1323	1271	1333
1855	1915	ರಾಕ್ಷಸ	1777	1837	1030	1090	1264	1324	1272	1334
1856	1916	ನಳ	1778	1838	1031	1091	1265	1325	1273	1335
1857	1917	ಪಿಂಗಳ	1779	1839	1032	1092	1266	1326	1274	1336
1858	1918	ಕಾಳಯುಕ್ತಿ	1780	1840	1033	1093	1267	1327	1275	1337
1859	1919	ಸಿದ್ಧಾರ್ಥಿ	1781	1841	1034	1094	1268	1328	1276	1338
1860	1920	ರೌದ್ರಿ	1782	1842	1035	1095	1269	1329	1277	1339
1861	1921	ದುರ್ಮತಿ	1783	1843	1036	1096	1270	1330	1278	1340
1862	1922	ದುಂದುಭಿ	1784	1844	1037	1097	1271	1331	1279	1341
1863	1923	ರುಧಿರೋದ್ಗಾರಿ	1785	1845	1038	1098	1272	1332	1280	1342
1864	1924	ರಕ್ತಾಕ್ಷಿ	1786	1846	1039	1099	1273	1333	1281	1343
1865	1925	ಕ್ರೋಧನ	1787	1847	1040	1100	1274	1334	1282	1344
1866	1926	ಕ್ಷಯ	1788	1848	1041	1101	1275	1335	1283	1345

ಸೂಚನೆ: 1. ಕ್ರಿಸ್ತಶಕವೆಂಬ ಇಸವಿ ಜನವರಿ 1ನೇ ತಾರೀಕಿಗೆ ಪ್ರಾರಂಭವಾಗುವದು.
2. ಸಂವತ್ಸರವೂ ಶಾಲಿವಾಹನ ಶಕವೂ (ಒಂದೇ ದಿವಸ) ಮಾರ್ಚ್-ಎಪ್ರಿಲಲ್ಲಿ ಪ್ರಾರಂಭವಾಗುವದು
3. ಮಲಯಾಳ ಕೊಲ್ಲಮ್ ಎಂಬ ಕೇರಳ ಶಕವು ಸಪಟಂಬರ ತಿಂಗಳಲ್ಲಿ "
4. ಫಸಲಿ ಜುಲಾಯಿ 1ನೇ ತಾರೀಕಿಗೆ "
5. ಮಹಮ್ಮದಿ ಹಿಜರಿ ಸಾಮಾನ್ಯವಾಗಿ ವರ್ಷ ವರ್ಷ ೧೫ ದಿವಸಕ್ಕೆ ಮುಂದಾಗಿ "

ಪಾಪಕೂಪದಲ್ಲಿ ಬಿದ್ದ ಕುಮಾರನು.

ಕೆಲ ಗೃಹಸ್ಥರು ಒಬ್ಬ ಉಪದೇಶಕನನ್ನು ಕೇಳಿದರು: ಅಯ್ಯಾ, ಯೇಸು ಕ್ರಿಸ್ತನು ದೇವರೆಂದನ್ನುತ್ತೀರಿ, ದೇವರಾದವನು ಮನುಷ್ಯನಾಗಿ ಜನಿಸಿ ಪಾಪಿಗಳಿಗಾಗಿ ಮರಣ ಪಡುವದು ಶೋಭೆಯಲ್ಲಾ. ಈ ಆಕ್ಷೇಪಕ್ಕೆ ಉಪದೇಶಕನು ಹೇಳಿದನು: ಒಂದು ಊರಿನಲ್ಲಿ ಒಬ್ಬ ಅರಸನಿದ್ದನು. ಅವನ ಅರಮನೆಯ ಸಮೀಪದಲ್ಲಿ ಅಗಾಧವಾದ ಬಾವಿ ಇತ್ತು. ಅದಕ್ಕೆ ಪಾಪಕೂಪವೆನ್ನುತ್ತಿದ್ದರು. ಬಾವಿಯ ಅಡಿಯಲ್ಲಿ ದೊಡ್ಡ ಹಾವು ಮನೆಮಾಡಿ ಕೊಂಡಿತ್ತು. ಯಾವನಾದರೂ ಅಪ್ಪಿತಪ್ಪಿ ಬಾವಿಯಲ್ಲಿ ಬಿದ್ದರೆ, ಹಾವು ಅವನನ್ನು ಕೊಂದು ನುಂಗುವದು. ಬಾವಿಯಲ್ಲಿಳಿದು ಹಾವನ್ನು ಕೊಲ್ಲುವ ಧೈರ್ಯವಂತನು ಊರಲ್ಲಿರಲಿಲ್ಲಾ. ಒಂದು ದಿನ ಅರಸನು ಒಡ್ಡೋಲಗ ಮಾಡಿ ಗದ್ದಿಗೆಯಲ್ಲಿ ಕೂತು ರಾಜ್ಯಕಾರ್ಯವಿಮರ್ಶೆ ಮಾಡುವಾಗ ಏಕಾಏಕಿ ಒಬ್ಬ ಪರಿಚಾರಕನು ಓಡಿ ಬಂದು—ಸ್ವಾಮಿ, ತಮ್ಮ ಕಿರಿಯ ಮಗನು ಕೂಪದೊಳಗೆ ಬಿದ್ದನು, ಅವನನ್ನು ಮೇಲೆ ತೆಗಿಯುವದಕ್ಕೆ ಯಾರಿಗೂ ಧೈರ್ಯವಿಲ್ಲಾ, ಎಲ್ಲರೂ ಹಾಹಾಕಾರ ಮಾಡುತ್ತಾರೆ, ಅಂದನು. ಈ ಮಾತು ಕಿವಿಗೆ ಬಿದ್ದದ್ದೇ ತಡ, ಅರಸನೆದ್ದು ಭೂಷಣವೆಲ್ಲಾ ತೆಗೆದಿಟ್ಟು, ಸೊಂಟಸುತ್ತಿ ಹೊರಡುವಾಗ ಸಾಮಾಜಿಕರೆಲ್ಲ ವಿಸ್ಮಿತರಾಗಿ, ಅರಸನೇನು ಮಾಡುತ್ತಾನೆ? ಮಗನನ್ನು ರಕ್ಷಿಸುವದಕ್ಕೆ ಬಾವಿಗೆ ಇಳಿಯುತ್ತಾನೋ? ಎಂದನ್ನುವಾಗ ಅರಸನು ಮುಂದೆ ನಡೆದು ಬಾವಿಯ ಬಳಿಗೆ ಬಂದು ಚನ್ನಾಗಿ ಆಲೋಚಿಸಿ ಕೆಳಗಿಳಿದನು. ತಳಕ್ಕೆ ಮುಟ್ಟಿದ ಮೇಲೆ ಅರಸನಿಗೂ ಹಾವಿಗೂ ಭಾರೀ ಕದನವಾಯಿತು; ಹಾವು ಯುಕ್ತಿಯನ್ನೂ ಶಕ್ತಿಯನ್ನೂ ತೋರ್ಪಡಿಸಿ ಕಾದಿದಾಗ್ಯೂ, ಅರಸನ ಪರಾಕ್ರಮದ ಮುಂದೆ ನಿಸ್ತರಿಸಲಾರದೆ ಸೋತಿತು. ಕೆಳಗಾಗುತ್ತಿದ್ದ ಸಪ್ಪಳವೆಲ್ಲಾ ತಮ್ಮಣೆಯಾದ ಮೇಲೆ ಅರಸನು ಕುಮಾರನನ್ನೆತ್ತಿಕೊಂಡು ಮೇಲಕ್ಕೆ ಬರಲು, ಜನರೆಲ್ಲಾ ಅರಸನ ಮೈಮೇಲೆ ಆದ ಗಾಯಗಳಿಂದಲೂ ನೆತ್ತರಿನ ಕಲೆಗಳಿಂದಲೂ ಆ ಕದನವು ಸಾಮಾನ್ಯವಲ್ಲವೆಂದೂ, ಬುದ್ಧಿಯಿಂದಲೂ ತ್ರಾಣದಿಂದಲೂ ಅರಸನು ಹಾವನ್ನು ಕೊಂದನೆಂದೂ ಮನವರಿತರು. ಈ ಕದನದಲ್ಲಿ ರಾಜಕುಮಾರನಿಗೆ ಏನೊಂದೂ ಗಾಯವಾಗಲಿಲ್ಲಾ. ಮೇಲೆ ಬಂದ ಅರಸನು ಕುಮಾರನನ್ನು ಸರ್ವರಿಗೂ ತೋರಿಸಲಾಗಿ, ಸಾಮಾಜಿಕರೂ ಅರಸನೊಡನೆ ಸಂತೋಷ ಪಡುವಲ್ಲಿ ಕುಮಾರನು ತಂದೆಯನ್ನು ತಕ್ಕೈಸಿ ಮುದ್ದಾಡುತ್ತಿದ್ದನು. ಈಗ ಅರಸನು ಮಾಡಿದ ಈ ಸತ್‌ಕೃತ್ಯವು ಮಾನಹಾನಿಯೋ ಎಂದು ಉಪದೇಶಕನು ಕೇಳಲಾಗಿ, ಆ ಗೃಹಸ್ಥರು—ಮಾನಹಾನಿಯಲ್ಲಾ, ಶೋಭೆಯೇ ಎಂದರು. ಉಪದೇಶಕನು ಅಂದನು—ಸ್ನೇಹಿತರೇ, ಮಹಾದೇವರು ಉಂಟು ಮಾಡಿದ ಅಖಿಲಾಂಡಗಳಲ್ಲಿ ಮನುಷ್ಯ ವಂಶವು ಕಿರಿಯ ಮಗನಲ್ಲವೋ? ನಾವೆಲ್ಲರೂ ಪಾಪಕೂಪದಲ್ಲಿ ಬಿದ್ದು, ಪಾಪಪುರುಷನಾದ ಪಿಶಾಚನು ನಮ್ಮನ್ನು ನುಂಗುವನೆಂದು ಹೆದರಿ ತಲ್ಲಣಿಸುವವರಲ್ಲವೋ? ಮರಣದ ಅಧಿಕಾರಿಯಾದ ಪಿಶಾಚನನ್ನು ನಿರ್ಮೂಲ ಮಾಡಿ ನಮ್ಮನ್ನೆಲ್ಲಾ ರಕ್ಷಿಸುವದಕ್ಕೆ ದೇವರು ಏಕಜ ಕುಮಾರನನ್ನು ಭೂಮಿಗೆ ಕಳಿಸಿದ್ದು ದೇವರ ದಯೆಯಲ್ಲವೋ?

ಠ ಸೇ ತೀ ವೆ ೯.

(೧೮೮೯ನೇ ಇಸವಿ Iನೇ ಆಕ್ಟಿನಲ್ಲಿರುವ ಪಟ್ಟಿಯಿಂದ ಎತ್ತಿ ತೆಗದು ಸಂಕ್ಷೇಪಿಸಿದ್ದು.)

ದಸ್ತಾವೇಜಿನ ವಿವರಣೆ: ಸ್ಟಾಂಪ್ ಹಾಸಲು:

1. (Acknowledgment) ಸಾಲದ ಒಪ್ಪಿಗೆ ಪತ್ರ . . . ೧ ಆಣೆ

11. (Bill of Exchange or Promissory Note) ಬಿಲ್ ಒಫ್ ಎಕ್ಸ್‌ಚೇಂಜ್ ಯಾ ಪ್ರೊಮಿಸರಿ ನೋಟು (ಅಂದರೆ ವಟಾಯಿಸ ತಕ್ಕ ಪತ್ರ, ಇದರಲ್ಲಿ ಚಕ್ಕ್, ದಸ್ತಾವೇಜು, ಬೇಂಕನೋಟು, ಇಲ್ಲವೆ ಕರೆನ್ಸಿನೋಟು ಸೇರುವದಿಲ್ಲ):—

a) ಕೇಳಿದಾಗಲೇ ಪಾವತಿ ಆಗ ತಕ್ಕದ್ದಾಗಿ, ಅದರ ಮೌಲ್ಯ ೨೦ ರೂಪಾಯಿಗೆ ಎಂಬಂದರೆ . . . . . ೧ ಆಣೆ

	ಒಂದಕ್ಕೆ:	ದುಬಾರೆಪ್ರತಿಗೆ:	ತಿಬಾರೆಪ್ರತಿಗೆ:
b) ಕೇಳಿದಾಗಲೇ ಅಲ್ಲದೆ ಅನ್ಯಥಾ ಪಾವತಿಯಾಗ ತಕ್ಕದ್ದಾಗಿ, ಬರದ ಯಾ ಕಂಡ ತಾರೀಕಿನಿಂದ ಒಂದು ಸಂವತ್ಸರಕ್ಕೆ ಎಂಬಾರದ ವಾಯಿದೆ ಇದ್ದರೆ:	ರೂ. ಆ.	ರೂ. ಆ.	ರೂ. ಆ.
ಅದರ ಮೌಲ್ಯ ರೂಪಾಯಿ ೨೦ಂಕ್ಕೆ ಎಂಬಾರದಿದ್ದರೆ	೦ ೩	೦ ೧	೦ ೧
ರೂಪಾಯಿ ೨೦ಂಕ್ಕೆ ಎಂಬಾರ ೪೦೦ „	೦ ೪	೦ ೨	೦ ೨
„ ೪೦೦ „ ೬೦೦ „	೦ ೬	೦ ೩	೦ ೩
„ ೬೦೦ „ ೧೦೦೦ „	೦ ೧೦	೦ ೪	೦ ೪
„ ೧೦೦೦ „ ೧೩೦೦ „	೦ ೧೩	೦ ೬	೦ ೪
„ ೧೩೦೦ „ ೧೬೦೦ „	೧ ೦	೦ ೮	೦ ೬
„ ೧೬೦೦ „ ೨೫೦೦ „	೧ ೮	೦ ೧೩	೦ ೮
೨೫೦೦ ರೂಪಾಯಿ ಮೇಲೆ ೧೦೦೦೦ ರೂ. ವರೆಗೆ ಪ್ರತಿ ರೂ. ೨೫೦೦ಕ್ಕೆ ಯಾ ಅದರ ಅಂಶಕ್ಕೆ.	೧ ೮	೦ ೧೩	೦ ೮
೧೦೦೦೦ ರೂಪಾಯಿ ಮೇಲೆ ೬೦೦೦೦ ರೂಪಾಯಿ ವರೆಗೆ ಪ್ರತಿ ರೂಪಾಯಿ ೫೦೦೦ಕ್ಕೆ ಯಾ ಅದರ ಅಂಶಕ್ಕೆ. . . ೬ ೦	೧ ೮	೧ ೦	
೬೦೦೦೦ ರೂಪಾಯಿ ಮೇಲೆ ಪ್ರತಿ ರೂಪಾಯಿ ೧೦೦೦೦ಕ್ಕೆ ಯಾ ಅದರ ಅಂಶಕ್ಕೆ ೬ ೦	೩ ೦	೩ ೦	

c) ಬರದ ತಾರೀಕಿನಿಂದ ಇಲ್ಲವೆ ಕಂಡ ತಾರೀಕಿನಿಂದ ಒಂದು ಸಂವತ್ಸರದ ಮೇಲೆ ಪಾವತಿ ಆಗ ತಕ್ಕದ್ದಾದರೆ— ೧೬ನೇ ಅಂಕೆಯಲ್ಲಿ ಹೇಳಿರುವಷ್ಟೇ ಠಸೆ

12. (Bill of Lading) ಬಿಲ್ ಒಫ್ ಲೇಡಿಂಗ್ ಎಂಬ ಸಾಮಾನು (ಜಹಜಿನ ಮೇಲೆ) ಭರಾವಣಿಚೀಟು . . . . . ೪ ಆಣೆ

13. ದಸ್ತಾವೇಜು (ಈ ಆಕ್ಟಿನಿಂದ ಅಥವಾ ೧೮೭೦ನೇ ಇಸ್ವಿ ಕೋರ್ಟ್‌ಫೀಸ್ ಆಕ್ಟಿನಿಂದ ಅನ್ಯಥಾ ನಿಬಂಧಿಸಲ್ಪಡದೆ ಇರುವಂಥಾದ್ದು):—

ಇದರ ಮೊಬಲಗು ಅಥವಾ ಮೌಲ್ಯ೧೦ ರೂಪಾಯಿಗೆ ಎಂಬಾರದಿದ್ದರೆ ೨ ಆಣೆ
೧೦ ರೂಪಾಯಿಗೆ ಎಂಬಾರ ೫೦ ರೂಪಾಯಿಗೆ ಎಂಬಾರದಿದ್ದರೆ. . ೪ ಆಣೆ
೫೦ „ „ ೧೦೦ „ „ . . ೮ ಆಣೆ
೧೦೦ರೂ.ಮೇಲೆ ೧೦೦೦ರೂ. ವರೆಗೆ ಪ್ರತಿ ರೂ.೧೦೦ಕ್ಕೆ ಯಾ ಅದರಂಶಕ್ಕೆ ೮ ಆಣೆ
೧೦೦೦„ „ ಪ್ರತಿ ರೂ. ೫೦ಕ್ಕೆ ಯಾ ಅದರ ಅಂಶಕ್ಕೆ . . ೨ ರೂಪಾಯಿ ೮ ಆಣೆ

14. (Bond or Mortgage-Deed) ದಸ್ತಾವೇಜು ಅಥವಾ ಅಡವು ದಸ್ತಾವೇಜು (ಒಂದು ಉದ್ಯೋಗ ಯಾ ಕೆಲಸವನ್ನು ಸರಿಯಾಗಿ ನೆರವೇರಿಸ ತಕ್ಕ ಬಗ್ಗೆ ಅಥವಾ ತದ್ವಾರಾ ಬಂದ ಹಣವನ್ನು ಕುರಿತು ಸಮಾಧಾನ ಪಡಿಸ ತಕ್ಕ ಬಗ್ಗೆ ಜವಾಬದಾರಿಯಾಗಿ ಬರಕೊಡುವಂಥಾದ್ದು):—

a) ಇದರ ಮೊಬಲಗು ೧೦೦೦ ರೂಪಾಯಿಗೆ ಎಂಬಾರದಿದ್ದರೆ—13ನೇ ಅಂಕೆಯಲ್ಲಿ ಹೇಳಿರುವಷ್ಟೆ ಠಸೆ

b) ಇತರ ಸಂಗತಿಯಲ್ಲಿ . . . . . ೫ ರೂಪಾಯಿ

16. ಏಲಂ ಮಾಡಿದ ಆಸ್ತಿ ಬಗ್ಯೆ ಕೊಡ ತಕ್ಕ ದರಖಾಸ್ತವಟ್ಟು—21ನೇ ಅಂಕೆಯಲ್ಲಿ ಹೇಳಿರುವಷ್ಟೆ ಠಸೆ

19. ಇಪ್ಪತ್ತು ರೂಪಾಯಿಗೆ ಮೀರಿದ ಹಣಕ್ಕೆ (Cheque) ಚೆಕ್ಕ್ ಯಾನೆ ಹುಂಡಿ (ಇದು ಹಣ ಕೇಳಿದಾಗಲೇ ಕೊಡ ತಕ್ಕದ್ದಾಗಿದ್ದರೆ). . ೧ ಆಣೆ

21. (Conveyance) ಕೊನ್ವೆಯನ್ಸ್ ಯಾನೆ ಕ್ರಯಸಾಧನ, ದಾನಸಾಧನ; ಇದರಲ್ಲಿ ಕಾಣಿಸಿದ ಪ್ರತಿಫಲದ ಮೊಬಲಗು

ರೂ. ೫೦ಕ್ಕೆ ಮೀರದಿದ್ದರೆ . . . . . ೮ ಆಣೆ

„ ೫೦ ಮೀರಿ ರೂ. ೧೦೦ಕ್ಕೆ ಮೀರದಿದ್ದರೆ . . . . ೧ ರೂಪಾಯಿ

„ ೧೦೦ „ „ ೧೦೦೦ವರೆಗೆ ಪ್ರತಿ ರೂ. ೧೦೦ಕ್ಕೆ ಯಾ ಅದರ ಅಂಶಕ್ಕೆ ೧ ರೂಪಾಯಿ

„ ೧೦೦೦ „ „ ಪ್ರತಿ ೫೦೦ ರೂಪಾಯಿಗೆ ಯಾ ಅದರ ಅಂಶಕ್ಕೆ ೫ ರೂಪಾಯಿ

29. ಮೂಲ ದಸ್ತಾವೇಜುಗಳನ್ನು ಇಲ್ಲವೆ ಬೇರೆ ಬೆಲೆಯುಳ್ಳ ಸಾಧನಗಳನ್ನು ರೇವಣಿ ಇಟ್ಟು, ಅಥವಾ ಚರಸೊತ್ತು ಈಡು ಇಟ್ಟು ಮಾಡಿದ ಸಾಲವನ್ನು ತಿರಿಗಿ ಪಾವತಿ ಮಾಡುವ ಬಂದೋಬಸ್ತಿಗಾಗಿ ಮಾಡುವ ಕರಾರನ್ನು ತೋರಿಸುವ ದಸ್ತಾವೇಜು:—

a) ಸಾಲದ ಹಣವು ಅಂಥಾ ದಸ್ತಾವೇಜಿನ ತಾರೀಕಿನಿಂದ ಮೂರು ತಿಂಗಳ ಮೇಲೆ ಒಂದು ವರ್ಷದೊಳಗೆ ಸಂದಾಯವಾಗ ತಕ್ಕಂಥಾದ್ದಾಗಿದ್ದರೆ } 11ನೇ ಅಂಕೆಯ *b*ಯಲ್ಲಿ ಹೇಳಿರುವಷ್ಟೆ ಠಸೆ

b) ೩ ತಿಂಗಳೊಳಗೆ ಸಂದಾಯವಾಗ ತಕ್ಕಂಥಾದ್ದಾಗಿದ್ದರೆ— 11ನೇ *b*ಯಲ್ಲಿಯ ಠಸೆಯ ಅರೆವಾಸಿ

30. ಅಡವಿನ ಸೊತ್ತಿನ ಮೇಲೆ ಇನ್ನೂ ಸಾಲ ಹೊರಿಸಿ ಉಂಟಾಗುವ ದಸ್ತಾವೇಜು:— *a)* ಪ್ರಥಮತಾ ಅದ ಅಡವು 44ನೇ ಅಂಕೆಯ *a*ಯಲ್ಲಿ ಸೂಚಿಸಿರುವಂಥಾದ್ದಾಗಿದ್ದರೆ . . . . 21ನೇ ಅಂಕೆಯಲ್ಲಿ ಹೇಳಿದ ಕ್ರಯಸಾಧನದಷ್ಟೆ ಠಸೆ

b) ಅಂಥಾ ಅಡವು 44ನೇ ಅಂಕೆಯ *b*ಯಲ್ಲಿ ಹೇಳಿದಂಥಾದ್ದಾಗಿದ್ದರೆ, 13ನೇ ಅಂಕೆಯಲ್ಲಿರುವಷ್ಟೆ ಠಸೆ

32. ಪಾಲುಗಾರಿಕ್ಕೆ ದಸ್ತಾವೇಜು. . . . . ೧೦ ರೂಪಾಯಿ

33. ಪಾಲುಗಾರಿಕೆ ಅಗಲಿಕೇ ದಸ್ತಾವೇಜು . . . . ೫ ರೂಪಾಯಿ

35. ಸೊತ್ತಿನ ಬದಲಾವಣೆ ಪತ್ರ— } ಅಂಥಾ ಸೊತ್ತಿನ ಕಿಮ್ಮತಿನ ಬಗ್ಯೆ 21ನೇ

36. ದಾನಪತ್ರ— } ಅಂಕೆಯಲ್ಲಿ ಹೇಳಿರುವಷ್ಟೆ ಠಸೆ.

37. ಪಾಲುಪಟ್ಟಿ:—ಇದರಲ್ಲಿ ಪಾಲು ಪಾಡಿಕೊಂಡ ಆಸ್ತಿಗೆ ಕಾಣಿಸಿದ ಮೌಲ್ಯದ ಮೇಲೆ (13ನೇ ಅಂಕೆಯಲ್ಲಿ) ದಸ್ತಾವೇಜಿಗೆ ಹೇಳಿರುವಷ್ಟೆ ಠಸೆ.

39. ಗೇಣಿಚೀಟು (ಗೇಣೀ ಬಗ್ಯೆ ಮಾಡುವ ಕರಾರು ಸಹ):—

a) ಗೇಣೀ ಮೊಬಲಗು ನಿಶ್ಚಯವಿದ್ದು, ಪ್ರೀಮಿಯಮ್ ಯಾನೆ ವಟ್ಟ ಇಲ್ಲದೆ, ಗೇಣಿ ವಾಯಿದೆ ಇಂಥಾದ್ದೆಂದು ನಮೂದಿಸಲ್ಪಟ್ಟು, ಸದರಿ ವಾಯಿದೆ

ಒಂದು ವರುಷಕ್ಕೆ ಮೀರದಿದ್ದರೆ . . . . . 13ನೇ ಅಂಕೆಯಲ್ಲಿ ಹೇಳಿರುವಷ್ಟೆ ಠಸೆ

ಒಂದು ವರುಷಕ್ಕೆ ಮೀರಿ, ೫ ವರ್ಷಕ್ಕೆ ಮೀರದಿದ್ದರೆ—ಸರಾಸರಿ ೧ ವರ್ಷದ ಗೇಣಿಗೆ 13ನೇ ಅಂಕೆಯಲ್ಲಿ ಹೇಳಿರುವಷ್ಟೆ ಠಸೆ

ಮೂರು ವರ್ಷಕ್ಕೆ ಮೀರಿ ಇದ್ದರೆ—ಸರಾಸರಿ ಒಂದು ವರ್ಷಕ್ಕೆ ಬೀಳುವ ಗೇಣಿಗೆ 21ನೇ ಅಂಕೆಯಲ್ಲಿ ಹೇಳಿರುವಷ್ಟೆ ಠಸೆ.

b) ಗೇಣಿ ಮೊಬಲಗು ನಿಶ್ಚಯವಿದ್ದು, ವಟ್ಟ ಕೊಡುವದಿಲ್ಲದೆ, ಗೇಣಿಚೀಟನ ವಾಯಿದೆ ಇಂಥಾದ್ದೆಂದು ನಿರಖು ಇಲ್ಲದಿದ್ದರೆ ಪ್ರಥಮದ ೧೦ ವರ್ಷದಲ್ಲಿ ಸರಾಸರಿ ವರ್ಷಕ್ಕೆ ಬೀಳುವ ಗೇಣಿಗೆ 21ನೇ ಅಂಕೆಯಲ್ಲಿ ಹೇಳಿರುವಷ್ಟೆ ಠಸೆ

c) ಒಂದು ದಂಡ ಅಥವಾ ಪ್ರೀಮಿಯಮ್ ಯಾನೆ ವಟ್ಟ ಸಲುವಾಗಿ ಗೇಣಿಗೆ ಕೊಡೋಣಾಗಿ, ಗೇಣಿ ಏನಾದರೂ ಬರುವಂಥಾದ್ದು ಇಲ್ಲದಿದ್ದರೆ— ಗೇಣಿಚೀಟನಲ್ಲಿ ನಮೂದಿಸಿದ ಸದರಿ ದಂಡ ಯಾ ವಟ್ಟದ ಮೊಬಲಗಿಗೆ 21ನೇ ಅಂಕೆಯಲ್ಲಿ ಹೇಳಿರುವಷ್ಟೆ ಠಸೆ

d) ಗೇಣಿ ಬರುವದರ ಹೊರ್ತು ದಂಡ ಯಾ ಪ್ರೀಮಿಯಮ್ ಯಾನೆ ವಟ್ಟದ ಸಲುವಾಗಿ ಸಹಾ ಗೇಣಿಗೆ ಕೊಡೋಣಾಗಿದ್ದರೆ— ಗೇಣೀ ಬಗ್ಯೆ ಎಷ್ಟು ಠಸೆ ಬೇಕಾದೀತೋ ಅಷ್ಟು ಹಾಸಲು, ಮತ್ತು ಸದರಿ ದಂಡದ ಯಾ ವಟ್ಟದ ಮೊಬಲಗಿಗೆ 21ನೇ ಅಂಕೆಯಲ್ಲಿ ಹೇಳಿರುವಷ್ಟು ಠಸೆ ಸಹ.

41. (Letter of Credit) ಲೆಟರ್ ಒಫ್ ಕ್ರೇಡಿಟ್ (ಅಂದರೆ ಇದು ಯಾರ ಹೆಸರಿನಲ್ಲಿ ಬರಿಯಲ್ಪಡುತ್ತದೋ ಆತನಿಗೆ ನಂಬಿಕೆಯ ಮೇಲೆ ಸಾಲ ಕೊಡುವಂತೆ ಮತ್ತೊಬ್ಬನಿಗೆ ಅಧಿಕಾರ ಕೊಡುವಂಥಾ ದಸ್ತಾವೇಜು). ೧ ಆಣೆ

43. ಒಂದು ಕಂಪೆನಿಯ ಸಂಘದ ಯಾದಾಸ್ತು . . . ೧೫ ರೂಪಾಯಿ

44. ಅಡಮಾನಸಾಧನ (14, 15, 29, ಅಥವಾ 55ನೇ ಅಂಕೆಗಳಲ್ಲಿ ಏರ್ಪಡಿಸದೆ ಇರುವಂಥಾ ತರದ್ದು):—

a) ಸಾಧನ ಬರೆದು ಕೊಡುವ ಸಮಯದಲ್ಲಿ ಅದರಲ್ಲಿ ನಮೂದಿಸಿದ ಸೊತ್ತನ್ನು ಯಾ ಅದರ ಅಂತವನ್ನು ಅಡವುದಾರಗೆ ಒಪ್ಪಿಸಿಕೊಟ್ಟರೆ, ಇಲ್ಲವೆ ಒಪ್ಪಿಸಿಕೊಡುವರೆ ಸಮ್ಮತಿಸಿದರೆ . . . . . 21ನೇ ಅಂಕೆಯಲ್ಲಿ ಹೇಳಿರುವಷ್ಟೆ ಠಸೆ

b) ಸದರಿ ಸೊತ್ತಿನ ಸ್ವಾಧೀನತೆ ಬಿಟ್ಟುಕೊಡದೆ ಯಾ ಒಪ್ಪಿಸಲಿಕ್ಕೆ ಸಮ್ಮತಿಸದೆ ಇದ್ದ ಪಕ್ಷಕ್ಕೆ— . . . . . 13ನೇ ಅಂಕೆಯಲ್ಲಿ ಹೇಳಿರುವಷ್ಟೆ ಠಸೆ

46. (Note or Memorandum) ನೋಟು ಯಾ ಮೆಮೊರಂಡಮ್ (ಅಂದರೆ ಒಬ್ಬ ದಲಾಲ ಯಾ ಮುತ್ತಾಲಿಕನು ತನ್ನ ಧನಿಗೋಸ್ಕರ ಇಪ್ಪತ್ತು ರೂಪಾಯಿಗೆ ಏರಿದ ಯಾವ ಜೀನಸನ್ನಾಗಲೀ ಕೊಂಡಿರುವದಾಗಿ ಇಲ್ಲವೆ ಮಾರಿದ್ದಾಗಿ ಸದರಿ ಧನಿಗೆ ತಿಳಿಸುವ ಚೀಟು ಯಾ ಯಾದಾಸ್ತು) ೧ ಆಣೆ

50. (Power-of-Attorney) ಪವರ್-ಒಫ್-ಎಟ್ಟರ್ನಿ (ಮೊಕ್ತ್ಯಾರನಾಮೆ):—

a) ಒಂದೇ ಕಾರ್ಯಕ್ಕೆ ಸಂಬಂಧವಾದ ಒಂದು ಯಾ ಅನೇಕ ದಸ್ತಾವೇಜುಗಳನ್ನು ರಿಜಿಸ್ತ್ರೀ ಬಗ್ಯೆ ಹಾಜರು ಪಡಿಸುವದಕ್ಕೆ ಪೂರ್ತಿ ಉಂಟಾದರೆ ೯ ಆಣೆ

b) ಬೇರೆ ಯಾವದಾದರೂ ಒಂದೇ ಕಾರ್ಯಕ್ಕಾಗಿ ಒಬ್ಬ ಯಾ ಅನೇಕ ಜನರಿಗೆ ಅಧಿಕಾರ ಕೊಡುವದಾದರೆ . . . . . ೧ ರೂಪಾಯಿ

c) ಸಮಷ್ಟಿಯಾಗಿ ಯಾ ಬೇರೆ ಬೇರೆಯಾಗಿ ಒಂದಕ್ಕಿಂತ ಹೆಚ್ಚು ಕಾರ್ಯಗಳಲ್ಲಿ ಆಗಲಿ ಸಾಮಾನ್ಯವಾಗಿ ಆಗಲಿ ಪ್ರವರ್ತಿಸಲಿಕ್ಕೆ ×ಕ್ಕೆ ಏರದಷ್ಟು ಮುಂದಿಗೆ ಅಧಿಕಾರ ಕೊಡುವದಾದರೆ . . . . . × ರೂಪಾಯಿ

d) ಸಮಷ್ಟಿಯಾಗಿ ಯಾ ಬೇರೆ ಬೇರೆಯಾಗಿ ಹೆಚ್ಚು ಕಾರ್ಯಗಳಲ್ಲಿ ಆಗಲಿ ಸಾಮಾನ್ಯವಾಗಿ ಆಗಲಿ ಪ್ರವರ್ತಿಸಲಿಕ್ಕೆ ×ಕ್ಕೆ ಏರಿ ೧೦ಕ್ಕೆ ಏರದೆ ಇರುವ ಜನರಿಗೆ ಅಧಿಕಾರ ಕೊಡುವದಾದರೆ . . . . ೧೦ ರೂಪಾಯಿ

e) ಇತರ ಸಂಗತಿಯಲ್ಲಿ . . . . ಅಧಿಕಾರ ಹೊಂದುವ ಪ್ರತಿ ಮನುಷ್ಯನಿಗಾಗಿ ೧ ರೂಪಾಯಿ

52. ಮೊಬಲಗು ಯಾ ಮೌಲ್ಯ ಇಪ್ಪತ್ತು ರೂಪಾಯಿಗೆ ಏರಿದ ಯಾವ ಹಣವನ್ನಾಗಲೀ ಸೊತ್ತನ್ನಾಗಲೀ ಬಂದದ್ದಕ್ಕೆ ಕೊಡುವ ರಶೀದಿ . ೧ ಆಣೆ

53. ಅಡವಿನ ಸೊತ್ತನ್ನು ತಿರಿಗಿ ಕೊಡುವ ದಸ್ತಾವೇಜು:—

a) ಅಡವಿನ ಹಣ ೧೦೦೦ ರೂಪಾಯಿಗೆ ಏರದಿದ್ದರೆ. . 21ನೇ ಅಂಕೆಯಲ್ಲಿ ಹೇಳಿರುವಷ್ಟೆ ಠಸೆ

b) ಇತರ ಸಂಗತಿಯಲ್ಲಿ . . . . . ೧೦ ರೂಪಾಯಿ

54. (Release) ರಿಲೀಜ್ ಯಾನೆ ಖುಲಾಸಪತ್ರ (ಅಂದರೆ ಒಬ್ಬನು ಮತ್ತೊಬ್ಬನ ಮೇಲಾಗಲಿ ಫಲಾನೆ ಸೊತ್ತಿನ ಮೇಲಾಗಲಿ ತನಗಿರುವ ಬಾಧ್ಯತೆಯನ್ನು ಬಿಟ್ಟುಬಿಡುವ ದಸ್ತಾವೇಜು):—

a) ಬಾಧ್ಯತೆಯ ಮೊಬಲಗು ೧೦೦೦ರೂಪಾಯಿಗೆ ಏರದಿದ್ದರೆ—13ನೇ ಅಂಕೆಯಲ್ಲಿ ಹೇಳಿರುವಷ್ಟೆ ಠಸೆ

b) ಇತರ ಸಂಗತಿಯಲ್ಲಿ . . . . . × ರೂಪಾಯಿ

57. (Settlement) ಸೆಟ್ಲ್‌ಮೆಂಟ ಯಾನೆ ವ್ಯವಸ್ಥಾಪತ್ರ— 13ನೇ ಅಂಕೆಯಲ್ಲಿ ಹೇಳಿರುವಷ್ಟೆ ಠಸೆ

58. (Shipping Order) ಸಿಪ್ಪಿಂಗ್ ಒರ್ಡರ್ (ಅಂದರೆ ಜಹಜನ ಮೇಲೆ ಜೀನಸುಗಳನ್ನು ವೈಯುವದಕ್ಕೆ ಕೊಡುವ ಪತ್ರ) . . . . ೧ ಆಣೆ

59. ಗೇಣಿ ಸೋಡಚೀಟು:—

a) ಗೇಣಿಚೀಟಿನ ಠಸೆ × ರೂಪಾಯಿಗೆ ಏರದಿದ್ದರೆ— ಗೇಣಿಚೀಟಿನಷ್ಟೆ ಠಸೆ

b) ಇತರ ಸಂಗತಿಯಲ್ಲಿ . . . . . × ರೂಪಾಯಿ

60. (Transfer) ಟ್ರಾನ್ಸ್‌ಫರ್ (ಪರಭಾರೆಪತ್ರ ಯಾ ಮೇಲ್ಸಾಧನ):—

a) ಯಾವದೊಂದು ಕಂಪನಿಯ ಯಾ ಸಂಘದ ಪಾಲುಗಳಿ—21ನೇ ಅಂಕೆಯಲ್ಲಿ ಕಾಣಿಸಿದ ಪಾಸಿನ ಕಾಲವಾಸಿ.

b) ದಸ್ತಾವೇಜು, ಗೇಣಿ, ಅಡವು, ಯಾ ಪೊಲಿಸಿ ಆಫ್ ಇನ್ಶೂರೆನ್ಸ (ವೀಮ ಉತ್ರಾಯಿಸೋಣ)ದ ಏನೊಂದು ಸಮ್ಮಂಧ—ಆ ದಸ್ತಾವೇಜು, ಗೇಣಿ, ಅಡವುದಸ್ತಾವೇಜು, ಯಾ ಪೊಲಿಸಿ ಆಫ್ ಇನ್ಶೂರೆನ್ಸ ಹಾಸಲು × ರೂಪಾಯಿಗೆ ಏರದಿದ್ದರೆ, ಅವರಷ್ಟೆ ಹಾಸಲು

ಇತರ ಸಂಗತಿಯಲ್ಲಿ— × ರೂಪಾಯಿ

ತಸೇ ಹಾಸಲು ಮಾಫಿ ಇರುವ ಕೆಲವು ದಸ್ತಾವೇಜುಗಳು.

೨. a) 46ನೇ ಅಂಕೆಯಲ್ಲಿ ಹೇಳಿರುವ ನೋಟು ಯಾ ಮೆಮೊರಂಡಮ್ ಸ್ವಭಾವದ್ದಾಗಿರದೆ, ಯಾವ ಜೊಂದು ಚರಸೊತ್ತು ಯಾ ಸರಕಿನ ಮೂರಾಟದ ಸಮ್ಮಂಧವಾಗುವ ಯಾವದೊಂದು ಕರಾರು ಯಾ ಕರಾರಿನ ಯಾದಾಸ್ತು.

೧೩. ಗೇಣಿಚೀಟುಗಳೂ ಅವುಗಳ ಎದುರ್ನುಡಿಗಳೂ:—b) ಯಾವ ದಂಡವಾಗಲೀ ವಟ್ಟವಾಗಲೀ ಕೊಡದೆ ಒಬ್ಬ ವ್ಯವಸಾಯಗಾರನು ಬರಕೊಡುವ ಗೇಣಿಚೀಟು; ಇದರಲ್ಲಿ ನಿರಖು ವಾಯಿದೆ ನಮೂದಿಸಿದ್ದರೆ ಮತ್ತು ಸದರಿ ವಾಯಿದೆ ಒಂದು ಸಂವತ್ಸರಕ್ಕೆ ಮೀರದೆ ಇದ್ದರೆ, ಅಥವಾ ಅದರ ವರ್ಷಾವಧಿ ಒಟ್ಟಾರೆ ಗೇಣಿ ೧೦೦ ರೂಪಾಯಿಗೆ ಮೀರದಿದ್ದರೆ; c) ಒಬ್ಬ ವ್ಯವಸಾಯಗಾರನಿಗೆ ಕೊಡುವ ಗೇಣಿಚೀಟಿನ ಎದುರ್ನುಡಿ.

೧೫. ರತೀದಿ:—a) ಕ್ರಮವಾಗಿ ತಸೇ ಮೇಲೆ ಆದಂಥಾ ಯಾವ ದಸ್ತಾವೇಜನಲ್ಲಾಗಲೀ ನಮೂದಿಸಿರುವ ಪ್ರತಿಫಲ ಬಂತೆಂದು ಅಥವಾ ಅದರಿಂದ ಭದ್ರ ಪಡಿಸಿರುವ ಅಸಲು ಆಗಲೀ ಬಡ್ಡಿ ಆಗಲೀ ವರ್ಷಾಶನವಾಗಲೀ ಕಾಲಾವಧಿ ಸಂದಾಯವಾಗ ತಕ್ಕ ಬೇರೆ ಹಣವಾಗಲೀ ಬಂತೆಂದು ಕೊಡುವ ರತೀದಿ; b) ಪ್ರತಿಫಲವಿಲ್ಲದೆನೇ ಹಣ ಪಾವತಿ ಆದ್ದಕ್ಕೆ ರತೀದಿ; h) ಬೇಂಕರ್ ಅಂದರೆ ಒಬ್ಬ ಸಾವಕಾರನ ಕೈಯಲ್ಲಿ ಠೇವಣಿ ಇಟ್ಟ ಹಣದ ಬಗ್ಗೆ ಯಾ ಹಣದ ಖಾತರ್ಜೀ ಬಗ್ಗೆ ಕೊಡುವ ರತೀದಿ. ಪರಂತು ಸದರಿ ಹಣಕ್ಕಾಗಿ ಯಾರಿಗೆ ಉತ್ತರ ಮೇಳ ತಕ್ಕದ್ದೋ ಅವನಿಗೆ ಹೊರ್ತು ಬೇರೆ ಯಾರಾದರೂ ಈಸಿಕೊಳ್ಳುವಂತೆ ನಮೂದಿಸಿರ ದಾರದು. ಈ ಮಾಫಿಯು ಒಂದು ಸಂಘದ ಹಿಸೆಗೆ, ಅಥವಾ ಹಿಸೆಯ ನಿರ್ಣಯಪತ್ರದ ಪ್ರಕಾರ ಕೊಡೋಣಾಗುವ ಇಲ್ಲವೆ ಠೇವಣಿ ಇಡೋಣಾಗುವ ಹಣಕ್ಕಾಗಿ ಕೊಡುವ ರತೀದಿಗೆ ಸಮ್ಮಂಧಿಸುವದಿಲ್ಲ.

೧೬. ಗೇಣಿಸೋಡಚೀಟು—ಅಂಥಾ ಗೇಣಿಚೀಟಿಗೆ ತಸೆ ಮಾಫಿ ಆಗಿದ್ದರೆ.

೧೭. ಮೇಲ್‌ಚೀಟು ಯಾನೆ ಎಂಡಾರಸ್ ಮೂಲಕವಾಗಿ ವಟಾಯಿಸ ತಕ್ಕ ಹುಂಡಿ, ಚೆಕ್ಕು, ಇಲ್ಲವೆ ಪ್ರೊಮಿಸರಿ ನೋಟನ್ನು ವರ್ಗ ಯಾನೆ ಪರಾಧೀನ ಮಾಡುವ ಪತ್ರ.

ದಸ್ತಾವೇಜುಗಳನ್ನು ರಿಜಿಸ್ತ್ರಿ ಮಾಡುವ ಬಗ್ಗೆ ರಿಜಿಸ್ತ್ರಾರರಿಗೆ ತೆರ ತಕ್ಕ ಫೀಸಿನ ದರ.

										ರೂ.	ಆ.
ದಸ್ತೈವಜನ	ಮೌಲ್ಯ	೨೫	ರೂಪಾಯಿಗೆ	ಮೀರದಿದ್ದರೆ	.	.	.	.	.	೦	೪
"	"	೨೫	"	ಮೀರಿ	೫೦	ರೂಪಾಯಿಗೆ	ಮೀರದಿದ್ದರೆ			೦	೧೨
"	"	೫೦	"	"	೧೦೦	"	"			೧	೦
"	"	೧೦೦	"	"	೫೦೦	"	"			೧	೪
"	"	೫೦೦	"	"	೬೦೦	"	"			೨	೦
"	"	೬೦೦	"	"	೧೦೦೦	"	"			೩	೦
"	"	೧೦೦೦	"	"	೫೦೦೦೦	ರೂಪಾಯಿ	ವರೆಗೆ	ಪ್ರತಿ	ಹೆಚ್ಚಿಗೆ		
					೧೦೦೦	ರೂಪಾಯಿಗೆ	ಯಾ	ಅದರ	ಅಂತಕ್ಕೆ	೧	೦
"	"	೫೦೦೦೦	ರೂ.	ಮೇಲೆ	ಪ್ರತಿ ೧೦೦೦	ರೂಪಾಯಿಗೆ	ಯಾ	ಅದರ	ಅಂತಕ್ಕೆ	೦	೪
ಪವರ್ ಒಫ್ ಎರ್ಟನಿ ಅಂದರೆ ವಕಾಲತಿನ ರಿಜಿಸ್ತ್ರಿ ಬಗ್ಗೆ										೩	೪

ಟಪ್ಪಾಲಿನ ವಿಷಯ ಮುಖ್ಯ ಕ್ರಮಗಳು.

ಮುಂದಿನ ಕ್ರಮಗಳು ಹಿಂದುಸ್ಥಾನದಲ್ಲಿಯೂ ಸಿಂಹಳ ದ್ವೀಪ ಆದೆನ್ ಬರ್ಮ ಮುಂತಾದ ಅದರ ನೆರೆಸೀಮೆಗಳಲ್ಲಿಯೂ ನಡಿಯುವ ಟಪ್ಪಾಲ ಸಮ್ಮಂಧವಾಗಿರುತ್ತವೆ.

ಕೋವಿಮದ್ದು ಮುಂತಾದ ಜ್ವಲನಾಸ್ಪದವಾದ ಒಡವೆಗಳು, ಗಾಜಿನ ಸಾಮಾನು, ತೆಳು ಚೀನಸು, ಇಂಥಾದ್ದನ್ನು ಟಪ್ಪಾಲಿನ ಮೇಲೆ ರವಾನಿಸ ಬಾರದು; ಪರಂತು ಔಷಧ ಮುಂತಾದ್ದು ಗಾಜಿನ ಬಾಟ್ಲಿಯಲ್ಲಿ ಹಾಕಿದ್ದಾಗ್ಯೂ, ಅಲ್ಲಾಡದಂತೆ ಬಿಗಿಮೋಬಸ್ತಾಗಿ ಕಟ್ಟಿದ್ದರೆ, ರವಾನಿಸುವದಕ್ಕೆ ಅಡ್ಡಿ ಇರುವದಿಲ್ಲ. ಅದಲ್ಲದೆ ಯಾವದಾದರೂ ಬಂಡು ತರದ ವಸ್ತು, ಬರಹ, ಭಾವೆ, ಚಿತ್ರ, ನಕ್ಷೆ, ಪುಸ್ತಕ ಇಂಥಾದ್ದನ್ನು, ಇಲ್ಲವೆ ಆಫೀಸಿ, ಗಾಂಜಾ ಮುಂತಾದ್ದನ್ನು ಟಪ್ಪಾಲಿನ ದ್ವಾರಾ ರವಾನಿಸಗೊಡುವದಿಲ್ಲ.

ಒಬ್ಬನು ತನ್ನ ಹೆಸರಿಗೆ ಬಂದ ಲಿಖೋಟೆ ಇಲ್ಲವೆ ಕಟ್ಟನ್ನು ತೆರಿಯದೆ ವಾಪಸು ಮಾಡ ಬಹುದು; ಹಾಗೆ ವಾಪಸು ಮಾಡಿದ ಪಕ್ಷಕ್ಕೆ, ಅವನು ಅದರ ದಸ್ತೂರಿ ತೆರಲಿಕ್ಕೆ ಬದ್ಧನಾಗುವದಿಲ್ಲ; ಒಂದು ವೇಳೆ ಅವನು ಅದನ್ನು ತೆರದಾಗ್ಯೂ, ಅವನ ಮೇಲೆ ದ್ವೇಷದಿಂದ ಯಾರಾದರೂ ಕಳುಹಿಸಿದ್ದೆಂತ ಆದು ತಲ್ಪಿದ ಆಫೀಸಿನ ಪೋಸ್ಟ್‌ಮಾಸ್ತರಿಗೆ ಕಂಡರೆ, ಆ ಆಫೀಸರು ಅದರ ದಸ್ತೂರಿಯನ್ನು ಮಾಫು ಮಾಡ ಬಹುದು.

ಒಂದು ಲಿಫಾಪೆ ಇಲ್ಲವೆ ಕಟ್ಟನ್ನು ತೆರಿಯದೆ ಬೇರೊಂದು ಎಳಾಸಕ್ಕೆ ತಿರಿಗಿ ರವಾನಿಸ ಬಹುದು; ಆ ಪ್ರಕಾರ ರವಾನಿಸಿದ್ದಾದರೆ, ಅದಕ್ಕೆ ಪ್ರತ್ಯೇಕ ದಸ್ತೂರಿ ಕೊಡ ಬೇಕೆಂದಿಲ್ಲ.

ಟಪ್ಪಾಲಿಗೆ ಹಾಕಿದ ಯಾವ ಲಿಫಾಪೆಗೆ, ಕಾರ್ಡಿಗೆ, ಯಾ ಕಟ್ಟಿಗೆ ರಶೀದಿ ಸಿಕ್ಕುವದಿಲ್ಲವೋ, ಅಂಥಾ ದ್ದನ್ನು ಟಪ್ಪಾಲಿಗೆ ಹಾಕಿದ ಗುರುತಿಗಾಗಿ ಸರ್ಟಿಫಿಕೇಟನ್ನು ಪಡಕೊಳ್ಳಬಹುದು. ಹ್ಯಾಗಂದರೆ, ಅದರ ಮೇಲುವಿಳಾಸದ ಯಥಾಪ್ರತಿಯನ್ನು ಬೇರೊಂದು ಕಾಗದದ ಮೇಲೆ ಬರದು, ಅದಕ್ಕೆ ಅರ್ಧ ಆಣೆಯ ಚೀಟು ಹಚ್ಚಿ, ಅವೆರಡನ್ನು ಪೋಸ್ಟ್ ಆಫೀಸಿಗೆ ಹಾಜರು ಮಾಡಿದಲ್ಲಿ, ಚೀಟನ್ನು ರದ್ದು ಮಾಡಿ ತಾರೀಕಿನ ಮುದ್ರೆಯನ್ನು ಸಹ ಒತ್ತಿ, ಅದನ್ನು ಹಾಜರು ಮಾಡಿದ ಮನುಷ್ಯನಿಗೆ ವಾಪಸು ಕೊಡುವರು. ಇದು "ಸರ್ಟಿಫಿಕೇಟು" ಅನ್ನಿಸಿಕೊಳ್ಳುತ್ತದೆ.

ಒಂದು ಲಿಫಾಪೆಗೆ ಇಲ್ಲವೆ ಮುಂದೆ ಹೇಳಿರುವ ಬುಕ್‌ಪೆಕೆಟ್ ಯಾ ಪೆಟರ್ನ್‌ಪೆಕೆಟ್ ಎಂಬ ಕಟ್ಟಿಗೆ ದಸ್ತೂರಿ ಮುಂದಾಗಿ ಹಚ್ಚಬೆ ಇದ್ದರೆ, ಇಲ್ಲವೆ ಹಚ್ಚಿದ ದಸ್ತೂರಿ ನಿರಖಿಗೆ ಕಡಿಮೆಯಾದರೆ, ಆ ಲಿಫಾಪೆಯನ್ನು ಯಾ ಕಟ್ಟನ್ನು ಹೊಂದುವವನು ಆ ದಸ್ತೂರಿಯ ಇಲ್ಲವೆ ಕಡಿಮೆಯಾದದರ ಇಮ್ಮಡಿ ಹಾಸಲ ತೆರ ಬೇಕು.

ಒಂದು ಟಪ್ಪಾಲ ಕಾರ್ಡು, ಲಿಫಾಪೆ, ಇಲ್ಲವೆ ಪೆಕೆಟು ಎಂಬ ಖುಲ್ಲಾ ಕಟ್ಟು ಹೆಚ್ಚು ಭದ್ರತೆಯಿಂದ ತಲಪ ಬೇಕೆಂಬವರು ಎರಡು (೨) ಆಣೆ ಕೊಟ್ಟು ಅದನ್ನು ರಿಜಿಸ್ತ್ರಿ ಮಾಡಿಸ ಬಹುದು. ಹ್ಯಾಗಂದರೆ: ರವಾನಿಸುವವನು ಅದಕ್ಕೆ ಮೇಲ್ವಿಳಾಸ ಬರದು, ಅದರ ಎಡಭಾಗದ ಕೆಳಗೆ ತನ್ನ ಹೆಸರು, ವಿಳಾಸ ಸಹ ಬರೆದು, ಅದಕ್ಕೆ ನಿರಖು ಇರುವ ಚೀಟು ಮತ್ತು ರಿಜಿಸ್ತ್ರಿ ಬಗ್ಗೆ ಎರಡು ಆಣೇ ಚೀಟು ಸಹ ಹಚ್ಚಿ, ಟಪ್ಪಾಲು ಕೈದು ಆಗುವ ಮುಂಚೆ ಟಪ್ಪಾಲುಕಟ್ಟೆಯಲ್ಲಿ ಒಪ್ಪಿಸ ಬೇಕು; ಅವರು ಅದನ್ನು ರಿಜಿಸ್ತ್ರಿ ಮಾಡಿ, ಭಾಪಾ ರಶೀದಿ ಕೊಡುವರು. ಮತ್ತು ಸದರಿ ಕಾರ್ಡು, ಲಿಫಾಪೆ, ಯಾ ಪೆಕೆಟು ಹೊಂದಿದವನಿಂದ ಪಾವತಿರಶೀದಿ ತರಿಸಿ ಕೊಡ ಬೇಕಾದರೆ, ಹೆಚ್ಚಿಗೆ ೧ ಆಣೆ ಚೀಟು, ಮತ್ತು ಪಾರ್ಸೆಲು ಹೊಂದಿದವನಿಂದ ಪಾವತಿರಶೀದಿ ತರಿಸಿ ಕೊಡ ಬೇಕಾದರೆ, ೧ ಆಣೆ ರೊಕ್ಕ ಸಹ ಹಾಜರು ಮಾಡಿದ್ದಲ್ಲಿ ಆ ಪ್ರಕಾರ ತರಿಸಿ ಕೊಡೋಣಾಗುವದು.

(Letter Post) ಕಾಗದಟಪ್ಪಾಲು.

ಎಲ್ಲಾ ಲಖೋಟೆಗಳೂ ಟಪ್ಪಾಲ ಕಾರ್ಡುಗಳೂ ೨೦ ತೊಲೆಗೆ ಮೀರದೆ ಇರುವ ಪೆಕೆಟುಗಳೂ ಟಪ್ಪಾಲಿಗೆ ಹಾಕಿದ ದಿವಸವೇ ಈ ಟಪ್ಪಾಲಿನ ದ್ವಾರಾ ರವಾನಿಸೋಣಾಗುತ್ತವೆ.

	ಆ.	ಪೈ.
ಭಾರದಲ್ಲಿ ½ ತೊಲೆಗೆ ಮೀರದಿದ್ದರೆ	೦	೬
" ೧ " "	೧	೦
ಹೆಚ್ಚಿಗೆ ಪ್ರತಿ ೧ ತೊಲೆಗೆ ಯಾ ಅದರಂತಕ್ಕೆ	೧	೦
ಟಪ್ಪಾಲ ಕಾರ್ಡು ಒಂದಕ್ಕೆ	೦	೩
ಉತ್ತರ ಸಿಗತಕ್ಕ ಜೋಡು ಕಾರ್ಡಿಗೆ	೦	೬

ಕಾರ್ಡಿನ ಮುಂದಗಡೆ ವಿಳಾಸ ಮಾತ್ರ ಹೊರ್ತು, ಹೆಚ್ಚಿಗೇನೂ ಬರಿಯ ಬಾರದು. ಅದರ ಹಿಂಬದಿಯಲ್ಲಿ ಬರಿಯುವದಾಗಲಿ ಭಾಪಿಸುವದಾಗಲಿ ಮಾತ್ರ ಎಲ್ಲದೆ ರಶೀದಿ ಮುಂತಾದ ಚೀಟು ಸಹ ಹಚ್ಚಬಹುದು. ಜೋಡು ಕಾರ್ಡನ್ನು ಬೇರೆ ಬೇರೆಯಾಗಿಯೂ ವ್ಯಯೋಗಿಸ ಬಹುದು.

೩ ಪೈ ಕಾರ್ಡು, ೬ ಪೈ ಜೋಡು ಕಾರ್ಡು, ½, ¾, ೧, ೧½, ೨, ೨½, ೩, ೪, ೫, ೬, ೯, ೧೨ ಆಣೇ, ೧ ರೂಪಾಯಿ ಚೀಟುಗಳೂ, ½, ¾, ೧, ೨ ½ ಆಣೆಯ ಚೀಟಿನ ಲಖೋಟೆಗಳೂ, ½, ೧ ಆಣೆಯ ಸುತ್ತುವಕಾಗದದಗಳೂ ಸಿಗುತ್ತವೆ.

ಕಾಗದಟಪ್ಪಾಲಿನ ದ್ವಾರಾ ಕಳುಹಿಸುವ ಲಿಫಾಪೆ ೨೦ ತೊಲೆಗೆ ಮೀರ ಬಾರದು.

ಟಪ್ಪಾಲ ದಸ್ತೂರಿಯನ್ನು ತಪ್ಪಿಸಿಕೊಳ್ಳುವ ಬಗ್ಗೆ, ಬೇರೆ ಬೇರೆಯವರಿಗೆ ಪ್ರತ್ಯೇಕಪ್ರತ್ಯೇಕವಾಗಿ ಬರೆದ ಲೇಖನಗಳನ್ನು ಒಂದೇ ಲಿಫಾಪೆಯಲ್ಲಿ ಹಾಕಿ ಕಳುಹಿಸುವಂಥವರು ತಿಕ್ಷೆಗೆ ಗುರಿಯಾಗುತ್ತಾರೆ.

(Banghy Post) ಬಂಗಿಟಪ್ಪಾಲು.

೨೦ ತೊಲೆಗೆ ಮೀರಿದ ಪೆಕೆಟುಗಳೂ ಪಾರ್ಸೆಲುಗಳೂ ಈ ಟಪ್ಪಾಲ ದ್ವಾರಾ ರವಾನಿಸೋಣಾಗುತ್ತವೆ. ಇವುಗಳ ಟಪ್ಪಾಲು ಹಾಸಲಿನ ದರ ಹ್ಯಾಗಂದರೆ:—

ಬುಕ್‌ಪೆಕೆಟ್ ಮತ್ತು ಪೆಟರ್ನ್‌ಪೆಕೆಟ್

	ಆ.	ಪೈ.
ಭಾರದಲ್ಲಿ ೧೦ ತೊಲೆಗೆ ಮೀರದಿದ್ದರೆ	೦	೬
ಹೆಚ್ಚಿಗೆ ಪ್ರತಿ ೧೦ " ಯಾ ಅದರಂತಕ್ಕೆ	೦	೬

ಪೆಕೆಟು ಯಾವ ಆಕೃತಿಯಲ್ಲಿಯೂ ಇರಬಹುದು; ಆದರೆ ೩ ಫೂಟ್ ಉದ್ದ ೧ ಫೂಟ್ ಅಗಲ ಅಥವಾ ದಪ್ಪಕ್ಕೆ ಮೀರ ಬಾರದು. ಸಪುರವಾಗಿದ್ದರೆ, ೩೦ ಇಂಚಿಗೆ ಮೀರ ಬಾರದು. ಬುಕ್‌ಪೆಕೆಟಿನ ಭಾರದ ವಿಷಯದಲ್ಲಿ ಪ್ರತ್ಯೇಕ ನಿರಖು ಇಲ್ಲ; ಆದರೆ ಪೆಟರ್ನ್‌ಪೆಕೆಟು ಭಾರದಲ್ಲಿ ೪೦ ತೊಲೆಗೆ ಮೀರ ಬಾರದು.

ಪಾರ್ಸೆಲ್ ರಿಜಿಸ್ತ್ರಿ ಆದ್ದಕ್ಕೆ. ರಿಜಿಸ್ತ್ರಿ ಆಗದ್ದಕ್ಕೆ.

	ಆ.	ಆ.
೨೦ ತೊಲೆಗೆ ಮೀರದಿದ್ದರೆ	೪	೩
೪೦ " "	೬	೪
ಹೆಚ್ಚಿಗೆ ಪ್ರತಿ ೪೦ ತೊಲೆಗೆ ಯಾ ಅದಕ್ಕಿಂತಕ್ಕೆ	೪	೪

ರಿಜಿಸ್ತ್ರಿ ಆಗದ ಪಾರ್ಸೆಲಿಗೆ ಹಾಸಲು ಚೀಟು ಹಚ್ಚಿ, ರಿಜಿಸ್ತ್ರಿ ಆದ್ದಕ್ಕೆ ರೊಕ್ಕವಾಗಿ ತೆರ ಬೇಕು. ರಿಜಿಸ್ತ್ರಿ ಆಗದ್ದು ೪೪೦ ತೊಲೆಗೆ, ರಿಜಿಸ್ತ್ರಿ ಆದ್ದು ೨೦೦೦ ತೊಲೆಗೆ ಮೀರ ಬಾರದು, ಮತ್ತು ವೈಯಲಿಕ್ಕೆ ತೊಂದರೆಯೂ ಜೋಕುಮೂ ಇರ ಬಾರದು.

"ಬುಕ್‌ಪೆಕೆಟ್" ಮತ್ತು "ಪೆಟರ್ನ್‌ಪೆಕೆಟ್":—(1) ಖಾಲಿ ಇಲ್ಲವೆ ಛಾಪೆಯಾದ ಪುಸ್ತಕ, ವರ್ತಮಾನಪತ್ರ, ಚಿತ್ರ, ನಕ್ಷೆ, ಬರದು ತಿಳಿಸುವ ಯಾ ಲೇಖನಸ್ವಭಾವದ್ದಾಗಿರದೆ ಕಾರ್ಯಸಮ್ಮಂಧವಾಗಿ ಬರೆಯಲ್ಪಟ್ಟ ದಸ್ತಾವೇಜು ಇಲ್ಲವೆ ಇತರ ಬರಹ, ಭರಾವಣಿಚೀಟು, ಸಾಮಾನಪಟ್ಟಿ, ಲಿಖ್ಖಿತ ಪಟ್ಟ ಎಂಬೀ ತರದ ಕಾಗದಗಳು; ಛಾಪಿಸುವದಕ್ಕಾಗಿ ಯಾವದೊಂದು ಛಾಪಖಾನೆಗೆ ಯಾ ವರ್ತಮಾನಪತ್ರಕ್ಕೆ ರವಾನಿಸಲ್ಪಡುವ ಕೈಬರಹದ ಕಾಗದಗಳು— ಇಂಥಾದ್ದೆಲ್ಲ "ಬುಕ್‌ಪೆಕೆಟಗೆ" ಸೇರುತ್ತವೆ. ಅದಲ್ಲದೆ ವ್ಯಾಪಾರದ ನಮೂನೆ ಯಾ ಕೆಲಸದ ಮಾದರಿಯುಳ್ಳ ಯಾವದೊಂದು ಕಟ್ಟು, ಅದಕ್ಕೆ ಕ್ರಯ ಹಿಡಿಯದೆ ರವಾನಿಸಲ್ಪಟ್ಟ ಪಕ್ಷಕ್ಕೆ, "ಪೆಟರ್ನ್‌ಪೆಕೆಟ್" ಅನ್ನಿಸಿಕೊಳ್ಳುತ್ತದೆ. (2) ಪೆಕೆಟು ಬರಿದಾಗಿ ಆಗಲಿ ಉಭಯ ಕಡೆಗಳಲ್ಲಿ ಖುಲ್ಲಾ ಬಿಟ್ಟು ಅದರೊಳಗಿರುವದನ್ನು ಬಿಚ್ಚಿ ನೋಡುವ ಹಾಗೆ ಕಟ್ಟಿ ಆಗಲಿ ತರ ಬೇಕು. (3) ಪೆಕೆಟಗಾಗಲೀ ಪೆಟರ್ನಿಗಾಗಲೀ ನಿರಖಿರುವ ದಸ್ತೂರಿ ಮುಂದಾಗಿ ಹಚ್ಚ ಬೇಕು; ಹಚ್ಚದೆ ರವಾನಿಸಿದರೆ, ದಸ್ತೂರಿಯ ದುಬಾರೆ, ಇಲ್ಲವೆ ಹಚ್ಚದ ದಸ್ತೂರಿ ಕಡಿಮೆಯಾಗಿ ಹೋದರೆ, ಆ ಬಾಕಿಯ ದುಬಾರೆ ಹಾಸಲು ರೊಕ್ಕವಾಗಿ ತೆರ ಬೇಕು. (4) ಪೆಕೆಟು ಇಲ್ಲವೆ ಪೆಟರ್ನ್ ಟಪ್ಪಾಲಿಗೆ ಹಾಕಿದ್ದಕ್ಕೆ ರಶೀದಿ ಸಿಗುವದಿಲ್ಲ; ಆದರೆ ಅದಕ್ಕೆ ಸರ್ಟಿಫಿಕೇಟು ಪಡಕೊಳ್ಳ ಬಹುದು ಇಲವೇ ರಿಜಿಸ್ತ್ರಿ ಮಾಡಿಸ ಬಹುದು.

ಯಾವದೊಂದು ವರ್ತಮಾನಪತ್ರದ* ಮಾಲಿಕನಾಗಲೀ ಪ್ರಸಿದ್ಧಕನಾಗಲೀ ತಾನು ಕಾಲಾವಧಿಯಾಗಿ ಟಪ್ಪಾಲಿಗೆ ಹಾಕುವ ತನ್ನ ಪತ್ರಕ್ಕಾಗಿ ಇಂತಿಷ್ಟು ಕಾಲಕ್ಕೆಂತ ಒಮ್ಮೆಯೇ ಹಾಸಲಿನ ಹಣ ನಗದಾಗಿ ಕೊಟ್ಟು ತೀರಿಸ ಬಹುದು. ಹಾಗೆ ಮಾಡಿದಂಥಾ ಪತ್ರವನ್ನು ಟಪ್ಪಾಲಚೀಟಿಲ್ಲದೆ ಮತ್ತು ಪ್ರತ್ಯೇಕ ಹಾಸಲಿಗೆ ಗುರಿಯಾಗದೆ ರವಾನಿಸ ಬಹುದು. ಈ ಅವಧಿಯು ಸಾಮಾನ್ಯ ೩ ತಿಂಗಳಾಗಿರುವದು. ಮುಂಗಡ ದಸ್ತೂರಿಯನ್ನು ಎಣಿಸುವಲ್ಲಿ, ವರ್ತಮಾನವತ್ರಕರ್ತರು ತಮ್ಮೊಳಗೆ ಉಚಿತಾರ್ಥವಾಗಿ ಬದಲಾಯಿಸಿಕೊಳ್ಳುವಂಥಾ ಪ್ರತಿಗಳಿಗೆ ಟಪ್ಪಾಲ ಹಾಸಲು ಪೂರಾ ಮಾಫಿಯಾಗಿಯೂ, ಮಾರಾಟದ ಬಗ್ಗೆ ಏಜೆಂಟರಿಗೆ ರವಾನಿಸುವ ಪ್ರತಿಗಳ ಕಟ್ಟುಗಳು ಇಲ್ಲಿ ನಮೂದಿಸಿರುವ ಹಾಸಲಿನ ಅರೆವಾಸಿಗೂ, ಉಳಿದ ಪ್ರತಿಗಳು ಪೂರಾ ಹಾಸಲಿಗೂ ಗುರಿಯಾಗಿರುವವು.

ವರ್ತಮಾನಪತ್ರದ ಒಂದೊಂದು ಪ್ರತಿಯು		
೩ ತೊಲೆಗೆ	೧೦ ತೊಲೆಗೆ	ಪ್ರತಿ ಹೆಚ್ಚಿಗೆ ೧೦ ತೊಲೆಗೆ
ಮೀರದಿದ್ದರೆ		ಯಾ ಅದರ ಅಂಶಕ್ಕೆ
೩ ಪೈ	೬ ಪೈ	೬ ಪೈ

"ಪಾರ್ಸೆಲು":—(1) ರಿಜಿಸ್ತ್ರಿ ಆಗದ ಮತ್ತು ರಿಜಿಸ್ತ್ರಿ ಮಾಡಿಸಿದ ಪಾರ್ಸೆಲು ಎಂಬ ಎರಡು ವಿಧ. (2) ಇವನ್ನು ಪೂರಾ ಬಂದು ಮಾಡಿ ಕಟ್ಟಿ ತರ ಬೇಕು. (3) (ನಿಷೇಧಿಸಲ್ಪಟ್ಟ ಸಾಮಾನುಗಳ ವಿನಹ) ಬೇರೇನಾದರೂ ಇದರಲ್ಲಿ ಗರ್ಭಿಸ ಬಹುದು. (4) ರಿಜಿಸ್ತ್ರಿ ಆಗದ ಪಾರ್ಸೆಲು ಬರಿದಾಗಿ ಟಪ್ಪಾಲು ಆಫೀಸಿಗೆ ಒಪ್ಪಿಸ ಬೇಕು; ಆದರೆ ರಿಜಿಸ್ತ್ರೀ ಪಾರ್ಸೆಲು ಸಂಗಡ ಅದರ ತಪಶೀಲಿನ ಫಾರ್ಮು† ಭರಾಯಿಸಿ ತರ ಬೇಕು, ಇದಕ್ಕೆ ರಶೀದಿ ಸಿಕ್ಕುವದು, ಆದರೆ ರಿಜಿಸ್ತ್ರಿ ಆಗದ ಪಾರ್ಸೆಲಿಗೆ ಸಿಕ್ಕುವದಿಲ್ಲ. (5) ರಿಜಿಸ್ತ್ರೀ ಪಾರ್ಸೆಲು ಮುಟ್ಟದಕ್ಕೆ ರಶೀದಿ ಕೊಡಬೇಕು, ಆದರೆ ರಿಜಿಸ್ತ್ರೀ ಆಗದ ಪಾರ್ಸೆಲಿಗೆ ಬೇಡ. (6) ರಿಜಿಸ್ತ್ರೀ ಪಾರ್ಸೆಲಿಗೆ ದಸ್ತೂರಿ ಮುಂದಾಗಿ ಕೊಡಲೂ ಬಹುದು, ಕೊಡದೆ ಇರಲೂ ಬಹುದು; ಎರಡನೇ ಸಂಗತಿಯಲ್ಲಿ ಪಾರ್ಸೆಲು ಹೊಂದಿದವನು ಆ ದಸ್ತೂರಿಯ ಮೌಲ್ಯ ಮಾತ್ರ ಕೊಡ ಬೇಕಷ್ಟೆ; ಅದಲ್ಲದೆ ೧ ಆಣೇ ದಸ್ತೂರಿ ಕೊಟ್ಟು ರಿಜಿಸ್ತ್ರೀ ಪಾರ್ಸೆಲು ಹೊಂದಿದವನಿಂದ ರಶೀದಿ ತರಿಸಿ ಕೊಡ ಬಹುದು. (7) ೪೪೦ ತೊಲೆಗೆ ಮೀರದ ಪಾರ್ಸೆಲು ರಿಜಿಸ್ತ್ರಿ ಇಲ್ಲದೆ ರವಾನಿಸ ಬಹುದು; ಆದರೆ ಇದಕ್ಕೆ ಮೀರಿದರೆ, ಅಥವಾ ದಸ್ತೂರಿ ಇಲ್ಲದೆ ಯಾ "ವೆಲ್ಯು ಪೇಬಲ್" ಆಗಿ, ಯಾ "ಇನ್‌ಶೂರ್ಡ್" ಆಗಿ ರವಾನಿಸಿದರೆ, ರಿಜಿಸ್ತ್ರಿ ಮಾಡಿಸುವದು ಅಗತ್ಯ.

(Value Payable Article) "ವೇಲ್ಯು ಪೇಯಬ್‌ಲ್ ಆರ್ಟಿಕಲ್" ಅಂದರೆ ಪೋಸ್ಟ್ ಆಫೀಸಿನವರು ತಮ್ಮ ವತಕ್ಕೆ ಬಂದ ಲಿಫಾಪೆ ಯಾ ಕಟ್ಟನ್ನು ಅದರ ಮೇಲ್ ವಿಳಾಸಕ್ಕೆ ಮುಟ್ಟಿಸಿ, ಅದರ ಮೇಲೆ ವಾಗ್ದೂಪ ಪಡಿಸಿರುವ ಮೌಲ್ಯವನ್ನು ಅದನ್ನು ಹೊಂದಿದವನಿಂದ ವಸೂಲು ಮಾಡಿ ಅದನ್ನು ರವಾನಿಸಿದವನಿಗೆ ಕೊಡುತ್ತಾರೆ. ಈ ಪ್ರಕಾರ ಪೆಕೆಟುಗಳಾಗಲೀ ರಿಜಿಸ್ತ್ರಿಯಾದ ಪಾರ್ಸೆಲುಗಳಾಗಲೀ ಲಖೋಟೆಗಳಾಗಲೀ ಮನಿಆರ್ಡರ್ ಆಫೀಸುಳ್ಳ ಯಾವ ಪೋಸ್ಟ್ ಆಫೀಸಿನಲ್ಲಾದರೂ ಟಪ್ಪಾಲಿಗೆ ಹಾಕ ಬಹುದು; ಅವುಗಳ ಮೌಲ್ಯ ಮಾತ್ರ ನಾಲ್ಕು ಆಣೆಗೆ ಕಡಿಮೆಯಾಗಲೀ ಸಾವಿರ ರೂಪಾಯಿಗೆ ಮೀರಿ ಆಗಲೀ ಇರ ಬಾರದು; ಮತ್ತು ಅದರಲ್ಲಿ ಆಣೆಯ ಅಂಶವಿರ ಬಾರದು. ಹೀಗೆ ರವಾನಿಸುವವನು ಅದನ್ನು ಹೊಂದತಕ್ಕವನ ವಿಳಾಸ, ಮೌಲ್ಯ ಮುಂತಾವ್ದನ್ನು ಒಂದು ಛಾಪಾಫಾರ್ಮಿನ† ಮೇಲೆ ಬರದು ಅದರ ಸಂಗಡ ಕೊಡ ಬೇಕು. ವೆಲ್ಯುಪೇಯಬ್‌ಲ್ ಆಗಿ ರವಾನಿಸುವ ಪೆಕೆಟು ಯಾ ಲಿಫಾಪೆ ರಿಜಿಸ್ತ್ರಿ ಮಾಡ ಬಹುದು, ಇಲ್ಲವೆ ಮುಂದೆ ವಿವರಿಸಿದ ರೀತಿಯಲ್ಲಿ "ಇನ್ಶೂರ್" ಮಾಡಲೂ ಬಹುದು. ಈ ಪ್ರಕಾರ ರವಾನೆಯಾದ ಕಟ್ಟು ಇಲ್ಲವೆ ಲಿಫಾಪೆ ಅದರ ಠಿಕಾಣಿಗೆ ಬಂದು ಮುಟ್ಟುತ್ತಲೇ, ಅದರ ಮೌಲ್ಯ ಹತ್ತು ರೂಪಾಯಿಗೆ ಮೀರಿದ್ದರೆ, ಅದು ಹೊಂದ ತಕ್ಕವನಿಗೆ ಅದನ್ನು ಕುರಿತು ಚೀಟು ಬರದು ತಿಳಿಸಲಾಗಿ, ಅದರ ಮೇಲೆ ಅತನು ದಸ್ಕತು ಹಾಕಿ ಅದರ ಮೌಲ್ಯ ಸಮೇತ ಅದೇ ಪೋಸ್ಟ್ ಆಫೀಸಿಗೆ ರವಾನಿಸಿ, ಅದನ್ನು ತರಿಸಿಕೊಳ್ಳ ಬಹುದು.

* ಅಂದರೆ ೩೧ ದಿವಸಗಳಿಗೆ ಮೀರದ ಕಾಲಾವಧಿಯಾಗಿ ಪ್ರಕಟವಾಗುವ ಪತ್ರಗಳು.

† ಈ ಫಾರ್ಮು ಟಪ್ಪಾಲುಕಟ್ಟೆಯಲ್ಲಿ ಕ್ರಯವಿಲ್ಲದೆ ಸಿಕ್ಕುತ್ತದೆ.

ಆದರೆ ಅದು ಹತ್ತು ರೂಪಾಯಿಯೊಳಗಿನದಾಗಿದ್ದರೆ, ಅದನ್ನು ಟಪ್ಪಾಲಪೇದೆಯು ಅದರ ವಿಳಾಸವಿರುವ ವನಿಗೆ ಮುಟ್ಟಿಸಿ, ಅದರ ನಿಕಖು ಮೌಲ್ಯವನ್ನು ಅವನಿಂದ ಈಸಿಕೊಳ್ಳುವನು.

(Insurance) "ಇನ್ಯೂರೆನ್ಸ್". ರಿಜಿಸ್ತ್ರಿಯಾದ ಲಿಫಾಪೆ, ಪಾರ್ಸೆಲು, ಪೆಕೆಟು, ವೆಲ್ಯುಪೇಯಬ್‌ಲ್ ಲಿಫಾಪೆ ಇಲ್ಲವೆ ಕಟ್ಟು ಭದ್ರತೆಯಿಂದ ತಲ್ಪಿಸುವ ವಿಷಯದಲ್ಲಿ ಟಪ್ಪಾಲಿನವರು ಜವಾಬುದಾರಿಕೆಯನ್ನು ವಹಿಸಿಕೊಳ್ಳುತ್ತಾರೆ. ಬ್ರೇಂಚು ಆಫೀಸುಗಳಲ್ಲಿ ರೂ. ೫೦೦ ವರೆಗೆ, ಇತರ ಆಫೀಸುಗಳಲ್ಲಿ ರೂ. ೧೦೦೦ ವರೆಗೆ ಇನ್ಯೂರ್ ಮಾಡಿಸಬಹುದು. ಈ ಪ್ರಕಾರ ರವಾನಿಸುವಂಥಾದ್ದು ಭದ್ರವಾಗಿ ಬಂದು ಮುಡಲ್ಪಟ್ಟು, ಅಂಚುಗಳಲ್ಲಿ ಎರಡೆರಡು ಇಂಚುಗಳಿಗೆ ಮೊಹರು ಹಾಕಿ ತರ ಬೇಕು; ಮತ್ತು ಅದರ ಮೇಲ್ಗಡೆಯಲ್ಲಿ ಮೇಲ್ ವಿಳಾಸವನ್ನೂ, ಅಕ್ಷರದಿಂದಲೂ ಅಂಕೆಯಿಂದಲೂ ಅದರ ವಾಜಬಿ ಮೌಲ್ಯವನ್ನೂ ಬರಿಯ ಬೇಕು; ಬರಿಯುವಾಗ ಚಿತ್ತು ಮಾಡ ಬಾರದು. ಇದರ ಯಾವತ್ತು ದಸ್ತೂರಿ ಮುಂದಾಗಿ ತೆರಲೇ ಬೇಕು. ಈ ಪ್ರಕಾರ ಇನ್ಯೂರ್ ಮಾಡ ತಕ್ಕ ಲಖೋಟೆ ಯಾ ಕಟ್ಟು ಟಪ್ಪಾಲಕಟ್ಟೆಗೆ ಹಾಜರು ಮಾಡುವಾಗ ಅದರ ಸಂಗಡ ಅದರ ಮಲಫೂಪುಗಳನ್ನೂ ಮೌಲ್ಯವನ್ನೂ ಕುರಿತು (ಟಪ್ಪಾಲಕಟ್ಟೆಯಿಂದ ಮೂಫಿಯಾಗಿ ಸಿಕ್ಕುವ ಛಾಪಾಫಾರ್ಮದಲ್ಲಿ) ವಾಗ್ರೂಪ ಬರದು ತರ ಬೇಕು. ಸುಳ್ಳು ವಾಗ್ರೂಪ ಪಡಿಸುವವನು ಶಿಕ್ಷೆಗೆ ಗುರಿಯಾಗುವನು.

೫೦ ರೂಪಾಯಿ ಒಳಗಿನ ಮೌಲ್ಯದ ಕಟ್ಟು ತಲಪುತ್ತಲೇ ಅದು ಹೊಂದ ತಕ್ಕವನಿಗೆ ಸಾಧಾರಣ ರೀತಿಯಂತೆ ಒಪ್ಪಿಸೋಣಾಗುವದು; ಅದರೆ ೫೦ ರೂಪಾಯಿಗೆ ಮಿಂಚಿದ ಮೌಲ್ಯದ ಕಟ್ಟು ಟಪ್ಪಾಲ ಕಟ್ಟೆಯಲ್ಲಿಯೇ ಒಪ್ಪಿಸಲಾಗುವದು. ಕಟ್ಟು ಹೊಂದಿದವನಿಂದ ಅದು ತಲಪಿದ್ದಕ್ಕೆ ರಶೀದಿ ಪಡಕೊಂಡು, ಕಟ್ಟು ರವಾನಿಸಿದವನಿಗೆ ಮುಟ್ಟಿಸೋಣಾಗುವದು.

(Value Payable Commission) ಮೌಲ್ಯ ವಸೂಲು ಮಾಡಿ ಕೊಡಿಸುವ ಬಗ್ಗೆ ವಟ್ಟು:

	ಆ.
ಕಟ್ಟಿನ ಮೌಲ್ಯ ೧೦ ರೂಪಾಯಿಗೆ ಮಿಂಚದಿದ್ದರೆ	೨
" ೫೦ " " "	೪
ಹೆಚ್ಚಿಗೆ ಪ್ರತಿ ೫೦ " ಯಾ ಅದರ ಅಂಶಕ್ಕೆ	೪

ಕಟ್ಟು ರವಾನಿಸಿದವನಿಗೆ ತರಿಸಿಕೊಡ ತಕ್ಕ ಹಣದಿಂದ ಈ ದರದಲ್ಲಿ ವಟ್ಟ ವಜಾ ಮಾಡಲಾದೀತು. ಅದರೆ ಕಟ್ಟು ಹೊಂದ ತಕ್ಕವನು ಅದು ತನಗೆ ಬೇಡವೆಂದು ವಾಪಸು ಮಾಡಿದರೆ, ಅದನ್ನು ರವಾನಿಸಿದವನೇ ಅದರ ಟಪ್ಪಾಲ ಹಾಸಲು ಸಹ ತೆರುವದಕ್ಕೆ ಬದ್ಧನಾಗುವನು.

(Insurance) ಲಿಫಾಪೆಗಳಾಗಲೀ ಕಟ್ಟುಗಳಾಗಲೀ ಸುರಕ್ಷಿತವಾಗಿ ಮುಟ್ಟಿಸಿ ಕೊಡುತ್ತೇವೆಂದು ಹೊಣೆ ಮಾಡೋಣಾಗುವದಕ್ಕೆ ವಟ್ಟು:

	ಆ.
ಕಟ್ಟಿನ ಕ್ರಯ ರೂ. ೫೦ಕ್ಕೆ ಮಿಂಚದಿದ್ದರೆ	೨
" " ೧೦೦೦ಕ್ಕೆ "	೪
ಹೆಚ್ಚಿಗೆ ಪ್ರತಿ " ೧೦೦೦ಕ್ಕೆಯಾ ಅದರ ಅಂಶಕ್ಕೆ	೪

ನಮ್ಮ ಹಿಂದುಸ್ಥಾನವನ್ನು ಏಕಛತ್ರಾಧಿಪತ್ಯವಾಗಿ ಆಳುವ ಮಹಾರಾಣಿ ಚಕ್ರವರ್ತಿನಿಯವರು ಪಟ್ಟಕ್ಕೆ ಬಂದು ಇದೇ ಕಳದ ಜೂನು ತಿಂಗಳಿಗೆ ಅರುವತ್ತು ಸಂವತ್ಸರಗಳು ಸಂಪೂರ್ಣಿಸಿದವು. ೧೮೭೭ನೆ ಇಸವಿಯಲ್ಲಿ ಅವರ ರಾಜ್ಯಭಾರದ ಐವತ್ತನೆ ಸಂವತ್ಸರವು ಸಂಪೂರ್ಣಿಸಿದಾಗ ಈ ಸಾಮ್ರಾಜ್ಯದಲ್ಲೆಲ್ಲಿಯೂ ಕೋಲಾಹಲದೊಡನೆ ಮಹೋತ್ಸವವು ಮಾಡೋಣವಾಗಿತ್ತು. ಆದರೆ ಅಂದು ಚಕ್ರವರ್ತಿನಿಯವರು ಇನ್ನೊಂದು ಹತ್ತು ವರ್ಷಗಳು ರಾಜ್ಯಭಾರ ಮಾಡುವರೆಂದು ಯಾರೂ ಭವಿಷ್ಯ ಹೇಳಲಾರದಿದ್ದರು. ಅವಿಚ್ಛಿನ್ನವಾಗಿ ಆರುವತ್ತು ವರ್ಷಗಳು ಅಂದರೆ ನಮ್ಮ ದೇಶದವರು ಹೇಳುವಂತೆ ಒಂದು ಯುಗವು ಸಾಮ್ರಾಜ್ಯವನ್ನು ಆಳುವವರಾದದ್ದು ಅವರೂ ಅವರೊಂದಿಗೆ ಸಮಸ್ತ ಪ್ರಜೆಯವರೂ ಸಂತೋಷ ಪಡ ತಕ್ಕದ್ದೇ. ಚಕ್ರವರ್ತಿನಿಯವರ ಪೂರ್ವಜರಲ್ಲಿ ಐವತ್ತು ವರ್ಷಗಳು ರಾಜ್ಯಭಾರ ಮಾಡಿದವರು ಇಬ್ಬರಿದ್ದಾರೆ; ಆರುವತ್ತು ವರ್ಷ ಮಾಡಿದವರಲ್ಲಿ ಇವರೇ ಮೊದಲನೆಯವರು. ಚಕ್ರವರ್ತಿನಿಯವರು ೧೮೫೭ನೇ ಸಂವತ್ಸರದಲ್ಲಿ ಘನವುಳ್ಳ ಈಸ್ಟ ಇಂಡಿಯಾ ಕುಂಪನಿಯವರಿಂದ ರಾಜ್ಯಭಾರವನ್ನು ವಹಿಸಿದ ಮೇಲೆ ಪ್ರಜೆಗಳ ಸೌಖ್ಯವೂ ಅಭಿವೃದ್ಧಿಯೂ ವ್ಯಾಪಾರವೃದ್ಧಿಯೂ ರೈಲುರಸ್ತೆಗಳ ಬಡಾವಣೆಯೂ ತಂತಿಟಪ್ಪಾಲಿನ ಮತ್ತು ವಿದ್ಯುಚ್ಛಕ್ತಿಯ ಆಶ್ಚರ್ಯಗಳೂ ವಿದ್ಯಾವೃದ್ಧಿಯೂ ಉತ್ತರೋತ್ತರವಾಗುತ್ತಾ ಬಂದವೆಂಬುವದು ಸರ್ವಸಮ್ಮತವಾಗಿದೆ. ಅದಲ್ಲದೆ ಅವರ ಸಾಮ್ರಾಜ್ಯದಲ್ಲಿ ಪ್ರಜೆಗಳೆಲ್ಲರೂ ಪರಚಕ್ರಗಳ ಭೀತಿಯಿಲ್ಲದೆ ತಂತಮ್ಮ ವ್ಯಾಪಾರ ಉದ್ದಿಮೆಗಳನ್ನು ಮಾಡಿಕೊಂಡು ಕ್ಷೇಮವಾಗಿರುತ್ತಾರೆ; ಈ ಸಮಸ್ತ ಉಪಕಾರಗಳನ್ನು ಮಹಾದೇವರು ಅವರ ಅಳಿಕೆಯಲ್ಲಿ ನಮಗೆ ದಯಪಾಲಿಸಿದನೆಂದು ನಾವು ಸ್ಮರಿಸಿ, ದೇವರು ಅವರ ಸಿಂಹಾಸನವನ್ನು ಸಾರೋದ್ಧಾರವಾಗಿ ಶಾಶ್ವತಗೊಳ್ಳಿಸುವವನಾಗಲಿ ಎಂದು ಪ್ರಾರ್ಥಿಸುವದು ನಮ್ಮ ಧರ್ಮವಾಗಿದೆ; ಅವರೂ ಅವರ ಸಹಾಯಕರಾದ ಮಂತ್ರಿಗಳೂ ಕುಲದಲ್ಲಿಯೂ ಮತದಲ್ಲಿಯೂ ಭಿನ್ನವಾದ ನಾನಾ ಜನಾಂಗಗಳು ವಾಸಿಸುವ ಈ ಮಹಾ ಸೀಮೆಯನ್ನು ಆಡಳಿತೆ ಮಾಡುವದು ಸದರವಾದ ಕೆಲಸವಲ್ಲಾ; ಅದಕ್ಕೆ ಮಹಾ ವಿವೇಕವೂ ನಿಪುಣತ್ವವೂ ಬೇಕು. ರಾಜಾಧಿರಾಜನಾದ ದೇವರು ಅವರಿಗೆ ಕೈವರ್ತಿಸಿದ ಈ ರಾಜ್ಯವನ್ನು ಆತನ ಚಿತ್ತಾನುಸಾರವಾಗಿ ಪರಿಪಾಲಿಸುವಂತೆ ಅಂಥಾ ವಿವೇಕವನ್ನು ಕೊಡಿಸಿ ಅವರಲ್ಲಿ ಪ್ರಜೆಗಳಿಗೆ ಹಿತಕರವಾದ ಆಲೋಚನೆಗಳನ್ನು

ಹುಟ್ಟಿಸಿ ಕ್ಷಮಿಡಾಮರಾದಿ ಈತಿಬಾಧೆಗಳನ್ನು ನಿವಾರಣೆ ಮಾಡುವವನಾಗಲಿ. ಡಯಮಂಡ ಜುಬಿಲಿ ಎಂಬುವ ಈ ಉತ್ಸವವು ಹಿಂದುಸ್ಥಾನದ ಎಲ್ಲಾ ಪಟ್ಟಣಗಳಲ್ಲಿ ವಿಜೃಂಭಣೆಯಾಗಿ ಆಚರಿಸಲಾಯಿತು. ಚಕ್ರವರ್ತಿನಿಯವರಿಗೆ ಸನ್ಮಂಗಲವಾಗಲಿ ಎಂದು ಬಿನ್ನವಿಸುವ ಪತ್ರಗಳು ಬೇರೆ ಬೇರೆ ಮತಸ್ಥರಿಂದಲೂ ಸಂಘದವರಿಂದಲೂ ಬರೆಯಲ್ಪಟ್ಟವುಗಳು, ವೈಸರಾಯ ದೊರೆಗಳವರ ಮುಖಾಂತರವಾಗಿ ಚಕ್ರವರ್ತಿನಿಯವರಿಗೆ ಕಳುಹಿಸಲಾದವು; ದೀಪೋತ್ಸವಗಳೂ ಶಾಲೆಗಳ ಮಕ್ಕಳಿಗೆ ಬೇರೆ ಬೇರೆ ವಿಸೋದಗಳೂ ಮಾಡಲಾದವು. ಬಡವಾಯಿ ಜನರಿಗೆ ದಾನಧರ್ಮವೂ ಮಾಡಲಾಯಿತು. ದೇವಾಲಯಗಳಲ್ಲಿ ಅವರಿಗಾಗಿಯೂ ಅವರ ಕುಟುಂಬಕ್ಕಾಗಿಯೂ ಪ್ರಾರ್ಥನೆ ಮಾಡಲಾಯಿತು; ಕೆಲವು ಕಡೆಗಳಲ್ಲಿ ಹಣ ಶೇಖರಿಸಿ ಈ ಉತ್ಸವದ ಜ್ಞಾಪಕವನ್ನು ಶಾಶ್ವತಗೊಳ್ಳಿಸುವದಕ್ಕೆ ವಿಶೇಷವಾದದ್ದೇನಾದರೂ ಮಾಡಬೇಕೆಂದು ನಿಶ್ಚಯಿಸಿದ್ದಾಯಿತು. ಅದಲ್ಲದೆ ಸರ್ವ ಹಿಂದುಸ್ಥಾನದಲ್ಲಿ ಬಂದಿವಾನರನ್ನು ಶೀಕಡೆಗೆ ೧೫ರ ಪ್ರಕಾರ ಬಿಡುಗಡೆ ಮಾಡಬೇಕೆಂಬ ಹುಕುಮು ಆದ ಪ್ರಕಾರ ಇಪ್ಪತ್ತುಸಾವಿರ ಬಂದಿವಾನರನ್ನು ಬಿಡಿಸಿದ್ದಲ್ಲದೆ ಹಲವರಿಗೆ ಶಿಕ್ಷೆಯ ಅವಧಿ ಕಡಿಮೆ ಮಾಡಲಾಯಿತು. ಹೀಗೆ ಎಲ್ಲಾ ಊರುಗಳಲ್ಲಿಯೂ ಸಂತೋಷವಿರುವಾಗ ಅದೇ ದಿನದಲ್ಲಿ ಪುಣೆಯಲ್ಲಿ ಭಯಂಕರವಾದ ಪ್ರಾಣಘಾತವು ಸಂಭವಿಸಿತು. ಗವರ್ನರ್ ದೊರೆಗಳವರಲ್ಲಿ ಭಾರಿ ಮೇಜುವಾನಿಕೆಯಾಗಿ ಅಲ್ಲಿಗೆ ಹೋಗಿದ್ದ ಇಬ್ಬರು ಸರದಾರರು ವಾಪಸು ಬರುವಾಗ ಕತ್ತಲೆಯಲ್ಲಿ ದಾರಿಯಲ್ಲಿ ಹೊಂಚುತ್ತಿದ್ದ ದುಸ್ಮಾನರು ಅವರ ಮೇಲೆ ಗುಂಡು ಎಸೆದರು; ಒಬ್ಬರು ಸರದಾರರು ಕೂಡಲೇ ಗುಂಡು ತಾಗಿ ಸತ್ತರು; ಅವರು ಗ್ರಂಥಿಕವ್ಯಾಧಿ ಪ್ರಜಲಿತವಾಗಿದ್ದ ಕಾಲದಲ್ಲಿ ಸರಕಾರದ ಹುಕುಮನ್ನು ಬಹು ಜಾಗ್ರತೆಯಿಂದ ನಡಿಸುವವರಾದ್ದರಿಂದ ಕೆಲವರಿಗೆ ಅವರ ಮೇಲೆ ದುಹಿ ಇತ್ತಂತೆ; ಇನ್ನೊಬ್ಬ ಸರದಾರರು ಗಾಯ ಪಟ್ಟು ಕೆಲವು ದಿನಗಳ ಮೇಲೆ ತೀರಿಹೋದರು. ಈ ದುಷ್ಕೃತವನ್ನು ಡಯಮಂಡ ಜುಬಿಲಿಯ ದಿನವೇ ಮಾಡಬೇಕೆಂದು ದುಸ್ಮಾನರು ಮೊದಲೇ ಹವಣಿಸಿದ್ದಾಗಿ ತೋರುತ್ತದೆ. ಇದಕ್ಕೆ ಮೊದಲು ಪುಣೆಯ ಶಹರಿನಲ್ಲಿ ಛಾಪೆಯಾಗುವ ಕೆಲ ವರ್ತಮಾನ ಪತ್ರಗಳಲ್ಲಿ ಸರಕಾರಕ್ಕೆ ವಿರೋಧವಾದ ಆಯಾ ಉಲ್ಲೇಖಗಳೂ ಜನರೊಳಗೆ ದ್ರೋಹಚಿಂತನೆಯನ್ನು ಹುಟ್ಟಿಸುವ ವಿವರಗಳೂ ಪ್ರಕಟವಾಗುತ್ತಿದ್ದವು. ಇದನ್ನೆಲಾ ಸರಕಾರದವರು ಚಿತ್ತಕ್ಕೆ ತಂದು ಪುಣೆಯಲ್ಲಿ ಬಂದೋಬಸ್ತಿಯ ಬಗ್ಯೆ ಹೊಸತಾಗಿ ಪೊಲೀಸ ಸಿಬಂದಿ ಏರ್ಪಡಿಸಿ ಅದರ ಖರ್ಚು ಯಾವತ್ತೂ ಪಟ್ಟಣದವರೇ ಕೊಡ ತಕ್ಕದ್ದೆಂದು ಹುಕುಮು ಮಾಡಿದ್ದಾರೆ.

ಮೈಸೂರಿನಲ್ಲಿ ಮಹಾರಾಜರ ಹಿರೇ ಕುಮಾರ್ತಿಯ ವಿವಾಹೋತ್ಸವಕ್ಕಾಗಿ ಹೇರಳ ಹಣ ಖರ್ಚು ಮಾಡಿ ಬಹಳ ದೊಡ್ಡ ಚಪ್ಪರವನ್ನು ಹಾಕಿಸಿದ್ದರು. ಈ ಚಪ್ಪರದ ಒಂದು ಕೊನೆಗೆ ಅನ್ನೀರೀಕ್ಷ್ಯವಾಗಿ ಬೆಂಕಿ ಹಿಡಿದು ಪ್ರಬಲವಾಗಿ ನೊಂದಿಸುವದಕ್ಕೆ ಎಷ್ಟು ಪ್ರಯತ್ನ ಮಾಡಿದರೂ ವ್ಯರ್ಥವಾಗಿ, ಬೆಂಕಿ ಅರಮನೆಗೂ ಪ್ರವೇಶ ಮಾಡಿತು. ಹೀಗಾಗಿ ಮುಕ್ಕಾಲು ಪಾಲು ಅರಮನೆಯು ಸುಟ್ಟುಹೋದದ್ದಲ್ಲದೆ ಹೇರಳ ಅಮೂಲ್ಯ ವಸ್ತು ಒಡವೆಗಳೂ ಪುರಾತನ ಗ್ರಂಥಗಳೂ ಭಸ್ಮವಾದವು. ಈ ಅರಮನೆಯನ್ನು ಕಟ್ಟಿಸಿ ೯೭ ವರ್ಷಗಳಾಗಿದ್ದವು. ಮೈಸೂರು ಸಂಸ್ಥಾನದ ಶಿವ

ಮೊಗ್ಗೆ ಮೊದಲಾದ ಕೆಲವು ದೇಶಗಳಲ್ಲಿ ಕಳ್ಳರ ಅವಾಂತರವು ಹೆಚ್ಚಾಗಿತ್ತು; ಕಳ್ಳರು ದರೋಡೆ ಹಾಕುವದಲ್ಲದೆ ದಾರಿಯಲ್ಲಿ ಹೊಂಚು ಹಾಕಿ ಮಾರ್ಗಸ್ಥರನ್ನು ಸುಲುಕೊಳ್ಳುವವರಾದದರಿಂದ ನಿರ್ಭಯವಾಗಿ ಪಯಣ ಮಾಡುವದು ಅನಾನುಕೂಲವಾಗಿತ್ತು; ಆದರೆ ಮೈಸೂರು ಅರಸ್ಥಾನದವರು ಪೊಲೀಸಿನವರ ಒತ್ತಾಸೆಗೆ ಸೈನಿಕರನ್ನು ಕಳುಹಿಸಿ ಕಳ್ಳರನ್ನು ಹಿಡಿಸಿ ಶಿಕ್ಷೆ ಮಾಡಿಸಿದ್ದರಿಂದ ರೈತರಿಗೆಲ್ಲಾ ಕ್ಷೇಮವಾಯಿತು. ಮೈಸೂರು ಸಂಸ್ಥಾನದವರು ತಮ್ಮ ರಾಜ್ಯದಲ್ಲಿ ಬಾಲವಿವಾಹಗಳು ಆಚರಿಸಲಾಗದೆಂದು ಕಾನೂನು ಮಾಡಿ ಅದನ್ನು ಉಲ್ಲಂಘಿಸುವವರನ್ನು ಕರೆಯಿಸಿ ತಕ್ಕ ಶಿಕ್ಷೆ ಮಾಡಿಸುವದು ಶ್ಲಾಘನೀಯವಾಗಿದೆ. ಅದಲ್ಲದೆ ಕನ್ಯೆಯರಿಗೆ ಹನ್ನೆರಡು ವರ್ಷಗಳೊಳಗೆ ಅಲ್ಲಾ ಇಪ್ಪತ್ತನೆ ಪ್ರಾಯದಲ್ಲಿ ಮದುವೆ ಮಾಡಿಸುವದು ಒಳ್ಳೇದೆಂದು ಕೆಲವರು ಆಲೋಚಿಸುವವರಿದ್ದಾರೆ. ಇತ್ತಲಾಗೆ ಒಬ್ಬ ಬ್ರಾಹ್ಮಣ ಜೋಯಿಸನು ಸುಮಾರು ೫೦ ವರ್ಷ ಪ್ರಾಯದವನು ಸಜಾತೀಯವಳಾದ ಇಪ್ಪತ್ತು ಪ್ರಾಯದ ಕನ್ಯೆಯನ್ನು ಮದುವೆ ಮಾಡಿಕೊಂಡನು. ಕನ್ಯೆಗೆ ಶೀಘ್ರದಲ್ಲಿ ಮದುವೆ ಮಾಡಬೇಕೆಂದು ಕುಲಗುರು ಹೇಳಿದ ಮಾತನ್ನು ತಂದೆ ಸರಕು ಮಾಡಲಿಲ್ಲವಂತೆ. ತಂದೆಯ ಮರಣಾನಂತರ ಅವಳ ಅಣ್ಣಂದಿಯರು ಒಳ್ಳೊಳ್ಳೇ ಉದ್ಯೋಗದಲ್ಲಿರುವವರು ಶಾಸ್ತ್ರೋಕ್ತವಾಗಿ ಅವಳನ್ನು ಮೇಲೆ ಹೇಳಿದ ಮನುಷ್ಯನಿಗೆ ಧಾರೆ ಎರದು ಕೊಟ್ಟರು.

ಮದ್ರಾಸಸಂಸ್ಥಾನದಲ್ಲಿ ವಿಷಜಂತುಗಳು ಕಚ್ಚಿ ಎಷ್ಟು ಮಂದಿ ಸಾಯುತ್ತಾರೆಂಬುವದನ್ನು ವಾಚಕರು ಅರಿಯರು. ಇದೇ ಕಳೆದ ಐದು ವರ್ಷಗಳಿಂದ ಹೀಗೆ ಮರಣ ಪಡುವವರ ಸಂಖ್ಯೆ ಹೆಚ್ಚಾಗುತ್ತಾ ಬಂದದೆ. ೧೮೯೫ರಲ್ಲಿ ಹೀಗೆ ಸತ್ತವರ ಲೆಕ್ಕವು ೧೪೬೫ ಆಗಿದ್ದದ್ದು ೧೮೯೬ರಲ್ಲಿ ೧೬೬೯ ವರೆಗೆ ಏರಿತು. ಅದೇ ಕಾರಣದಿಂದ ಸತ್ತ ಪಶುಗಳ ಲೆಕ್ಕವು ೧೪೫೨ರಿಂದ ೧೭೦೭ರ ವರೆಗೆ ಏರಿತು. ದಕ್ಷಿಣ ಆರ್ಕಾಡಿನಲ್ಲಿ ವಿಷಜಂತುಗಳು ಕಡಿದು ಸತ್ತವರೇ ಹೆಚ್ಚು.

ಗೋವೆಯಲ್ಲಿ ಕೆಲವು ಕಾಲದಿಂದ ನಡಿಯುತ್ತಿರುವ ದಂಗೆಯು ಇನ್ನೂ ಪೂರಾ ಅಣಗಲಿಲ್ಲಾ. ದಂಗೆಗಾರರು ಕಾಡಿನಲ್ಲಿ ಸೇರಿಕೊಂಡು ಆಗಾಗ್ಯೆ ತಂಟೆ ಮಾಡುತ್ತಿದ್ದಾರೆ. ಸರಕಾರಿ ಸೈನ್ಯವು ಬರುವಾಗ ಅವರು ಕಾಡಿನಲ್ಲಿ ಅವಿತುಕೊಳ್ಳುವದರಿಂದ ಅವರನ್ನು ಹುಟ್ಟಡಗಿಸುವದು ಪ್ರಯಾಸವಾಗಿದೆ.

ಮುಂಬಾಯಿಯಲ್ಲಿ ಬ್ಯುಬೊನಿಕ್ ಪ್ಲೇಗ್ ಎಂಬುವ ಗ್ರಂಥಿಕವ್ಯಾಧಿಯು ಪ್ರವೇಶಿಸಿ ಬಹು ಜನರನ್ನು ಆಹುತಿ ಮಾಡಿತು. ಹೇರಳ ಜನರು ವ್ಯಾಧಿಗೆ ಹೆದರಿ ಪರವೂರಿಗೆ ಗುಳೆತೆಗದರು. ಜನಸ್ತೋಮದಿಂದ ತಿಮುಕುತ್ತಿದ್ದ ಪಟ್ಟಣವು ನಿರ್ಜನ ಪ್ರದೇಶದಂತೆ ಭಯಂಕರವಾಗಿ ತೋರಿತು. ವ್ಯಾಪಾರವು ಮಂದವಾಯಿತು. ಪಟ್ಟಣದ ಅಧಿಕಾರಸ್ಥರು ವ್ಯಾಧಿಯನ್ನು ಅಣಗಿಸಲಾರರೆಂದು ಸರಕಾರದವರು ತಿಳಿದು ಸೈನ್ಯವನ್ನು ತರಿಸಿ ವ್ಯಾಧಿತರನ್ನು ಬೇರೆಯವರಿಂದ ವಿಂಗಡಿಸಿ ಪ್ರತ್ಯೇಕವಾಗಿ ಕಟ್ಟಿಸಿದ ಆಸ್ಪತ್ರಿಗಳಿಗೆ ವೈಯಿಸಿ ಆರೈಕೆ ಮಾಡಿಸಿದರು; ಪುಣೆಯಲ್ಲಿಯೂ ಕರಾಚಿಯಲ್ಲಿಯೂ ಅದೇ ರೋಗವು ಹೊಕ್ಕು ಬಹಳ ಮನುಷ್ಯರು ಗಾಸಿಯಾಗುವದಕ್ಕೆ ಕಾರಣವಾಯಿತು. ಸರಕಾರದವರು ಕರಾವಳಿಯ ಬಂದರುಗಳಲ್ಲಿಯೂ ರೈಲ್ವೆ ಠಾಣ್ಯಗಳಲ್ಲಿ

ಯೂ ಕ್ವಾರಾಂಟಿನ್ ಎಂಬ ಪ್ರತಿಬಂಧಕವನ್ನು ಇರಿಸದೆ ಇದ್ದರೆ ವ್ಯಾಧಿಯು ನಾಲ್ಕು ಕಡೆಯಲ್ಲಿಯೂ ಪ್ರಸರಿಸುವದೆಂಬುವದಕ್ಕೆ ಸಂದೇಹವಿಲ್ಲಾ. ಈ ವ್ಯಾಧಿಗೆ ಚಿಕಿತ್ಸೆ ಮಾಡುತ್ತೇವೆಂದು ಇಬ್ಬರು ಯುರೋಪೀಯ ವೈದ್ಯರು ಬಹಳ ಪ್ರಯತ್ನ ಮಾಡಿದರೂ ಪ್ರಯೋಜನವಾಗಲಿಲ್ಲಾ; ವ್ಯಾಧಿಯ ಸ್ವಭಾವವನ್ನು ಪರೀಕ್ಷಿಸುವದಕ್ಕೆ ವಿಲಾಯತಿಯಿಂದ ಬಂದ ಬೇರೆ ಬೇರೆ ವೈದ್ಯರು ಸ್ವದೇಶಕ್ಕೆ ತೆರಳಿ ಹೋದರು; ಬಹಳ ಆಲೋಚನೆಯಿಂದ ಒಂದಾನೊಂದು ಚಿಕಿತ್ಸೆ ಅವರ ಬುದ್ದಿಗೆ ಸೂಚಿಸುವದೋ ನೋಡಬೇಕು. ಈ ಗ್ರಂಥಿಕವ್ಯಾಧಿಯು ೧೮೯೪ರಲ್ಲಿ ಚೀನಿ ಸಾಮ್ರಾಜ್ಯದ ಹೊಂಕೊಂಗ ಪಟ್ಟಣದಲ್ಲಿ ಪಸರಿಸಿ ಬಹಳ ಹಾವಳಿ ಮಾಡಿ ಇತ್ತು.

ದಖಣದಲ್ಲಿಯೂ ಮಧ್ಯಪ್ರದೇಶಗಳಲ್ಲಿಯೂ ಉತ್ತರದಲ್ಲಿಯೂ ಕ್ಷಾಮವು ಬಿದ್ದು ಲಕ್ಷಗಟ್ಟಳೆ ಜನರು ಹೊಟ್ಟೆಹೊರಕೊಳ್ಳುವದಕ್ಕೆ ಮಾರ್ಗವೇನೂ ಕಾಣದೆ ಬಳಲುವವರಾದರು. ಇಂಥವರ ಸಹಾಯಾರ್ಥವಾಗಿ ಸರಕಾರದವರು ಅಲ್ಲಲ್ಲಿ ರಸ್ತೆಗಳನ್ನು ಮಾಡುವದೂ ರೈಲುಮಾರ್ಗ ಮಾಡುವದೂ ಕೆರೆಕಡಿಯುವದೂ ಮೊದಲಾದ ಕಾಮಗಾರಿಗಳನ್ನು ಸ್ಥಾಪಿಸಿ ಬಂದ ಬಂದವರಿಗೆಲ್ಲಾ ಕೆಲಸಕೊಡಿಸಿ ಜೀವನದ ಮಾರ್ಗ ಮಾಡಿಸಿದರು. ಹೀಗೆ ಗೇಯುವವರು ೪೬ ಲಕ್ಷಕ್ಕಿಂತಲೂ ಹೆಚ್ಚು ಮಂದಿ ಇದ್ದರು. ಕಾಮಗಾರಿಯಲ್ಲಿ ಗೇಯಲಾರದ ಮುದುಕತದುಕರಿಗೂ ಸಂಕಟದವರಿಗೂ ಅನ್ನಸತ್ರಗಳನ್ನಿಡಿಸಿ ಊಟ ಹಾಕಿಸಿದರು. ನಮ್ಮ ದೇಶದ ಸಂಸ್ಥಾನಿಕರೂ ಶ್ರೀಮಂತರೂ ಹರದರೂ ಇತರ ಸಾಮಾನ್ಯ ಜನರೂ ಸಹಾ ಬರಗಾಲದ ಬಾಧೆ ಅನುಭವಿಸುವವರ ಅವಸ್ಥೆಯನ್ನು ತಿಳಿದು ವರಾಡವಂತಿಗೆ ಹಾಕಿ ಹೇರಳ ಹಣ ಶೇಖರಿಸಿ ಅಲ್ಲಿಗೆ ಕಳುಹಿಸಿದರು. ಅದಲ್ಲದೆ ರುಸ್ಯದಿಂದಲೂ ಅಮೇರಿಕದ ಸಂಯುಕ್ತ ಸಂಸ್ಥಾನಗಳಿಂದಲೂ ಕಾನದಾ ಸೀಮೆಯಿಂದಲೂ ಉದಾರಗೃಹಸ್ಥರು ಹೇರಳ ರೂಪಾಯಿ ಇತ್ತ್ಕಡೆಗೆ ತಲಪಿಸಿದರು. ಈ ರೀತ್ಯಾರೈತರು ಸಹಾಯ ಮಾಡದಿದ್ದರೆ ಸರಕಾರದವರಿಗೆ ೪೬ ಲಕ್ಷಕ್ಕಿಂತ ಹೆಚ್ಚಾದ ಬಡವರನ್ನು ದುಷ್ಕಾಲದಲ್ಲಿ ಪೋಷಿಸುವದು ಅಸದಳವಾಗಿರುವದು. ಇಂಗ್ಲಾಂಡಿನವರೇ ಸುಮಾರು ಒಂದುವರೆ ಕೋಟಿ ರೂಪಾಯಿ ಇತ್ತಲಾಗೆ ರವಾಣಿಸಿದರು. ನಮ್ಮ ದೇಶಸ್ಥರಾಗಿರುವವರಿಗೆ ಪರರಾಜ್ಯಗಳವರು ಇಷ್ಟು ಉದಾರವಾಗಿ ಸಹಾಯ ಮಾಡಿದ್ದು ನಮಗೆ ಮಾಡಿದ್ದಂತಾಯಿತು ಎಂದು ತಿಳಿದು, ದೇವರ ಮುಂದೆ ಅವರ ಉಪಕಾರ ಸ್ಮರಣೆ ಮಾಡಿ ಅವರಿಗೆ ಒಳ್ಳೇದಾಗಲಿ ಎಂದು ಪ್ರಾರ್ಥಿಸಬೇಕು. ಉತ್ತರಸೀಮೆಗಳಲ್ಲಿ ಹೊಡೆದ ಬರಗಾಲದ ಪೆಟ್ಟು ನಮ್ಮ ಜಿಲ್ಲೆಯಲ್ಲಿಯೂ ತಾಗದೆ ಹೋಗಲಿಲ್ಲಾ; ಇಲ್ಲಿಯೂ ದವಸಧಾನ್ಯದ ಧಾರಣೆ ಮಟ್ಟು ವಿಾರಿ ಏರಿತೆಂಬುವದು ವಿಶದವಷ್ಟೇ. ಇತ್ತಿತ್ತ ಉತ್ತರದಲ್ಲಿ ಮಳೆಯಾಗಿ ಸುಭಿಕ್ಷೆಯ ಚಿಹ್ನೆಗಳು ತೋರಿದ್ದರಿಂದ ಕಾಮಗಾರಿಗಳಲ್ಲಿ ಗೇಯುವವರ ಸಂಖ್ಯೆ ಕಡಿಮೆಯಾಗುತ್ತಾ ಬರುತ್ತದೆ.

ಹಿಂದಕ್ಕೆ ಬರ ಬಿದ್ದಾಗ ಗೋಕಾಯಿಗಳನ್ನು ಉಳಿಸುವದಕ್ಕೆ ಬಹಳ ಪ್ರಯತ್ನ ನಡೆಯಲಿಲ್ಲಾ. ಈ ಸಾರಿ ಸರಕಾರದವರು ಪರವೂರುಗಳಿಂದ ಮೇವನ್ನು ತರಿಸಿ ರೈತರಿಗೆ ಅಗ್ಗದಲ್ಲಿ ಮಾರಿದ್ದರಿಂದ ದನಕರಗಳಿಗೆ ಮಹಾ ಉಪಕಾರ ಮಾಡಿದರು. ಕ್ಷಾಮಕ್ಕಾಗಿ ಏರ್ಪಡಿಸಿದ ಫಂಡಿನ ಹಣದಿಂದ ಎತ್ತುಗಳನ್ನು ಕೊಳ್ಳುವದಕ್ಕೆ ರೈತರಿಗೆ

ಮುಂಗಡವನ್ನು ಕೊಡುತ್ತಾರೆ. ಹೀಗೆ ಅನುಪತ್ಯದಲ್ಲಿ ತಕ್ಕ ಸಹಾಯವಾಗುವದರಿಂದ ಬಡ ರೈತರು ಮೆಲ್ಲಗೆ ಏಳಿಕೆಗೆ ಬರುವರು. ಗೋದಾವರಿ ಜಿಲ್ಲೆಯ ಕೆಲವು ಊರುಗಳಲ್ಲಿ ಕೋಯಿಗಳು ಮಾಲರು ಮಾದಿಗರು ಎನ್ನುವ ಕಿರುಕುಲದವರು ಬರ ಗೆಟ್ಟು ಹೊಟ್ಟೆಯುರಿ ತಾಳಲಾರದೆ ತಂಡೋಪತಂಡಗಳಾಗಿ ಗ್ರಾಮಗಳನ್ನು ಸೂರೆ ಮಾಡುವದಕ್ಕೆ ಪ್ರಾರಂಭಿಸಿದರು. ಆದರೆ ಪೊಲೀಸಿನವರು ತುಂಟರನ್ನೆಲ್ಲಾ ಹಿಡಿದರು. ಆ ಪ್ರಾಂತ್ಯದಲ್ಲಿ ಸರಕಾರದವರು ಭದ್ರತೆ ಬಗ್ಯೆ ಪೊಲೀಸಿನವರ ಒತ್ತಾಸೆಗೆ ಪಟಲಾಮಿನವರನ್ನೂ ಇರಿಸಿದ್ದಾರೆ.

ಬಂಗಾಳದ ಕಲ್ಕತದಲ್ಲಿ ಉಂಟಾದ ಭೂಕಂಪದ ವಿವರವನ್ನು ಕೇಳುವಾಗ್ಯೆ ಯಾರಿಗೂ ಭಯವಾಗದಿರಲಿಕ್ಕಿಲ್ಲಾ. ಭೂಕಂಪವು ಕಲ್ಕತದಲ್ಲಿ ಮಾತ್ರವಲ್ಲಾ, ಬಹು ವಿಶಾಲವಾದ ಪ್ರದೇಶದಲ್ಲಿ ಅಸ್ಸಮು ವರೆಗೆ ಸ್ಪರ್ಶವಾಗಿ ಬಹಳ ಹಾವಳಿ ಮಾಡಿತು. ಭಾರಿಭಾರಿ ಮನೆಗಳು ಬಿದ್ದವು; ಹಲವು ಮನೆಗಳು ಅದುರಿ ವಾಸ್ತವ್ಯಕ್ಕೆ ಬಾರದಂತೆ ಕಿಗ್ಗಳವಾದವು; ಕೆಲವು ನೆಲದಲ್ಲಿ ಹೂತವು; ಮಾರ್ಗಗಳು ಹಾಳಾದವು; ರೈಲು ಮಾರ್ಗವೂ ಕೆಟ್ಟಿತು; ಒಂದು ಸ್ಥಳದಲ್ಲಿ ಗುಡ್ಡಕ್ಕೆ ಗುಡ್ಡವೇ ಕುಸಿದು ಬಿದ್ದು ಗ್ರಾಮಗಳೆಲ್ಲಾ ಮಣ್ಣಿನ ಅಡಿಗೆ ಆದವು. ಇನ್ನೊಂದು ಸ್ಥಳದಲ್ಲಿ ನೀರು ಒಳಗೆ ಬಂದು ಪೇಟೆ ಜಲಮಯವಾಯಿತು; ಡಾರ್ಜೀಲಿಂಗ ಎಂಬುವಲ್ಲಿ ಚಾ ಗಿಡಗಳ ತೋಟಗಳು ಹಾಳಾದವು; ಕೆಲಪೆಡೆಗಳಲ್ಲಿ ಭೂಮಿ ಅದರಿ ಬಿರಿದು ನೀರು ಮೇಲಕ್ಕೆ ಉಕ್ಕಿ ಬಂತು. ಹೊಯಿಗೆಯೂ ಕೆಸರೂ ನೆಲದೊಳಗಿಂದ ಹೊರಗೆ ಬಂದು ಬೀರಿತು. ಸಾಧಾರಣವಾಗಿ ಭೂಕಂಪವು ಕೆಲವು ಸೆಕುಂದಗಳು ಮಾತ್ರವೇ ಆಗುವದು. ಈ ಕಂಪವು ಐದು ಮಿನಿಟುಗಳು ಸ್ಪರ್ಶವಾಗಿ ಮನುಷ್ಯರು ನೆಟ್ಟಗೆ ನಿಲ್ಲಲಾರದವರಾದರು; ಹಲವರು ವಾಂತಿ ಮಾಡಿದರು. ಕಂಪವಾದ ಎರಡು ಮೂರು ದಿನಗಳೊಳಗೆ ಧಾರಾಳ ಮಳೆಯೂ ಸುರಿಯುವದಾದ್ದರಿಂದ ಮನೆಮಾರು ಕಳಕೊಂಡು ನಿರಾಶ್ರಿತ ಜನರು ಅವಸ್ಥೆ ಪಟ್ಟದ್ದು ವರ್ಣಿಸಲು ವಶವಲ್ಲಾ. ಭೂಕಂಪದ ಹಾವಳಿಯಿಂದ ಎಷ್ಟು ಮಂದಿ ಸತ್ತಿರಬಹುದೆಂಬುವದು ಇನ್ನೂ ಕಟ್ಟುನಿಟ್ಟಾಗಿ ತಿಳಿಯಲಿಲ್ಲಾ. ಭೂಕಂಪವಾಗುವದಕ್ಕೆ ಎರಡು ಮೂರು ತಿಂಗಳು ಮೊದಲು ಬಂಗಾಳದ ಜಿಸ್ಸೋರ ಜಿಲ್ಲೆಯಲ್ಲಿ ಪ್ರಚಂಡವಾದ ಗಾಳಿ ಬೀಸಿ ಒಂದು ಗ್ರಾಮವನ್ನು ಪೂರಾ ಹಾಳು ಮಾಡಿ ಇನ್ನೊಂದು ಗ್ರಾಮದಲ್ಲಿ ಒಬ್ಬ ಮನುಷ್ಯನನ್ನು ಮೇಲೆತ್ತಿ ಮರದ ಕೊಂಬೆಗಳಲ್ಲಿ ಸಿಕ್ಕಿಸಿ ಕೆಲವರನ್ನು ನೆಲಕ್ಕೆ ಅಪ್ಪಳಿಸಿತು; ಅದೇ ಸಮಯದಲ್ಲಿ ಕಲ್ಮಳೆಯೂ ಆದದರಿಂದ ಅನೇಕರಿಗೆ ಗಾಯಗಳಾದವು.

ಮೇಲೆ ಹೇಳಿದ ಭೂಕಂಪದ ಹಾವಳಿಯಾಗಿ ಬಹಳ ದಿನ ಹೋಗಲಿಲ್ಲಾ, ಅಷ್ಟರಲ್ಲಿ ಕಲ್ಕತದ ಪಟ್ಟಣದಲ್ಲಿ ಭಾರಿ ದೊಂಬಿ ಕಲಹವಾಯಿತು. ಒಬ್ಬ ಧನಿಕನಾದ ಹಿಂದು ಜವಿಾನದಾರನ ಸ್ಥಳದಲ್ಲಿದ್ದದ್ದೊಂದು ಸಣ್ಣ ಮಶೀದಿಯ ವಿಷಯದಲ್ಲಿ ಆ ಜವಿಾನದಾರನಿಗೂ ಮುಸಲ್ಮಾನರಿಗೂ ವ್ಯಾಜ್ಯವಿದ್ದದ್ದು ಜವಿಾನದಾರನಿಗೆ ಗುಣಕರವಾಗಿ ತೀರ್ಪಾಯಿತು. ಆ ಮಶೀದಿಯ ಜಾಗವನ್ನು ಧನಿಗೆ ಬಿಡಿಸಿ ಕೊಡುವ ದಿನದಲ್ಲಿ ಮುಸಲ್ಮಾನರು ಸಮೂಹವಾಗಿ ಕೂಡಿ ಅಟಕಾವು ಮಾಡುವವರಾದ್ದರಿಂದ ಪೊಲೀಸಿನವರು ಬಂದು ಜನರನ್ನು ಚದರಿಸಿದರೂ ಮರುದಿನವೂ ಮುಸಲ್ಮಾನರು

ಹೆಚ್ಚು ಸಮೂಹವಾಗಿ ಅಲ್ಲಿ ನೆರೆದು ಆ ಮಾರ್ಗವಾಗಿ ಬರುವ ಯುರೋಪೀಯರನ್ನು ಹೊಡೆಯುವದೂ ಗಾಡಿಯಿಂದ ಎಳೆಯುವದೂ ಮುಂತಾದ ಉಪಟಳ ಮಾಡಲಿಕ್ಕೆ ಹತ್ತಿದ್ದರಿಂದ ಪೊಲೀಸ ಬಲವು ಸಾಲದ್ದಕ್ಕೆ ಸರಕಾರದವರು ರಾಹುತರನ್ನೂ ಸಾಯಿದಳವನ್ನೂ ಕಳೆಸಿ ಅಷ್ಟರಲ್ಲಿ ಪಟ್ಟಣದ ಮೂರು ಭಾಗಗಳಲ್ಲಿ ಹಬ್ಬಿ ಹೋದ ದಂಗೆಯನ್ನು ಅಣಗಿಸಿದರು. ಕಡೆಗೆ ಆ ಹಿಂದು ಧನಿಯು ವಿವಾದದ ಜಾಗವನ್ನು ಕ್ರಯಕ್ಕೆ ಕೊಡುತ್ತೇನೆಂದು ಹೇಳಿದ್ದರಿಂದ ಮುಸಲ್ಮಾನರು ಅದನ್ನು ಕೊಂಡುಕೊಳ್ಳುವದಕ್ಕೆ ಒಪ್ಪಿದರು. ಈ ದಂಗೆಯಲ್ಲಿ ಸುಮಾರು ೩೦೦ ಜನರು ಗಾಸಿಯಾಗಿ ಹೋದದ್ದಲ್ಲದೆ ಪಟ್ಟಣದಲ್ಲಿ ಸ್ವಸ್ಥತೆಯಿಲ್ಲದೆ ಇತರ ಮತಸ್ಥರು ವ್ಯರ್ಥವಾದ ಭಯಕ್ಕೆ ಗುರಿಯಾದರು. ಅಫಘಾನಿಸ್ಥಾನದ ಅಮೀರರು ಕಲ್ಕತದಲ್ಲಿ ಸಂಭವಿಸಿದ ದೊಂಬಿ ಕಲಹದ ಸುದ್ದಿಯನ್ನು ಕೇಳಿ ತಮ್ಮಿಂದ ಆಗತಕ್ಕ ಸಹಾಯವನ್ನು ಮಾಡುವರೆ ಸಿದ್ದವಿದ್ದೇವೆಂದು ವೈಸರಾಯ ದೊರೆಗಳವರಿಗೆ ತಿಳಿಸಿದರು. ಕಲ್ಕತದಲ್ಲಿ ಇನ್ನೊಂದು ಆಶ್ಚರ್ಯವು ತೋರಿಸಿಕೊಂಡಿತು. ಒಂದು ದಿನ ಸಂಜೆ ವೇಳೆಯಲ್ಲಿ ಅಸ್ತಮಾನಕ್ಕೆ ತಾಸು ಹೊತ್ತು ಇರುವಾಗ ಸೂರ್ಯಮಂಡಲದ ಸುತ್ತಲೂ ಅಚ್ಚ ಕರಿಯ ಒಂದು ವಸ್ತು ಗರಗರನೆ ತಿರುಗುವದನ್ನು ಸರ್ವರೂ ಬರೇ ಕಣ್ಣಿನಿಂದಲೂ ಕಂಡರು. ಇದೇನಾಗಿದ್ದೀತೆಂದು ತಿಳಿದುಬರಲಿಲ್ಲಾ. ಇದಲ್ಲದೆ ಮತ್ತೊಂದು ದಿನದಲ್ಲಿ ತೇದ ಗಂಧದ ಹುಡಿ ಎಲ್ಲಾ ಮರಗಿಡಗಳ ಎಲೆಗಳ ಮೇಲೆ ಬಿದ್ದಿತ್ತು. ಅದನ್ನು ಬೆರಳಿನಿಂದ ಮುಟ್ಟಿ ಮೂಸಿದರೆ ಗಂಧದ ಪರಿಮಳವೇ ಬರುತ್ತಿತ್ತು. ಸಾಮಾನ್ಯ ಜನರೆಲ್ಲಾ ಇದನ್ನು ಕಂಡು ಚಕ್ರವರ್ತಿನಿಯವರ ಶುಭ ಆಳಿಕೆಗೆ ದೇವರ್ಕಳು ಮೆಚ್ಚಿ ಸುರಿಸಿದ ಗಂಧದ ಮಳೆ ಎಂದು ಹೇಳಿದರು. ಸಿಯಮ ದೇಶದ ಅರಸರು ಮಹಾರಾಣಿ ಚಕ್ರವರ್ತಿನಿಯವರ ಜುಬಲಿ ಉತ್ಸವಕ್ಕೆ ಇಂಗ್ಲಾಂಡಿಗೆ ಹೋದವರು ಅಲ್ಲಿಂದ ರುಸ್ಯ ಜರ್ಮನಿ ಮೊದಲಾದ ರಾಜ್ಯಗಳಿಗೆ ಪಯಣ ಬೆಳಸಿ ಎಲ್ಲರಿಂದ ಸಾಭಿಮಾನದೊಡನೆ ಸ್ವಾಗತ ಮಾಡಿಸಿಕೊಂಡರು. ಸಿಯಮ ಅರಸರಿಗೆ ಮುನ್ನೂರು ಹೆಂಡರೂ ಎಂಭತ್ತೇಳು ಮಕ್ಕಳೂ ಇದ್ದಾರೆ. ಇಷ್ಟು ಹೆಂಡರನ್ನೂ ಮಕ್ಕಳನ್ನೂ ಅವರು ಬಹಳ ಅಕ್ಕರೆ ಮಾಡುತ್ತಾರೆ.

ಇದಲ್ಲದೆ ಬಂಗಾಳದ ಕೆಲವು ಊರುಗಳಲ್ಲಿ ಗೋಮಾರಿಯೂ ತಲೆದೋರಿಸಿಕೊಂಡು ಹೇರಳ ಪಶುಗಳನ್ನು ಆಹುತಿ ಮಾಡಿತು. ಸರಕಾರದವರು ಹೆಚ್ಚು ಬಂದೋಬಸ್ತು ಇಟ್ಟದ್ದರಿಂದ ಮಾರಿರೋಗವು ಇತರ ದೇಶಗಳಲ್ಲಿ ಹಬ್ಬಲಿಲ್ಲಾ. ಅಫ್ರಿಕದ ದಕ್ಷಿಣ ಭಾಗದಲ್ಲಿ ಗೋಮಾರಿಯು ಪ್ರಬಲಿಸಿಕೊಂಡು ವಿಶಾಲವಾದ ಪ್ರದೇಶಗಳಲ್ಲಿ ಗೋಕಾಯಿಗಳು ನಿರ್ನಾಮವಾಗುವಂತೆ ಮಾಡಿ ಅಲ್ಲಿ ಜನರ ಮುಖ್ಯ ಆಹಾರವಾಗಿರುವ ಹಯನಿಗೆ ತತ್ವಾರವಾಗಿತ್ತು. ಹಿಂದು ಸಾಮ್ರಾಜ್ಯದ ವಾಯವ್ಯ ಸರಹದ್ದಿನಲ್ಲಿರುವ ವಜೀರಿಸ್ತಾನದಲ್ಲಿ ವಜೀರಿಗಳೆಂಬ ಮುಸಲ್ಮಾನ ಮತಸ್ಥರಿದ್ದಾರೆ. ಇತ್ತಲಾಗೆ ಪೊಲಿಟಿಕಲ್ ಏಜಂಟರಾಗಿರುವ ಇಂಗ್ಲಿಷ ಸರದಾರರೊಬ್ಬರು ಸರಕಾರಿ ಜಂಬರದ ಮೇಲೆ ಬೆಂಬಲಕ್ಕೆ ಸಿಪಾಯರನ್ನು ತಕ್ಕೊಂಡು ಅಲ್ಲಿಗೆ ಹೋಗುವಾಗ ಆ ವಜೀರಿಗಳು ಸರದಾರರಿಗೂ ಸಿಪಾಯರಿಗೂ ಊಟದ ಸೋಪಸ್ಕರಗಳನ್ನು ಕೊಡಿಸಿ ಅವರೆಲ್ಲರೂ ನಿರ್ಭಯವಾಗಿ ಉಣ್ಣುವ ವೇಳೆಯಲ್ಲಿ ಏಕಾಏಕಿ ವಜೀರಿಗಳು ಸೈನ್ಯದ

ಆಫೀಸರರ ಮೇಲೆ ಕೋವಿ ಹೊಡೆದರು. ಕೂಡಲೇ ಮೂವರು ಆಫೀಸರರು ಬಿದ್ದು ಸೈನಿಕರು ಸನ್ನದ್ಧರಾಗುವಷ್ಟರಲ್ಲಿ ವಜೀರಿಗಳ ತಂಡವು ಅವರನ್ನು ಮುತ್ತಿಕೊಂಡಿತು. ಬೇರೆ ಉಪಾಯವಿಲ್ಲದ್ದರಿಂದ ಸಿಪಾಯರು ಬಂದ ದಾರಿಯಲ್ಲೇ ವಾಪಸು ಕೂಚು ಮಾಡಲು ಸಾವಿರ ವಜೀರಿಗಳು ಅವರನ್ನು ಅಟ್ಟಿ ಕೆಲವರನ್ನು ಕೊಂದರು. ಈ ವರ್ತಮಾನವು ಕೆಲವು ಮೈಲು ದೂರವಿರುವ ಇಂಗ್ಲಿಷ ಠಾಣ್ಯಕ್ಕೆ ಮುಟ್ಟಲು ಅಲ್ಲಿಂದ ಇವರ ಒತ್ತಾಸೆಗೆ ಸೈನ್ಯಾಂಶವು ಹೊರಟಿತು. ಅವರನ್ನು ಕಂಡ ಕೂಡಲೇ ವಜೀರಿಗಳು ಹಿನ್ಮೆಟ್ಟಿದರು. ಅವರನ್ನು ದಂಡಿಸುವದಕ್ಕೋಸ್ಕರ ಸರಕಾರದವರು ಭಾರಿ ಪವುಜು ರವಾಣಿಸಿದ್ದಾರೆ. ಕೆಲವು ವರ್ಷಗಳ ಕೆಳಗೆ ಈ ವಜೀರಿಗಳೇ ಇದೇ ಪ್ರಕಾರದಲ್ಲಿ ವಿಶ್ವಾಸಘಾತಕಕೃತ್ಯ ಮಾಡಿದ್ದರು; ಆವಾಗಲೂ ಅವರಿಗೆ ಶಿಕ್ಷೆ ಮಾಡಲಾಯಿತು. ಮೂರ್ಖರು ಮೊದಲು ಬಿದ್ದ ಪೆಟ್ಟು ಮರೆಯುವದು ಸ್ವಾಭಾವಿಕವಷ್ಟೇ.

ಅಫಘಾನಿಸ್ತಾನದ ವಿಶಾಲ ಸೀಮೆಯು ನಿರ್ಜನ ಪ್ರದೇಶವಾಗಿರುವದರಿಂದ ಅಮೀರರು ಅಲ್ಲಿ ಜನವಸ್ತಿ ಮಾಡಿಸಿ ದೇಶದ ಸಮೃದ್ಧಿಯನ್ನೂ ಪ್ರಜೆಗಳ ಸಂಖ್ಯೆಯನ್ನೂ ಹೆಚ್ಚಿಸಬೇಕೆಂದು ಕೋರಿ ತಮ್ಮ ಸೀಮೆಯ ಕಾಡುಗುಡ್ಡಗಳಲ್ಲಿ ಇರುವವರೆಲ್ಲಾ ಅಂಥಾ ಸೀಮೆಗೆ ಬಂದು ಒಕ್ಕಲುತನ ಮಾಡಬೇಕೆಂದೂ ಅವರ ಜೀವನೋಪಾಯದ ಬಗ್ಯೆ ಬೇಕಾದ ಸಹಾಯ ಮಾಡುತ್ತೇವೆಂದೂ ಹುಕುಮು ಮಾಡಿದ್ದಾರೆ; ಹಾಗೆಯೇ ಬಹು ಜನರು ಅವರ ಮಾತಿನಂತೆ ಅಫಘಾನಕ್ಕೆ ವಸ್ತಿಯ ಬಗ್ಯೆ ಹೋಗುತ್ತಾರೆ. ಅಫಘಾನಿಸ್ತಾನದ ಕೆಲವು ಸೀಮೆಗಳಲ್ಲಿ ಮಿಡಿತೆಗಳು ತಂಡೋಪತಂಡಗಳಾಗಿ ಬಂದು ಪಚ್ಚೆ ಪೈರೆಲ್ಲಾ ಹಾವಳಿ ಮಾಡುತ್ತಾವೆ.

ಅಫ್ರಿಕ ಭೂಖಂಡದ ದಕ್ಷಿಣ ಪ್ರದೇಶದಲ್ಲಿ ಬ್ರಿಟಿಷ ಸಾಮ್ರಾಜ್ಯಕ್ಕೆ ಒಳಿತವಾದ ಸೀಮೆಯಲ್ಲಿ ಮತಬೆಲೆ ಎನ್ನುವ ಹಬಶಿ ಪಣದವರು ಅರಸ್ಥಾನದ ಮೇಲೆ ಮಾರ್ಮಲೆತು ಆಯುಧಪಾಣಿಗಳಾಗಿ ಯುದ್ಧ ಮಾಡಿದರು. ಈ ಮಾರ್ಮಲೆತವರನ್ನು ತಗ್ಗಿಸಿ ಸೀಮೆಯಲ್ಲಿ ಸ್ವಸ್ಥತೆಯನ್ನು ನೆಲೆಗೊಳ್ಳಿಸುವದು ತಕ್ಕಷ್ಟು ಪ್ರಯಾಸವಾಯಿತು. ಈಗ ಆ ಹಬಸಿಗಳೆಲ್ಲಾ ತಂತಮ್ಮ ಬೇಸಾಯ ಪಶುಪಾಲ್ಯ ಮೊದಲಾದ ಬದುಕು ಮಾಡಿಕೊಂಡು ಶಾಂತವಾಗಿದ್ದಾರೆ. ಅಫ್ರಿಕ ಖಂಡದ ಪೂರ್ವ ಕರಾವಳಿಯಲ್ಲಿರುವ ಜಂಜಿಬಾರ ದ್ವೀಪದ ಸುಲ್ತಾನರು ಮರಣ ಪಟ್ಟಲ್ಲಿ ಸಯ್ಯದ ಖಲಿದನೆಂಬವನೊಬ್ಬನು ಪಟ್ಟವನ್ನು ಆಕ್ರಮಿಸುವನಾದ್ದರಿಂದ ಬ್ರಿಟಿಷ ಸರಕಾರದವರು ಅವನನ್ನು ವಿರೋಧಿಸಿ ಅವನು ಒಳ್ಳೇ ಮಾತಿನಿಂದ ತನ್ನ ಹಕ್ಕನ್ನು ಬಿಡಲೊಲ್ಲದ್ದರಿಂದ ಅರಮಮನೆಗೆ ಗುಂಡು ಹಾರಿಸಿದರು; ಅವನು ಪಲಾಯನ ಮಾಡಿದ ಮೇಲೆ ಮೊದಲಿನ ಸುಲ್ತಾನನ ಸಂಬಂಧಿಕನನ್ನು ಪಟ್ಟದಲ್ಲಿ ಕುಳ್ಳಿರಿಸಿದರು. ಈಜಿಪ್ತ ಯಾನೆ ಮಿಸರ್ ದೇಶದ ದಕ್ಷಿಣ ಪ್ರದೇಶವಾದ ದೊಂಗೊಲ ಸೀಮೆಯನ್ನು ಪುನಹಾ ಮಿಸರಿ ಅರಸನಾದ ಖೇದಿವರಿಗೆ ಸ್ವಾಧೀನ ಪಡಿಸುವದಕ್ಕೆ ಬ್ರಿಟಿಷ ಅರ್ಥಸ್ಥಾನದವರು ದರವೇಶರೊಡನೆ ಯುದ್ಧ ನಡಿಸಿದ್ದರಲ್ಲಿ ದರವೇಶರು ಪೂರಾ ಸೋತರು; ಯುದ್ಧಕ್ಕಾಗಿ ಹಿಂದುಸ್ಥಾನದಿಂದ ಅಲ್ಲಿಗೆ ಹೋಗಿದ್ದ ಸೈನ್ಯ ವಾಪಸು ಬಂತು. ಆದರೆ ಪುನಹಾ ದರವೇಶರು ಮೊತ್ತವಾಗಿ ಕೂಡಿ ಮಿಸರಿ ಸೈನ್ಯವನ್ನು ಸೌದಾನಿನಿಂದ ಹೊರಗೆ ಮಾಡುವ ಪ್ರಯತ್ನದಲ್ಲಿದ್ದಾರೆಂದು ವರ್ತಮಾನವದೆ. ಇತಲಿಯವರು ಸೌದಾನಿಗೆ ನೆರೆಯಲ್ಲಿರುವ ಪ್ರ

ದೇಶವನ್ನು ಸ್ವಾಧೀನ ಪಡಿಸಿಕೊಂಡು ಅದಕ್ಕೆ ಎರುಧ್ರಿಯ ಎಂದು ಹೆಸರಿಟ್ಟು ಅದನ್ನು ಅಫ್ರಿಕ ಖಂಡದಲ್ಲಿ ತಮ್ಮ ವಸಾಹತ ಸೀಮೆಯಾಗಿ ಮಾಡುವದಕ್ಕೆ ಎಷ್ಟು ಪ್ರಯತ್ನ ಮಾಡಿದರೂ ಅಬಿಸಿನ್ಯ ಅರಸನ ಪರಾಕ್ರಮಕ್ಕೆ ಹಿಮ್ಮೆಟ್ಟ ಬೇಕಾಯಿತೆಂದು ಕಳದ ಪಂಚಾಂಗದಲ್ಲಿ ಪ್ರಸ್ತಾಪಿಸಿದೆವು. ಈ ಅರಸನ ಬಳಿಗೆ ಇತ್ತಲಾಗೆ ಬ್ರಿಟಿಷ ಸರಕಾರದವರು ರಾಯಭಾರಿಗಳನ್ನು ಕಳುಹಿಸಲಾಗಿ ಅರಸನು ಅವರನ್ನು ಬಹುಮಾನ ಪುರಸ್ಸರವಾಗಿ ಬರಮಾಡಿಕೊಂಡು ಉಪಚರಿಸಿ ರಾಜತೀವಿಗೆ ಯೋಗ್ಯವಾದ ಉಡಿಗಿರೆ ಉಚಿತಗಳನ್ನು ಕೊಟ್ಟು ಕಳುಹಿಸಿದ್ದಾನೆ. ಮದಗಸ್ಕರ ದ್ವೀಪವನ್ನು ಫ್ರೆಂಚರು ಒಳಪಡಿಸಿಕೊಂಡ ಮೇಲೆ ರಾಜ್ಯವ್ಯವಸ್ಥೆ ಮಾಡುವದಕ್ಕೆ ಆರಂಭದಲ್ಲಿ ಬಹಳ ತೊಂದರೆಗಳಾಗಿ ಅಲ್ಲಲ್ಲಿ ಪುಂಡರ ಕಾಟ ಹೆಚ್ಚಾದವು. ಫ್ರೆಂಚರು ಮೊದಲಿನ ರಾಣಿಯನ್ನು ಊರಿನಿಂದ ಮತ್ತೊಂದು ದ್ವೀಪಕ್ಕೆ ಗಡಿಪಾರು ಮಾಡಿದರು, ಮದಗಸ್ಕರಿನಲ್ಲಿ ಅರ್ವತ್ತು ವರ್ಷಗಳಿಂದ ಪ್ರೊತಸ್ತಂತ ಮಿಶನೆರಿಗಳು ದೇವರ ರಕ್ಷಣೆಯ ಮಾರ್ಗವನ್ನು ಉಪದೇಶಿಸಿ ದೇಶದ ನಿವಾಸಿಗಳನ್ನು ಸಾವಿರ ಸಾವಿರಗಳಾಗಿ ಕ್ರೈಸ್ತರನ್ನು ಮಾಡಿದ್ದಾರೆ; ಅದರೊಂದಿಗೆ ವಿದ್ಯೆಯನ್ನೂ ಯುರೋಪೀಯ ನಾನಾ ಕೈಗಾರಿಕೆಗಳನ್ನೂ ಜನರಿಗೆ ಬೋಧಿಸಿ ಅವರನ್ನು ಸುಕೃತರನ್ನಾಗಿ ಮಾಡಿದ್ದಾರೆ. ಫ್ರೆಂಚ ಆಳಿಕೆಯು ಅಲ್ಲಿ ಪ್ರಾರಂಭವಾದ ಮೇಲೆ ಪ್ರೊತಸ್ತಂತ ಕ್ರೈಸ್ತರು ಹಿಂಸೆ ಪಡಬೇಕಾಗಿ ಬಂತಾದರೂ ಫ್ರೆಂಚರು ಮತಸ್ವಾತಂತ್ರ್ಯವನ್ನು ಕೊಟ್ಟವರಾದದರಿಂದ ಕ್ರೈಸ್ತರು ಸಮಾಧಾನವಾಗಿ ಇರುವದಕ್ಕೆ ಅನುಕೂಲವಾಯಿತು. ಫ್ರೆಂಚರು ಮದಗಸ್ಕರಿನ ಮೊದಲಿನ ರಾಣಿಯಿಂದ ರಾಜ್ಯಾಧಿಕಾರವನ್ನು ತೆಗದದ್ದಲ್ಲದೆ ಅವಳು ಊರಲ್ಲಿದ್ದರೆ ದಂಗೆಯೂ ಬಂಡಾಯವೂ ಆಗುವದೆಂದು ಭಾವಿಸಿ ಅವಳನ್ನು ಅಲ್ಲಿಂದ ದೂರವಾದ ದ್ವೀಪಕ್ಕೆ ಗಡಿಪಾರು ಮಾಡಿದರು.

ಇಂಗ್ಲಾಂಡು. ಮಹಾರಾಣಿ ಚಕ್ರವರ್ತಿನಿಯವರು ಪಟ್ಟಾಭಿಷಿಕ್ತರಾಗಿ ಅರುವತ್ತು ವರ್ಷಗಳು ಸಂಪೂರ್ಣಿಸಿದ್ದು ಇದೇ ಕಳದ ವರ್ಷದಲ್ಲಿ ಮುಖ್ಯವಾದ ಸಂಗತಿ. ೧೮೮೭ನೇ ವರ್ಷದಲ್ಲಿ ಅವರ ರಾಜ್ಯಭಾರದ ಐವತ್ತನೇ ವರ್ಷದ ವಡ್ಡಂತಿಯು ಜುಬಿಲಿ ಉತ್ಸವವೆಂಬದಾಗಿ ಬ್ರಿಟಿಷ ರಾಜ್ಯದಲ್ಲೆಲ್ಲಾ ಮಹಾ ವಿಜೃಂಭಣೆಯೊಡನೆ ಆಚರಿಸುವಣವಾಗಿತ್ತು. ಈ ಸರ್ತಿ ಅರುವತ್ತನೆ ವರ್ಷದ ವಡ್ಡಂತಿಯಾದ್ದರಿಂದ ಮೊದಲಿಗಿಂತಲೂ ಹೆಚ್ಚು ಉತ್ಸವಾದಿ ಕೋಲಾಹಲವಾಗುವದು ಯೋಗ್ಯವಾಗಿದೆ. ಈ ಸಂದರ್ಭದಲ್ಲಿ ಚಕ್ರವರ್ತಿನಿಯವರನ್ನು ಅಭಿವಂದನೆ ಮಾಡುವದಕ್ಕೆ ಹಿಂದುದೇಶದಿಂದಲೂ ಮಾನ್ಯಮನ್ನೇಯರು ಇಂಗ್ಲಾಂಡಿಗೆ ಪಯಣ ಮಾಡಿದರು. ಅದಲ್ಲದೆ ಕೇಪ್ ಕೊಲೊನಿ ಆಸ್ತ್ರೇಲಿಯ ನ್ಯೂಜೀಲಂಡು ಕಾನದಾ ಮೊದಲಾದ ಬ್ರಿಟಿಷ ವಸಾಹತ ರಾಜ್ಯಗಳ ದೊರೆಗಳೂ ಶಿರ: ಪ್ರಧಾನಿಗಳೂ ಲಂಡನಿನಲ್ಲಿ ನೆರೆದು ಬಂದರು. ಹಿಂದು ಸ್ಥಾನದಿಂದಲೂ ಕೆಲ ಸೈನಿಕರನ್ನೂ ವಸಾಹತ ಸೀಮೆಗಳಿಂದ ಸೈನ್ಯಾಂಶಗಳನ್ನೂ ಇಂಗ್ಲಾಂಡಿಗೆ ಬರ ಮಾಡಿದ್ದರು. ಚಕ್ರವರ್ತಿನಿಯವರ ಪಟ್ಟಾಭಿಷೇಕದ ವಡ್ಡಂತಿ ದಿನದಲ್ಲಿ ಮಹಾ ದೇವಾಲಯದಲ್ಲಿ ಚಕ್ರವರ್ತಿನಿಯವರೂ ರಾಜಮಂತಾನದವರೂ ಸಮಾಗಮವಾದಾಗ ವಿಶೇಷ ಪ್ರಾರ್ಥನೆ ಮಾಡೋಣಾದ ಮೇಲೆ ಭಾರಿ ಸೈನ್ಯದ ಕವಾತೂ ಸಮುದ್ರದಲ್ಲಿ ಹಡಗಗಳ ಕವಾತೂ ಬಹು ಸುಂದರವಾಗಿ ನಡಿಯಿತು. ದೂರದೂರ ದೇಶಗಳಿಂದ ಬಂದ ಮಹಾನುಭಾವರಿಗೆಲ್ಲಾ ಆರೋಗಣೆ ಮಾಡಿಸಲಾ

ಯಿತು. ಹಲವರಿಗೆ ಚಕ್ರವರ್ತಿನಿಯವರು ಬಿರುದುಗಳನ್ನು ಪಾಲಿಸಿದರು. ಜುಬಿಲಿ ಉತ್ಸವಕ್ಕಾಗಿ ಲಂಡನ್ ಪಟ್ಟಣವನ್ನು ಬಹಳ ಅಂದಚಂದವಾಗಿ ಅಲಂಕರಿಸಿದ್ದರು. ಚಕ್ರವರ್ತಿನಿಯವರು ರಥದಲ್ಲಿ ಸವಾರಿಯಾಗಿ ಹೋಗುವಾಗ್ಯೆ ಅವರನ್ನು ಕಣ್ಣು ತುಂಬ ನೋಡುವದಕ್ಕೆ ಮಾರ್ಗದ ಉಭಯ ಪಾರ್ಶ್ವದಲ್ಲಿ ಅಸಂಖ್ಯಾತ ಜನಸಮುದಾಯವು ನೆರೆದಿತ್ತು.

ಲಂಡನ ಪಟ್ಟಣದಲ್ಲಿ ಥೇಮ್ಸ ನದಿಯನ್ನು ದಾಟಿ ಅತ್ತಿತ್ತ ಹೋಗುವದೂ ಬರುವದೂ ಸ್ವಲ್ಪ ತೊಂದರೆಯಾದದರಿಂದ ಬಹಳ ವರ್ಷಗಳ ಕೆಳಗೆ ನದಿಯ ಅಡಿಯಿಂದ ಮೇಲಿನ ನೀರು ಮೇಲೆ ಇದ್ದಂತೆ ಭಾರಿ ಸುರಂಗವನ್ನು ಮಾಡಿಸಿದ್ದರು. ಪಟ್ಟಣದ ಇನ್ನೊಂದು ಕೊನೆಯಲ್ಲಿ ವಾಸಸ್ಥರಾಗಿದ್ದವರ ಸೌಕರ್ಯಕ್ಕಾಗಿ ಇನ್ನೊಂದು ಸುರಂಗ ತೋಡಿಸ ಬೇಕೆಂದು ದೊಡ್ಡ ಮನುಷ್ಯರು ಆಲೋಚಿಸಿ ಸರಕಾರಿ ಹುಕುಮು ಪಡೆಕೊಂಡು ಐದು ವರ್ಷಗಳ ಹಿಂದೆ ಕೆಲಸ ಪ್ರಾರಂಭಿಸಿದರು. ಆ ಸುರಂಗವು ಒಂದು ಕಾಲು ಮೈಲು ಉದ್ದವಾಗಿದೆ. ಈ ಉದ್ದದ ಐದನೆ ಒಂದಂಶವು ನೆಟ್ಟಗೆ ನದಿಯ ಕೆಳಗಿರುವಂಥಾದ್ದು; ಆದರೂ ಉಭಯ ಪಾರ್ಶ್ವಗಳಲ್ಲಿ ಕ್ರಮವಾಗಿ ಇಳಿಸುತ್ತಾ ಏರಿಸುತ್ತಾ ಬರಬೇಕಾದ್ದರಿಂದ ಅಷ್ಟು ಉದ್ದವಿಟ್ಟಿದ್ದಾರೆ. ಈ ಕೆಲಸವು ಮುಗಿದು ಇದೇ ಕಳದ ಮೇ ತಿಂಗಳಲ್ಲಿ ಪ್ರಿನ್ಸ ಆಫ್ ವೇಲ್ಸ ಯುವರಾಜರು ಆ ಸುರಂಗವನ್ನು ರೈತರ ಪ್ರಯೋಜನಾರ್ಥವಾಗಿ ಪ್ರತಿಷ್ಠೆ ಮಾಡಿದರು. ಐರ್ಲಾಂಡಿನಲ್ಲಿ ಮಹಾ ಉತ್ಪಾತವು ಸಂಭವಿಸಿತು; ಸಮುದ್ರದ ಮೇಲ್ಭಾಗದಿಂದ ೧೨೦೦ ಅಡಿ ಎತ್ತರವಾದ ಪ್ರಸ್ಥಭೂಮಿಯಿಂದ ಇನ್ನೂರು ಯಕ್ಕರೆಯಷ್ಟು ವಿಶಾಲವಾದ ಭಾಗವು ತನ್ನಾರೆ ಜಾರಿ ಕೆಳಗಿಳಿಯುತ್ತಾ ಅರ್ಧ ನೀರು ಅರ್ಧ ಕೆಸರು ಬೆರತ ಪ್ರವಾಹವಾಗಿ ಹರಿದು ಎದುರಾದ ಮನೆಮಾರು ಮುಂತಾಗಿ ಯಾವತ್ತೂ ಬಡುಕೊಂಡು ಕೆಲವು ಮೈಲು ಮುಂದರಿಸಿ ಹೊಳೆಯನ್ನು ಕೂಡಿತು. ಗುಡ್ಡದಲ್ಲಿ ಆಳವಾದ ಬಿರುಕುಗಳೂ ಕುಣಿಗಳೂ ಆದವು. ನೆಲವು ಜಾರಿ ಬರುವದಕ್ಕೆ ಕಾರಣವೇನೋ ತಿಳಿಯಲಿಲ್ಲಾ.

ಫ್ರಾನ್ಸು. ಪರಿಸ ಪಟ್ಟಣದಲ್ಲಿ ಒಂದು ದೊಡ್ಡ ಹಸರದಲ್ಲಿ ಕುಲೀನರೂ ಶ್ರೀಮಂತರೂ ನೆರೆದು ಅರ್ತಿಯಿಂದ ವ್ಯಾಪಾರಶಾಪಾರ ಮಾಡುತ್ತಿರುವಾಗ ಉದ್ದವಾಗಿ ಕಟ್ಟಿದ ಮರದ ಕಟ್ಟಡಕ್ಕೆ ಏಕಾಏಕಿ ಬೆಂಕಿ ಹತ್ತಿಕೊಂಡಲ್ಲಿ, ಜನರು ಹೊರಗೆ ಹೋಗುವದಕ್ಕೆ ಇಟ್ಟಿದ್ದ ಒಂದೇ ಬಾಗಲಲ್ಲಿ ಸಂದಣಿಯಾಗಿ ಬಹು ಜನರು ಅಗ್ನಿಗೆ ಬೆಳುವೆಯಾದರು. ಹನ್ನೆರಡು ಮಿನಿಟಿನೊಳಗೆ ಕಟ್ಟಡವೆಲ್ಲಾ ಸುಟ್ಟು ಭಸ್ಮವಾಯಿತು. ಮೃತರಾದವರೊಳಗೆ ದೊಡ್ಡ ದೊಡ್ಡ ಮನುಷ್ಯರಿದ್ದರು. ಕಿರೀಟಪತಿಗಳಾಗಿರುವವರಿಗೆ ದುಸ್ಥಾನರ ದೆಸೆಯಿಂದ ಯಾವಾಗಲೂ ಪ್ರಾಣಭಯ ಇದ್ದೇ ಇರುತ್ತದೆ. ಇತಲಿದೇಶದ ಅರಸರು ರಥದಲ್ಲಿ ಕೂತು ಸವಾರಿಯಾಗಿ ಹೋಗುವಾಗ್ಯೆ ಒಬ್ಬಾನೊಬ್ಬ ಕೇಡಾಳಿಯು ಅವರನ್ನು ಆಯುಧದಿಂದ ತಿವಿಯಲಿಕ್ಕೆ ಹೋದನು. ಆದರೆ ಅವರಿಗೆ ಏಟು ತಗಲಲಿಲ್ಲಾ. ರಾಜಕಂಟಕಿಯನ್ನು ಕೂಡಲೇ ಹಿಡಿದರು. ರುಸ್ಯ ಸಾಮ್ರಾಜ್ಯದಲ್ಲಂತೂ ರಾಜಕಂಕಟಕರಾದ ನಿಹಿಲಿಷ್ಟರನ್ನು ನಿರ್ಮೂಲ ಮಾಡುವದಕ್ಕೆ ಅರಸ್ಥಾನದವರು ಎಷ್ಟೆಷ್ಟೋ ಪ್ರಯತ್ನ ಮಾಡಿದರೂ ಮತ್ತೂ ಮತ್ತೂ ಅವರ ಗುಪ್ತವಾದ ಕೆಟ್ಟ ಸಾಹಸಗಳು ಹೊರಪಡುತ್ತವೆ. ಇತ್ತಲಾಗೆ ಪೊಲೀಸಿನವರು ರಾಜದ್ರಾ

ನಿಯಲ್ಲಿ ಅವರು ಕೂಡುವಳಿಯಾಗುವ ಮನೆಯನ್ನು ಪತ್ತೆ ಮಾಡಿ ಅವರ ಛಾಪೆ ಯಂತ್ರವನ್ನೂ ದ್ರೋಹಕರವಾದ ವಹಿಗಳನ್ನೂ ಹಿಡಿದರು. ರುಸ್ಯ ಅರಸ್ಥಾನದವರು ತಮ್ಮ ಸಾಮ್ರಾಜ್ಯದಿಂದ ಚೀನಿ ಸರಹದ್ದಿನ ವರೆಗೆ ಸುಮಾರು ೬೦೦ ಮೈಲು ಉದ್ದವಾದ ರೈಲು ಮಾರ್ಗ ಮಾಡಿಸುತ್ತಾರೆ; ಅದರ ಕೆಲಸವು ಪೂರಯಿಸುವದಕ್ಕೆ ಬಹಳ ವರ್ಷಗಳು ಹೋಗವು; ಅದರ ಒಂದು ಶಾಖೆಯನ್ನು ಅಫಘಾನಿಸ್ಥಾನದ ಸರಹದ್ದಿನ ವರೆಗೆ ತಂದು ಮುಟ್ಟಿಸುವರು. ಈ ಮಾರ್ಗವೆಲ್ಲಾ ಸಿದ್ದವಾದರೆ ಪೂರ್ವದಿಂದ ಪಶ್ಚಿಮಕ್ಕೆ ವ್ಯಾಪಾರಶಾಪಾರವು ಸರಾಗವಾಗಿ ಸಾಗುವದಕ್ಕೂ ಟಪ್ಪಾಲು ಹೋಗುವದಕ್ಕೂ ಬಹಳ ಸದರವಾದೀತೆಂಬುವದರಲ್ಲಿ ಸಂದೇಹವಿಲ್ಲಾ.

ಕ್ರೇತದ್ವೀಪವಾಸಿಗಳಲ್ಲಿ ಮುಸಲ್ಮಾನರೂ ಕ್ರೈಸ್ತರೂ ಇದ್ದಾರೆ; ಕ್ರೈಸ್ತರು ತುರ್ಕಿ ಅಧಿಕಾರಸ್ಥರಿಂದಲೂ ಮುಸಲ್ಮಾನರಿಂದಲೂ ನಾನಾ ಉಪಟಳ ಅನುಭವಿಸುವವರಾದ್ದರಿಂದ ಅವರು ಸರಕಾರದ ಮೇಲೆ ಮಾರ್ಮಲೆತು ಮುಸಲ್ಮಾನರೂ ಕ್ರೈಸ್ತರೂ ಮಾರಾಮಾರಿಗೆ ಪ್ರಾರಂಭಿಸಿದರೆಂದು ಕಳೆದ ಪಂಚಾಂಗದಲ್ಲಿ ಪ್ರಸ್ತಾಪಿಸಿದೆವು. ಯುರೋಪೀಯ ಮಹಾ ಅರಸ್ಥಾನದವರ ಹೇಳಿಕೆಯ ಮೇಲೆ ಸುಲ್ತಾನರು ಕ್ರೇತಕ್ಕೆ ಕ್ರೈಸ್ತ ದೊರೆಯನ್ನು ನೇಮಿಸಿದಾಗ್ಯೂ ಸೈನ್ಯಬಲವು ಮುಸಲ್ಮಾನ ಸೇನಾನಿಯ ವಶದಲ್ಲಿದ್ದದರಿಂದ ಕ್ರೈಸ್ತರಿಗೆ ಬಹಳ ಸಹಾಯವಾಗಲಿಲ್ಲಾ. ಉಭಯ ಪಕ್ಷದವರಲ್ಲಿ ದ್ವೇಷ ಬಲವಾಗುತ್ತಾ ಬಂದು, ಕ್ರೈಸ್ತರಿಗೆ ಒತ್ತಾಸೆ ಮಾಡಬೇಕೆಂದು, ಗ್ರೀಕ ರಾಜ್ಯದವರು ಮೊದಲು ಗುಪ್ತವಾಗಿ ಯುದ್ಧ ಸಾಮಾಗ್ರಿಯನ್ನು ಒದಗಿಸಿ ಕೊಡುತ್ತಾ ಕೊನೆಗೆ ತಮ್ಮ ಸೈನ್ಯವನ್ನು ಅಲ್ಲಿಗೆ ಕಳಿಸಿದರು. ಇದು ತರವಲ್ಲಾ, ನಿಮ್ಮ ಸೈನ್ಯವನ್ನು ಕ್ರೇತದಿಂದ ವಾಪಾಸು ತರಿಸ ಬೇಕೆಂದು ಮಹಾ ಅರಸ್ಥಾನದವರು ಕಟ್ಟುನಿಟ್ಟಾಗಿ ಹೇಳಿದ ಮಾತನ್ನು ಗ್ರೀಕರು ಸರಕು ಮಾಡದೆ ಬಂಡಾಯಗಾರರಿಗೆ ಸಹಾಯ ಮಾಡಿದ್ದಲ್ಲದೆ ತಮ್ಮ ಮತ್ತು ಸುಲ್ತಾನರ ಸೀಮೆಯ ಸರಹದ್ದಿನಲ್ಲಿ ಯುದ್ಧಸನ್ನದ್ಧವಾದ ಸೇನೆಯನ್ನು ನಿಲ್ಲಿಸಿದರು. ಅತ್ತಕಡೆಯಲ್ಲಿ ಸುಲ್ತಾನರು ತಮ್ಮ ಸೈನ್ಯವನ್ನೂ ತರಿಸಿದ್ದಲ್ಲಿ ಉಭಯತರಿಗೂ ಖಾಡಾಖಾಡಿ ಯುದ್ಧ ಹತ್ತಿತು. ಅಲ್ಪ ಸೈನ್ಯ ಬಲವುಳ್ಳ ಗ್ರೀಕರು ಸುಲ್ತಾನರ ಭಾರಿ ಪವುಜಿನೊಡನೆ ಕಾದಿದಾಗ್ಯೂ ನಿಸ್ತಲಾರದೆ ಹೋದರು. ಕಡೆಗೆ ಮಹಾ ಅರಸ್ಥಾನದವರು ನಡುವೆ ಬಂದು ಯುದ್ಧ ನಿಲ್ಲಿಸ ಬೇಕೆಂದು ಹೇಳಿ ಸಂಧಾನದ ಸಲ್ಲಾಪ ಮಾಡುತ್ತಾರೆ. ಅತ್ತಕಡೆಯಲ್ಲಿ ಕ್ರೇತದ್ವೀಪದಲ್ಲಿಯೂ ಬೇಗನೇ ರಾಜ್ಯವನ್ನು ವ್ಯವಸ್ಥೆ ಪಡಿಸುವರು.

ಸ್ಪೇನ ಸರಕಾರಕ್ಕೆ ಅಮೇರಿಕದ ಹತ್ತರವಿರುವ ಕೂಬಾ ದ್ವೀಪವೂ ಚೀನಿ ಸಾಮ್ರಾಜ್ಯಕ್ಕೆ ಆಗ್ನೇಯದಲ್ಲಿರುವ ಫಿಲಿಪ್ಪೈನ್ ದ್ವೀಪಗಳೂ ಒಳಿತವಾಗಿವೆ. ಉಭಯ ದ್ವೀಪಗಳಲ್ಲಿ ಸ್ಪೇನರಾಜ್ಯಕ್ಕೆ ವಿರೋಧವಾಗಿ ಬಂಡಾಯವಾಯಿತು. ಫಿಲಿಪ್ಪೈನ ದ್ವೀಪಗಳಲ್ಲಿ ಎದ್ದ ಬಂಡಾಯವನ್ನು ಸ್ಪೇನರು ಇನ್ನೂ ಪೂರ್ಣವಾಗಿ ಅಣಗಿಸಲಿಲ್ಲಾ; ಅಲ್ಲಲ್ಲಿ ಇನ್ನೂ ಬಂಡಾಯಗಾರರು ಸರಕಾರಿ ಸೈನ್ಯದ ಮೇಲೆ ಯುದ್ಧ ಮಾಡುತ್ತಾರೆ. ಸ್ಪೇನ ಸರಕಾರದವರು ತಮ್ಮ ಕೈಗೆ ಸಿಕ್ಕಿದ ಮಾರ್ಮಲೆಯವರನ್ನು ಬಹು ಕ್ರೂರವಾಗಿ ಹಿಂಸೆ ಪಡಿಸಿದರೆಂದು ಹೇಳುತ್ತಾರೆ; ಆದರೆ ಕೂಬಾ ದ್ವೀಪದ ಬಂಡಾಯವು ತಕ್ಕ ಮಟ್ಟಿಗೆ ಅಣಗಿಯದೆ. ಕಲ್ಕತದಲ್ಲಿ ಆದಂತೆ ವೆಸ್ಟ ಇಂಡೀಸ್ ದ್ವೀಪಗಳಲ್ಲಿ

ಮಹಾ ಭೂಕಂಪವಾಯಿತು; ಹೆಚ್ಚುಕಡಿಮೆ ಸಾವಿರ ಜನರು ಸತ್ತರು; ಅನೇಕ ಮಂದಿರಗಳೂ ಮನೆಗಳೂ ಬಿದ್ದವು; ಅನೇಕರು ಕಕ್ಕಾಬಿಕ್ಕಿಯಾಗಿ ಹೊರಗೆ ಓಡಿ ಹೋಗಲು, ಭೂಮಿ ಬಿರಿದು ಬಹು ಜನರನ್ನು ನುಂಗಿತು. ಅಮೇರಿಕವೆಂಬುವದು ನಮಗೆ ಪಾತಾಳ ಖಂಡವು ಅಂದರೆ ಅದು ನೆಟ್ಟಗೆ ನಮಗೆ ಪಾದಗಳ ಕೆಳಗೆ ಇರುವಂಥಾದ್ದು; ಅಲ್ಲಿಗೂ ಇಲ್ಲಿಗೂ ವ್ಯಾಪಾರದ ವಹಿವಾಟು ನಡಿಯುತ್ತದೆ; ಈ ಸಂಬಂಧವು ಬಹು ಕಾಲದಿಂದ ಅದೆ; ಆದರೆ ಅಮೇರಿಕದ ಉದಾರಗೃಹಸ್ಥರು ಹಿಂದು ಜನರನ್ನು ಹಂಗಿಗರಾಗಿ ಮಾಡಿಕೊಂಡರು. ಹ್ಯಾಗಂದರೆ ಹಿಂದುಸ್ಥಾನದಲ್ಲಿ ಕ್ಷಾಮವು ಪ್ರಸರಿಸುವದನ್ನು ಕೇಳಿ ಮನಸ್ತಾಪ ಪಟ್ಟು ಹೇರಳ ಹಣ ಕೂಡಿಸಿ ಈ ದೇಶದಲ್ಲಿರುವ ಮಿಶನೆರಿಗಳಿಗೊಪ್ಪಿಸಿ ಊಟವಿಲ್ಲದವರಿಗೆ ಊಟವನ್ನೂ ಬಟ್ಟೆಯಿಲ್ಲದವರಿಗೆ ಬಟ್ಟೆಯನ್ನೂ ಕೊಡಿಸಿದ್ದಲ್ಲದೆ ಒಂದು ಹಡಗ ತುಂಬ ಧಾನ್ಯವನ್ನೂ ಕಳುಹಿಸಿಕೊಟ್ಟು ಬಹಳ ಸಹಾಯ ಮಾಡಿದರು. ಆ ಸೀಮೆಗೆ ನವೀನ ಅಧಿಪತಿಯು ಪಟ್ಟಕ್ಕೆ ಬಂದಾಗ ತನ್ನ ಬಹುಮಾನಕ್ಕಾಗಿ ಖರ್ಚು ಮಾಡ ಬೇಕೆಂದು ಏರ್ಪಡಿಸಿದ ಹೇರಳ ಹಣವನ್ನು ಇಲ್ಲಿಯ ಬಡಬಗ್ಗರಿಗಾಗಿ ವೆಚ್ಚಿಸ ಬೇಕೆಂದು ಅಪ್ಪಣೆ ಮಾಡಿಸಿದರು. ಆ ದೇಶವು ಧನಧಾನ್ಯ ಸಂಪನ್ನವಾದದ್ದು ಖರೆ; ಅವರು ತಮ್ಮ ಅಧಿಕ್ಯದಿಂದ ಒಂದಿಷ್ಟು ದಾನ ಮಾಡುವದು ಏನೂ ದೊಡ್ಡದಲ್ಲ; ಆದರೆ ಅವರಲ್ಲಿ ಹುಟ್ಟಿದ ಉದಾರ ಮನಸ್ಸೂ ಕರುಣೆಯೂ ಮಹಾ ಶ್ಲಾಘನೀಯವಾಗಿ ನಮ್ಮ ಹೃದಯಗಳಿಂದ ಕೃತಜ್ಞತಾಪನೆ ಆಕರ್ಷಿಸ ತಕ್ಕದ್ದಾಗಿದೆ. ಅಮೇರಿಕಕ್ಕೆ ಆಚೆ ಇರುವ ಫೀಜಿದ್ವೀಪ ನಿವಾಸಿಗಳೂ ವರ್ತಮಾನ ಪತ್ರಗಳಿಂದ ನಮ್ಮ ದೇಶದ ಅವಸ್ಥೆಯನ್ನು ತಿಳಿದು ದೊಡ್ಡ ಮನಸ್ಸು ಮಾಡಿ ಸುಮಾರು ಒಂಭತ್ತು ನೂರು ರೂಪಾಯಿ ಕಳುಹಿಸಿದರು. ಹೆಚ್ಚುಕಡಿಮೆ ಅರುವತ್ತು ವರ್ಷಗಳ ಕೆಳಗೆ ಕೇವಲ ನರಪಶುಗಳಾಗಿ ಮನುಷ್ಯಮಾಂಸವನ್ನು ಉಣ್ಣುವ ರಾಕ್ಷಸರಂತಿದ್ದ ಆ ಜನರು ಕ್ರೈಸ್ತ ಮಿಶನೆರಿಗಳ ಸದ್ಬೋಧನೆಯಿಂದಲೇ ಆತ್ಮಿಕ ಲೌಕಿಕ ಸ್ಥಿತಿಯಲ್ಲಿ ಸುಕೃತಪಟ್ಟು ಹೊಸ ಮನುಷ್ಯರಾದವರು. ಅವರು ನಮ್ಮ ಜನರ ಮೇಲೆ ಕರುಣೆ ಪಟ್ಟು ಧರ್ಮದ ಕೈಚಾಚಿದ್ದು ಆಶ್ಚರ್ಯವು ಮಾತ್ರವಲ್ಲಾ, ಯೇಸು ಕ್ರಿಸ್ತನ ಸುವಾರ್ತೆಯು ಮನುಷ್ಯರನ್ನು ರಕ್ಷಿಸುವಂಥಾ ದಿವ್ಯ ಬಲವುಳ್ಳದ್ದೆಂಬುವದಕ್ಕೆ ಅಶಂಕ್ಯ ಪ್ರಮಾಣವಾಗಿದೆ. ಜಪಾನ ದೇಶದ ಬಡ ಕ್ರೈಸ್ತರೂ ಸುಮಾರು ೬೦೦ ರೂಪಾಯಿ ಇತ್ತಕಡೆಗೆ ಕಳುಹಿಸಿ, ಈ ಹಣವನ್ನು ಬರಬಿದ್ದ ಸೀಮೆಗಳ ಜನರಿಗೆ ಹಂಚಿಕೊಡ ಬೇಕೆಂದೂ ಇನ್ನು ಮುಂದೆ ಹೆಚ್ಚು ಸಂಗ್ರಹಿಸಿ ರವಾನಿಸುವೆವೆಂದೂ ವಾಗ್ದತ್ತ ಮಾಡಿದ್ದಾರೆ. ಜಪನಿ ಮಹಾರಾಜನು ಚೀನಿ ಮಹಾರಾಜನನ್ನು ಯುದ್ಧದಲ್ಲಿ ಪರಾಜಯ ಮಾಡಿಸಿ ಅವರಿಂದ ಯುದ್ಧದ ಖರ್ಚಿಗಾಗಿ ಹೇರಳ ಖಂಡನೆ ಹಣವನ್ನು ವಸೂಲು ಮಾಡಿದನಷ್ಟೆ. ಈಗ ಜಪನಿ ಅರಸನು ತನ್ನ ರಾಜ್ಯದಲ್ಲಿ ಚಿನ್ನದ ನಾಣ್ಯದ ನಾಣ್ಯಗಳನ್ನು ಚಲಾವಣೆ ಮಾಡಬೇಕೆಂದು ಹುಕುಮು ಮ್ಮಾಡಿದ್ದಾನೆ.

ಪರಾರ್ಥಸೇವೆ.

ಸೇವಾಧರ್ಮೋ ಪರಮಗಹನೋ ಯೋಗಿನಾಮಪ್ಯಗಮ್ಯಃ ಅಂದರೆ ಸೇವೆ ಮಾಡುವದು ಮಹಾ ಗಹನವಾಗಿದೆ; ಯೋಗಸಾಮರ್ಥ್ಯವುಳ್ಳ ಮುನಿಗಳಿಗೂ ಅಗಮ್ಯವಾದದ್ದು ಎಂತ ಸುಭಾಷಿತ ಉಂಟು. ಆದಾಗ್ಯೂ ಲೋಕದಲ್ಲಿ ಸ್ವಸಂತೋಷದಿಂದ ಸೇವೆ ಮಾಡುವವರಿದ್ದಾರೆ; ಮಾಡಿಸಿಕೊಳ್ಳುವವರೂ ಇದ್ದಾರೆ. ಇವೆರಡು ಕೃತ್ಯಗಳು ಲೋಕಾಂತದ ವರೆಗೂ ಇರುವವು. ಆದರೆ ಸೇವೆ ಮಾಡುವವರು ಪುಕಸಾಟೆ ಮಾಡುವದಿಲ್ಲಾ, ಮಾಡಿಸಿಕೊಳ್ಳುವವರೂ ಪುಕಸಾಟೆ ಮಾಡಿಸಿಕೊಳ್ಳುವದಿಲ್ಲಾ. ಸೇವೆ ಮಾಡುವವರು ದುಡ್ಡು ಈಸಿಕೊಂಡು ಮಾಡುತ್ತಾರೆ; ಮಾಡಿಸಿಕೊಳ್ಳುವವರು ದುಡ್ಡು ಕೊಟ್ಟೇ ಮಾಡಿಸಿಕೊಳ್ಳುತ್ತಾರೆ. ಹೀಗಿರುವದರಿಂದ ಉಭಯತರೂ ಒಬ್ಬರಿಗೊಬ್ಬರು ಉಪಕಾರ ಮಾಡುತ್ತೇವೆಂದು ತಿಳಿಯುವದಿಲ್ಲಾ. ಪೇಟೆಯಲ್ಲಿ ಮಾರಾಟಕ್ಕೆ ಇಟ್ಟ ಒಡವೆಯನ್ನು ಒಬ್ಬನು ಕ್ರಯವರಿಸಿಕೊಳ್ಳುವಂತೆ ಒಬ್ಬನು ಇಂತಿಷ್ಟು ಹಣಕ್ಕೆ ಸೇವೆ ಮಾರುತ್ತಾನೆ, ಒಬ್ಬನು ಇಂತಿಷ್ಟಕ್ಕೆ ಅದನ್ನು ಕೊಳ್ಳುತ್ತಾನೆ. ಆದರೆ ಲೋಕದಲ್ಲಿ ಒಬ್ಬರಿಂದ ಸಂಬಳವನ್ನೂ ಪ್ರತಿಫಲವನ್ನೂ ತಕ್ಕೊಳ್ಳದೆಯೂ ಅಪೇಕ್ಷಿಸದೆಯೂ ಪರರಿಗೆ ಸೇವೆ ಮಾಡಿದವನು ಎಲ್ಲ್ಯಾದರೂ ಮೂಲೆಮುಕ್ಕಡಿಯಲ್ಲಿದ್ದಾನೋ? ಸ್ವಾರ್ಥವನ್ನು ಪೂರಾ ತೊರೆದು ಪರಾರ್ಥವಾಗಿ ಧಾವತಿ ಮಾಡುತ್ತಾ ತನ್ನ ಸೇವೆಗೆ ಪ್ರತಿಫಲವಾಗಿ ಹಣವನ್ನು ಮಾತ್ರವಲ್ಲಾ, ಜನರ ಹೊಗಳಿಕೆಯನ್ನಾದರೂ ಸ್ವೀಕರಿಸದೆ ತನ್ನ ಸೇವೆಯನ್ನು ಜನರು ಗಣ್ಯ ಮಾಡದೆ ಬೈದು ನಿಂದಿಸಿ ಅಪಕೃತ್ಯ ಮಾಡಿದರೂ ಪ್ರೀತಿಯನ್ನು ಸಡಲಿಸದೆ ಯಥಾ ಪ್ರಕಾರ ಸೇವೆ ಮಾಡುತ್ತಾ ಪರಾರ್ಥವಾಗಿ ಜೀವಮಾನವನ್ನು ವೆಚ್ಚ ಮಾಡಿದವನು ಲೋಕದಲ್ಲಿ ಕಾಣುತ್ತಾನೋ? ಇಂಥಾ ಮನುಷ್ಯನಿದ್ದನೆಂಬುವದು ಯಾವ ಶಾಸ್ತ್ರದಲ್ಲಿಯೂ ಇತಿಹಾಸದಲ್ಲಿಯೂ ಕಾಣದು. ಸರ್ವೇ ಸ್ವಾರ್ಥಸ್ಯವಶಾಃ ಎಂಬುವ ಗಾದೆಯಂತೆ ಲೋಕದಲ್ಲಿ ಭಾರಿ ಭಾರಿ ಕೃತ್ಯಗಳನ್ನು ಮಾಡಿ ಕೀರ್ತಿ ಪಟ್ಟವರೆಲ್ಲರೂ ಸ್ವಾರ್ಥಪರರಾಗಿಯೇ ಅಂಥಾ ಕೃತ್ಯಗಳನ್ನು ಮಾಡಿದರು. ದ್ರವ್ಯ ಬೇಕು, ಅಧಿಕಾರ ಬೇಕು, ಭೋಗಭಾಗ್ಯ ಬೇಕು, ಶಾಶ್ವತವಾದ ಕೀರ್ತಿ ಬೇಕು ಎಂಬ ಹೇತುಗಳು ಅವರ ಕೃತ್ಯಗಳನ್ನು ಪ್ರೇರಿಸಿದವು. ಅವರಲ್ಲಿ ಒಬ್ಬಾನೊಬ್ಬನು ಪರಾರ್ಥವಾಗಿ ಮಾಡಿದ್ದು ಏನಾದರೂ ಇದ್ದರೆ ಅದರಲ್ಲಿಯೂ ಜನರ ಹೊಗಳಿಕೆ ಬೇಕು ಎಂಬ ಸ್ವಾರ್ಥ ಹೇತುವಿತ್ತು.

ನಾವು ಮನುಷ್ಯರು ರಚಿಸಿದ ಶಾಸ್ತ್ರಗಳನ್ನೂ ಮನುಷ್ಯರ ಕಥೆಗಳನ್ನೂ ವಿವರಿಸುವ ಇತಿಹಾಸಗಳನ್ನೂ ಬಿಟ್ಟು ಅಪೌರುಷೇಯ ಗ್ರಂಥವಾದ ಸುವಾರ್ತೆಯನ್ನು ತೆಗದು ಓದಿದರೆ ಅದರಲ್ಲಿ ಸ್ವಾರ್ಥದ ಹೇತುವು ತಿಲಾಂಶವಾದರೂ ಇಲ್ಲದೆ ಸ್ವಸಂತೋಷದಿಂದ ಪರಾರ್ಥವನ್ನು ಘಟಿಸುತ್ತಾ ತನ್ನ ಸೇವೆಗೆ ಪ್ರತಿಫಲವಾಗಿ ಜನರಿಂದ ಹೊಗಳಿಕೆಯನ್ನಲ್ಲಾ ನಿಂದೆಯನ್ನೂ ಅಪಕಾರವನ್ನೂ ಪಡೆದಾಗ್ಯೂ ಮರಣಾಂತದ ವರೆಗೂ ಉದಾರ ಹೃದಯವನ್ನು ತೋರ್ಪಡಿಸಿದ ದೇವಮನುಷ್ಯನ ವೃತ್ತಾಂತ ಬರುತ್ತದೆ. ಆತನು ದೇವಮನುಷ್ಯನೆಂದು ಹೇಳಿದೆವು. ಯಾಕಂದರೆ ದೇವಮನುಷ್ಯನಲ್ಲದೆ

ಕೇವಲ ನಮ್ಮಂಥಾ ಮನುಷ್ಯನಾದವನು ಅಂಥಾ ಪರಾರ್ಥ ಸಾಧನೆಯಲ್ಲಿ ನಿರತನಾಗಿರಲಾರನು. ಆತನ ನಾಮಧೇಯವು ಯೇಸು ಕ್ರಿಸ್ತನು. ಆತನು ಮನುಷ್ಯರಿಗೆ ಉಪದೇಶ ಮಾಡುವಲ್ಲಿ ಒಮ್ಮೆ ಹೇಳಿದನು: ನಾನು ಸೇವೆ ಮಾಡಿಸಿಕೊಳ್ಳುವದಕ್ಕೆ ಬರಲಿಲ್ಲಾ, ಸೇವೆ ಮಾಡುವದಕ್ಕೂ ನನ್ನ ಪ್ರಾಣವನ್ನು ಅನೇಕರಿಗೋಸ್ಕರ ನಿಷ್ಕ್ರಯವಾಗಿ ಅರ್ಪಿಸುವದಕ್ಕೂ ಬಂದಿದ್ದೇನೆ. ಆತನು ಉಪದೇಶ ಮಾಡಿದಂತೆ ನಡೆದನು ಎಂಬುವದನ್ನು ವಿವರಿಸುತ್ತೇವೆ.

ಯೇಸು ಕ್ರಿಸ್ತನು ಮೂವತ್ತು ವರ್ಷ ಪ್ರಾಯದವನಾದಾಗ ಬಹಿರಂಗವಾಗಿ ಸುವಾರ್ತಾದೇಶಿಕ ಪ್ರವೃತ್ತಿಯನ್ನು ಪ್ರಾರಂಭಿಸಿ ಮೂರು ವರ್ಷಗಳು ಎಡೆಬಿಡದೆ ನಡಿಸಿದನು. ಈ ಮೂರು ವರ್ಷಗಳ ಪ್ರವೃತ್ತಿಯಲ್ಲಿ ಆತನ ಸಾದ್ಯಂತವಾದ ನಡಾವಳಿಯು ಸ್ವಾರ್ಥರಹಿತವಾಗಿ ಪರಾರ್ಥನುಕೂಲವಾಗಿತ್ತು ಎಂಬುವದಕ್ಕೆ ದೃಷ್ಟಾಂತ ಕೊಡುತ್ತೇವೆ. ಒಂದು ದಿನ ಆತನು ಮನೆಯಲ್ಲಿ ಕೂತು ಉಪದೇಶ ಮಾಡುವಾಗ ಹೇರಳ ಜನರು ಆತನನ್ನು ಸುತ್ತಿಮುತ್ತಿ ಕೂತುಕೊಂಡಿದ್ದು ಆತನ ಮುಖದಿಂದ ಬರುವ ವಾಕ್ಯಗಳನ್ನು ಅಮೃತವೆಂಬಂತೆ ಪಾನ ಮಾಡುವವರಾದ್ದರಿಂದ ಅಂದು ಆತನಿಗೆ ಆರೋಗಣೆ ಮಾಡುವದಕ್ಕೂ ತೆರಪಾಗದೆ ಹೋಯಿತು; ಆದಾಗ್ಯೂ ಆತನು ಪರಮಾನಂದದಿಂದ ಬೋಧನೆ ಮಾಡಿದನು. ಜನರು ನಿತ್ಯವೂ ಆತನನ್ನು ಬಿಡದೆ ಇದ್ದದರಿಂದ ಆತನು ಸ್ವಲ್ಪ ಆರಾಮ ಪಡುವ ಬಗ್ಯೆ ಊರ ಹೊರಗೆ ನಿರ್ಜನವಾದ ಪ್ರದೇಶಕ್ಕೆ ಶಿಷ್ಯವರ್ಗದವರೊಡನೆ ಹೋಗುತ್ತಿದ್ದನು. ಜನರಿಗೆ ಅದು ತಿಳಿದ ಕೂಡಲೇ ಅವರು ಅಲ್ಲಿಗೂ ಬಂದು ನಾನಾ ರೋಗಿಗಳನ್ನೂ ಅಂಗಹೀನರನ್ನೂ ಆತನ ಪಾದದ ಬಳಿಯಲ್ಲಿ ಹಾಕಿ ವಾಶಿ ಮಾಡಬೇಕೆಂದು ಬೇಡಿಕೊಂಡಾಗ್ಯೆ ಆತನು ಬೇಸರದೆ ಕರುಣ ಪಟ್ಟು ಅವರವರ ಇಷ್ಟಾರ್ಥವನ್ನು ಸಲ್ಲಿಸಿದನು. ಅವರು ವನದಲ್ಲಿಯೂ ಆತನನ್ನು ಬೆಂಬಿಡದೆ ಇದ್ದಾಗ ಸ್ವಾಮಿಯು ಊಟ ಮಾಡಿಕೊಂಡು ಬನ್ನಿ ಎಂದು ಮನೆಗೆ ಕಳಿಸದೆ ಕೆಲವು ರೊಟ್ಟಿ ತಕ್ಕೊಂಡು ಆಶೀರ್ವಾದ ಮಾಡಿ ಜನರಿಗೆಲ್ಲಾ ಬಡಿಸ ಬೇಕೆಂದು ಶಿಷ್ಯರಿಗೆ ಆಜ್ಞಾಪಿಸಿ ಸಂತೃಪ್ತಿ ಪಡಿಸಿದನು. ಈ ಕಾರಣಿಕಕೃತ್ಯವನ್ನು ಕಂಡವರು ಇಂಥವನು ತಮ್ಮ ಮೇಲೆ ಅರಸಾದರೆ ಬಹಳ ಲೇಸೆಂದು ತಮ್ಮ ತಮ್ಮೊಳಗೆ ಮಾತಾಡಿಕೊಳ್ಳುವಾಗ ಸ್ವಾಮಿ ಅವರ ಹೃದ್ಗತ ಭಾವವನ್ನು ತಿಳಿದು ಅವರನ್ನು ಅಗಲಿ ಏಕಾಂತಸ್ಥಳಕ್ಕೆ ತೆರಳಿ ದೇವರ ಪ್ರಾರ್ಥನೆ ಮಾಡಿದನು. ಜನರ ಕೋರಿಕೆ ನೆರವೇರುವದಕ್ಕೆ ಬಿಡಲಿಲ್ಲಾ. ಆತನು ಲೋಕದಲ್ಲಿರುವಾಗ ವಸ್ತಿಗಾಗಿ ಮನೆಮಾರಾಗಲಿ ಆಸ್ತಿಪಾಸ್ತಿಯಾಗಲಿ ಏನೂ ಮಾಡಿಕೊಳ್ಳಲಿಲ್ಲಾ. ಸರ್ವ ವಿಶ್ವವೇ ಆತನ ಮನೆಯಾಗಿತ್ತು; ವಿಶ್ವದಲ್ಲಿರುವ ಧನವೆಲ್ಲಾ ಆತನ ಧನವಾಗಿತ್ತು. ಒಂದು ದಿವಸ ಆತನ ಮುಂದೆ ಒಬ್ಬ ಹರೇದವನು ಬಂದು ಸ್ವಾಮಿ, ನಾನು ತಮ್ಮ ಶಿಷ್ಯನಾಗಿ ತಮ್ಮ ಬೆನ್ನು ಹಿಡಿಯುತ್ತೇನೆ ಎಂದು ಹೇಳಿಕೊಂಡಾಗ ಆತನು ಆ ಯೌವನವಂತನ ಹೇತುವು ಒಳ್ಳೇದಲ್ಲವೆಂದು ತಿಳಿದು, ನರಿಗಳು ಕುಣಿಯಲ್ಲಿ ಇಕ್ಕೆ ಮಾಡುತ್ತವೆ, ಪಕ್ಷಿಗಳು ಗೂಡಿನಲ್ಲಿ ರಾತ್ರಿ ಕಳೆಯುತ್ತವೆ, ಆದರೆ ನನಗೆ ತಲೆ ಇಡುವದಕ್ಕೆ ಸ್ಥಳವಿಲ್ಲ ಅಂದನು. ಅಂದರೆ ನೀನು ನನ್ನ ಶಿಷ್ಯನಾಗಿ ಸುಖ ಪಡಿಯುವಿ ಎಂದು ಕೋರುತ್ತಿಯೋ? ಅದು ನನ್ನಲ್ಲಿ ಸಿಕ್ಕದು ಎಂಬುವ ಅರ್ಥದಲ್ಲಿ ಹೇಳಿದನು.

ಆತನು ಹೆಚ್ಚಾಗಿ ಉಪದೇಶ ಮಾಡುತ್ತಾ ಸಂಚರಿಸುತ್ತಿದ್ದ ಗಲಿಲಾಯ ದೇಶದಲ್ಲಿ ವಿಶ್ರಾಮವಿಲ್ಲದ್ದರಿಂದ ಆರಣಿಕೆಗಾಗಿ ಒಂದು ದಿನ ಶಿಷ್ಯರೊಡನೆ ಸೀದೋನೆನ್ನುವ ದೂರ ದೇಶಕ್ಕೆ ತೆರಳಿದನು. ಅಲ್ಲಿಯೂ ಏಕಾಂತವಾಗಿರಲಾರದವನಾದನು. ಒಬ್ಬಾನೊಬ್ಬ ಹೆಂಗಸು ಆತನು ಬಂದ ವರ್ತಮಾನವನ್ನು ಕೇಳಿ, ಆತನಿದ್ದಲ್ಲಿಗೆ ಬಂದು ಸಂಕಟದಲ್ಲಿ ಬಿದ್ದ ತನ್ನ ಮಗಳನ್ನು ಗುಣಮಾಡ ಬೇಕೆಂದು ಬಹಳ ವರಾತ ಮಾಡಿ ಬೇಡಲಾಗಿ ಆತನು ಕರುಣೆ ಪಟ್ಟು ಅವಳ ಇಷ್ಟಾರ್ಥವನ್ನು ಸಲ್ಲಿಸಿದನು. ಒಂದಾನೊಂದು ವಿಪತ್ತಿನಲ್ಲಿ ಮರುಗುವವರು ಯಾವ ಹೊತ್ತಿನಲ್ಲಿ ಬಂದು ಸಹಾಯ ಮಾಡು ಎಂದು ಬೇಡಿದರೂ ಕೂಡಲೇ ಅವರ ಸೇವೆಗೆ ಸಿದ್ಧನಾಗಿ, ಅವರ ಮನೆವರೆಗೂ ಹೋಗಿ ಸಹಾಯ ಮಾಡಿದನು. ತಂದೆಯಾದ ದೇವರು ತನಗೆ ನೇಮಿಸಿದ ಮಣಿಹವನ್ನು ಮಾಡುವದೇ ತನ್ನ ಅನ್ನಪಾನವೆಂದೂ ಹಗಲಿರುವ ವರೆಗೂ ತಾನು ಜಂಬರ ಮಾಡುತ್ತಾ ಇರುವೆನೆಂದೂ ಹೇಳುತ್ತಿದ್ದನು. ಆತನು ದೇವ ಮನುಷ್ಯನಾದೆದರಿಂದ ಈ ರೀತ್ಯಾ ಎಡೆಬಿಡದೆ, ವಿಶ್ರಾಮವಿಲ್ಲದೆ ಮೂರು ವರ್ಷಗಳು ಪರಾರ್ಥವಾದ ಸೇವೆ ಮಾಡ ಬಹುದಾಯಿತು. ಕೇವಲ ಮನುಷ್ಯನಾದವನು ಇಷ್ಟು ಧಾವತಿ ಮಾಡುವದಕ್ಕೆ ಹೋದರೆ ದೇಹದ ತ್ರಾಣವು ತಾಳಲಾರದೆ ಸೋಥೋಗುತ್ತಿದ್ದನು.

ನಾವು ದೊಡ್ಡವರು, ಒಡೆಯರು ಎಂದು ಗರ್ವಿಸದೆ ತಗ್ಗಿಸಿಕೊಂಡು ಪರಾರ್ಥವಾದ ಸೇವೆ ಮಾಡ ಬೇಕು ಎಂಬುವ ಬಗ್ಯೆ ನಮಗೆ ಸುಮಾತ್ಯಕೆ ಕಾಣಿಸುವದಕ್ಕೆ ಆತನು ಮಾಡಿದ ಒಂದು ಕಾರ್ಯವು ಏನಂದರೆ: ತಾನು ಶಿಷ್ಯರೊಂದಿಗೆ ಕಡೇ ಆರೋಗಣೆ ಮಾಡಿದ ರಾತ್ರಿಯಲ್ಲಿ ಊಟವಾಗುವ ಮೊದಲು ಶಿಷ್ಯರನ್ನು ಕುಳ್ಳಿರಿಸಿ ತಾನು ನಡುವಿಗೆ ಪಂಚೆಯನ್ನು ಸುತ್ತಿಕೊಂಡು ಹೆಗಲಿನ ಮೇಲೆ ಅಂಗವಸ್ತ್ರವನ್ನು ಹಾಕಿಕೊಂಡು ಹರಿವಾಣದಲ್ಲಿ ನೀರೆರದು ಶಿಷ್ಯರ ಪಾದಗಳನ್ನು ತೊಳೆಯಲಾರಂಭಿಸಿದನು. ಅವರಲ್ಲಿ ಒಬ್ಬ ಶಿಷ್ಯನು: ಅಯ್ಯಾ, ನೀನು ನನ್ನ ಪಾದವನ್ನು ತೊಳೆಯಬಾರದು ಎಂದು ದೈನ್ಯದಿಂದ ಅರಿಕೆ ಮಾಡಲು, ಸ್ವಾಮಿ: ನಾನು ಮಾಡುವದನ್ನು ನೀನು ಅರಿಯೆ, ಮತ್ತೆ ನಿನಗೆ ಬೋಧಿಸುವೆನೆಂದು ಹೇಳಿ ಅವನ ಪಾದಗಳನ್ನು ತೊಳೆದಾದ ಮೇಲೆ ಕೂತುಕೊಂಡು ಹೇಳಿದ್ದು: ನೀವು ನನ್ನನ್ನು ಗುರುವೆಂದು ಕರೆಯುತ್ತೀರಿ; ನಾನು ನಿಮ್ಮ ಗುರುವು ಖರೆ, ಗುರುವಾದ ನಾನು ನಿಮ್ಮ ಪಾದಗಳನ್ನು ತೊಳೆದೆನಾದರೆ ನೀವೂ ಒಬ್ಬರು ಒಬ್ಬರ ಪಾದಗಳನ್ನು ತೊಳೆಯುವದಕ್ಕೆ ಬದ್ದರಾಗಿದ್ದೀರಿ. ನಾನು ನಿಮ್ಮ ಮಧ್ಯದಲ್ಲಿ ಸೇವಕನಂತೆ ಇದ್ದೇನೆ; ಸೇವಕನಂತೆ ತಗ್ಗಿಸಿಕೊಂಡು ಸತ್‌ಕೃತ್ಯ ಮಾಡುವವನೇ ದೊಡ್ಡವನು ಎಂದು ಉಪದೇಶ ಮಾಡಿದನು. ಪಾದಗಳನ್ನು ತೊಳೆಯುವದು ಅಂದರೇನು? ದೀನಭಾವದಿಂದ ತನಗಿಂತ ಕಡಿಮೆಯವನಿಗೂ ಉಚಿತವಾಗಿ ಮಾಡ ತಕ್ಕ ಸೇವೆಗೆ ಉಪಲಕ್ಷಣವಾಗಿದೆ.

ಈ ಪರಿಯಲ್ಲಿ ಯೇಸುಕ್ರಿಸ್ತನು ಬಲ್ಲಿದವರೂ ಬಡವರೂ ಸಣ್ಣವರೂ ದೊಡ್ಡವರೂ ಎನ್ನದೆ ಅಕಾಲ ಸುಕಾಲವೆಂದೆನ್ನದೆ ಸ್ವಾರ್ಥರಹಿತವಾಗಿ ಸೇವೆ ಮಾಡಿದ್ದಕ್ಕೆ ಅವನಿಗೆ ಲಭಿಸಿದ ಫಲವೇನು? ಜನರ ಹೊಗಳಿಕೆ ಆತನು ಅಪೇಕ್ಷಿಸಲಿಲ್ಲಾ. ತನ್ನಿಂದ ಉಪಕಾರ ಹೊಂದಿದವರಿಗೆ ಅನೇಕಾವರ್ತಿ ಯಾರಿಗೂ ಹೇಳ ಬೇಡಾ, ಊರಲ್ಲಿ ಯಾರ ಮುಂದೆಯಾದರೂ ತಿಳಿಸ ಬೇಡಾ ಎಂದು ಕಂಡಿತವಾಗಿ ಅಪ್ಪಣೆ ಮಾಡುತ್ತಿ

ದ್ದನು. ಜನರು ಒಮ್ಮೆ ಅವನನ್ನು ಅರಸನನ್ನು ಮಾಡ ಬೇಕೆಂದಿದ್ದಾಗ ಅವರಿಂದ ತೊಲಗಿ ಹೋದನೆಂದು ಹಿಂದೆ ಹೇಳಿದೆವು. ಜನರಲ್ಲಿ ಅಖಂಡ ಮುಖಂಡರಾದವರು ಆತನ ಕಾರಣಿಕ ಕೃತ್ಯಗಳನ್ನು ನೋಡಿ ಹೊಟ್ಟೆಕಿಚ್ಚು ಪಟ್ಟು ಜನರ ಮುಂದೆ ಅವನ ಕೀರ್ತಿಯನ್ನು ಕೆಡಿಸುವದಕ್ಕೆ ಪ್ರಯತ್ನ ಮಾಡಿದರು. ಆತನು ಪ್ರಸಂಗ ಮಾಡುವಾಗ ಹತ್ತರ ಕೂತು ಅವನ ಬಾಯಿಯಿಂದ ತಪ್ಪು ವಾಕ್ಯ ಬರುತ್ತದೋ ಎಂದು ಹೊಂಚುತ್ತಾ ವ್ಯರ್ಥವಾದ ಪ್ರಶ್ನೆಗಳನ್ನು ಮಾಡಿ ಉತ್ತರವನ್ನು ಕೇಳುತ್ತಾ ಬರಿದೆ ತೊಂದರೆ ಪಡಿಸಿದರು. ಆದರೆ ಸ್ವಾಮಿಯು ಖೇದಗೊಳ್ಳದೆ, ಸಿಟ್ಟು ಮಾಡದೆ ವೈರಿಗಳಾಗಿರುವವರಿಗೂ ಬುದ್ಧಿವಾದ ಮಾಡಿ ಅವರನ್ನು ನೀಟ ದಾರಿಗೆ ತರುವದಕ್ಕೆ ಬೋಧನೆ ಮಾಡುತ್ತಿದ್ದನು. ಆದರೆ ಆ ಮುಖಂಡರ ಮತ್ಸರವು ದಿನೇ ದಿನೇ ವರ್ಧಮಾನವಾಗುತ್ತಾ ಬಂತು. ಇವನನ್ನು ಹೀಗೆಯೇ ಸಡಿಲು ಬಿಟ್ಟರೆ ಕಾಲಾನುಗತವಾಗಿ ಲೋಕವೆಲ್ಲಾ ಅವನ ಹಿಂದೆ ಹೋಗುವದು, ನಾವೆಲ್ಲಾ ಅಳಿದು ಹೋಗುವೆವು ಎಂತ ಯೋಚಿಸಿ, ಅವನನ್ನು ಕೊಲ್ಲುವ ಬಗೆ ಹ್ಯಾಗೆ ಎಂದು ಗುಪ್ತವಾಗಿ ಮದಿಪು ಮಾಡಿದರು. ಹೀಗಿರುತ್ತಾ ಸ್ವಾಮಿಯ ಶಿಷ್ಯರಲ್ಲೊಬ್ಬನು ಗುರುದ್ರೋಹಿಯಾಗಿ ಆ ದೊಡ್ಡ ಮನುಷ್ಯರ ಬಳಿಗೆ ಹೋಗಿ ತಾನು ಯೇಸು ಕ್ರಿಸ್ತನನ್ನು ನಿಮಗೆ ಹಿಡಿದು ಕೊಡುತ್ತೇನೆ, ತನಗೆ ಹಣ ಕೊಡಿ ಎಂದು ಹೇಳಲಾಗಿ ಅವರು ಒಪ್ಪಿ ಅವನಿಗೆ ಮೂವತ್ತು ರೂಪಾಯಿ ಕೊಟ್ಟರು. ಒಂದು ದಿನ ರಾತ್ರಿ ವೇಳೆಯಲ್ಲಿ ಯೇಸು ಕ್ರಿಸ್ತನುಎಂದಿನಂತೆ ಇಪ್ಪೆ ಮರಗಳ ತೋಪಿನಲ್ಲಿ ಶಿಷ್ಯರೊಡನೆ ಏಕಾಂತದಲ್ಲಿ ಇದ್ದಾಗ ಯೆಹೂದರು ಆತನನ್ನು ಹಿಡಿದು ವೈಯುವದಕ್ಕೆ ಬರಲು ಶಿಷ್ಯರಲ್ಲೊಬ್ಬನು ಕತ್ತಿ ತಕ್ಕೊಂಡು ಗುರುವನ್ನು ಹಿಡಿಯ ಬಂದವರನ್ನು ಕೊಲ್ಲುವೆನೆಂದು ಮುಂದರಿಸಿ ಒಬ್ಬನ ಕಿವಿಯನ್ನು ಕಡಿದು ಬಿಟ್ಟನು. ಯೇಸು ಕ್ರಿಸ್ತನು ಇದನ್ನು ನೋಡಿ ಶಿಷ್ಯನನ್ನು ದಬ್ಬಿಸಿ ಆ ಮನುಷ್ಯನ ಕಿವಿಯನ್ನು ಮುಟ್ಟಿ ವಾಸಿ ಮಾಡಿ ತನ್ನನ್ನು ಹಿಡಿಯ ಬಂದವರ ಕೈಗೆ ತಪ್ಪಿಸಿಕೊಳ್ಳ ಬಹುದಾಗಿದ್ದರೂ ತಪ್ಪಿಸಿಕೊಳ್ಳದೆ ಧೈರ್ಯಶಾಲಿಯಾಗಿ ಅವರ ಮುಂದೆ ನಿಂತು ಅವರು ತನ್ನನ್ನು ಹಿಡಿಯುವ ಹಾಗೆ ಸಮ್ಮತಿ ಪಟ್ಟನು. ಯಾಕಂದರೆ ತಾನು ಅನೇಕರಿಗೋಸ್ಕರ ತನ್ನ ಪ್ರಾಣವನ್ನು ನಿಷ್ಕ್ರಯವಾಗಿ ಸಮರ್ಪಿಸುವದಕ್ಕೆ ಬಂದೆನೆಂದು ಮೊದಲೇ ಹೇಳಿದ್ದನು. ಆತನು ಆ ವರೆಗೆ ಮಾಡಿದ ಪರಾರ್ಥ ಸೇವೆಯಲ್ಲಿ ಇದೇ ಮಹೋತ್ತಮವಾದದ್ದು. ವೈರಿಗಳು ಆತನನ್ನು ಹಿಡಿದು ತಮ್ಮ ವರ್ಗದ ದೊಡ್ಡ ಮನುಷ್ಯರ ಸನ್ನಿಧಿಗೆ ವೈದು ವಿಚಾರಣೆ ಮಾಡಿ ಆತನನ್ನು ಕೊಲ್ಲಿಸುವದಕ್ಕೆ ತಕ್ಕ ಅಪರಾಧವು ಕಾಣದದರಿಂದ ಹುಶಿಸಾಕ್ಷಿಗಳನ್ನು ತರಿಸಿ ನುಡಿಸಿದಾಗ್ಯೂ ಆಪಾದನೆ ಮಾಡಲಾರದೆ ಕಡೆಗೆ ತಾನು ದೇವರ ಮಗನಾಗಿದ್ದೇನೆಂದು ಇವನು ಹೇಳಿದ್ದಾನೆ, ಹೀಗನ್ನುವದು ದೇವದೂಷಣೆಯಾಗುತ್ತದೆ, ದೇವದೂಷಣೆ ಮಾಡಿದವನು ಮರಣ ಪಡ ತಕ್ಕದ್ದೆಂದು ತೀರ್ಪು ಮಾಡಿ, ಅರಸ್ಥಾನದ ದೊರೆಯ ಮುಂದೆ ನಿಲ್ಲಿಸಿ ತಾವು ಮಾಡಿದ ತೀರ್ಪನ್ನು ಸಿಂಧು ಪಡಿಸ ಬೇಕೆಂದು ಹೇಳಿಕೊಂಡರು. ದೊರೆ ನ್ಯಾಯ ಶಾಸ್ತ್ರ ಜನ್ನಾಗಿ ಬಲ್ಲವನಾಗಿ ಈ ಅಪರಾಧ ಹೊರಿಸಿದ ಮನುಷ್ಯನಿಗೆ ಮರಣದಂಡನೆ ವಿಧಿಸ ಕೂಡದೆಂದು ಹೇಳಲಾಗಿ ವೈರಿಗಳಾದ ಜನರು ಗಲಭೆ ಮಾಡಿ ದೊರೆಯನ್ನು ತೊಂದರೆ ಪಡಿಸಿ ತಮ್ಮ ದುರುದ್ದೇಶವನ್ನು ಸಾಧಿಸಿದರು. ಆತನನ್ನು ಆಘಾತ ಸ್ಥಳಕ್ಕೆ

ವೈಯುವಾಗ ಪಟ್ಟಣದ ಹೆಂಗಸರು ಆತನ ಉಪಕಾರಗಳನ್ನು ನೆನಸಿ ಅಳುತ್ತಾ ಬಾಯಿ ಬಾಯಿ ಬಡಕೊಳ್ಳುತ್ತಾ ಆತನ ಬೆನ್ನಾರೆ ಬರುತ್ತಿರಲು ಆತನು ಅವರನ್ನು ನೋಡಿ: ನೀವು ನನಗಾಗಿ ಅಳ ಬೇಡಿರಿ, ನಿಮಗಾಗಿಯೂ ನಿಮ್ಮ ಮಕ್ಕಳಿಗಾಗಿಯೂ ಅಳಿರಿ ಎಂದು ಹೇಳಿದನು. ಮೃದು ಸ್ವಭಾವದ ಹೆಣ್ಣುಮಕ್ಕಳು ತನ್ನ ಸ್ವಾರ್ಥರಹಿತ ಪರೋಪಕಾರ ಸೇವೆಗೆ ಕೊಡುವ ಅಶ್ರುಧಾರೆ ಎಂಬ ಸಂಭಾವನೆಯನ್ನಾದರೂ ಆತನು ಅವರಿಂದ ಸ್ವೀಕರಿಸಲಿಲ್ಲಾ. ಮಾರೆಕಾರರು ಆತನನ್ನು ಸಿಲುಬೆಗೆ ಜಡಿದ ಮೇಲೆ ಆತನು ತಾನು ಮಾಡಿದ ಸೇವೆಯೆಲ್ಲಾ ಮಳಲಲ್ಲಿ ಎಣ್ಣೆ ಹೊಯಿದಂತೆ ಆಯಿತಲ್ಲಾ ಎಂದು ಮನನೊಂದುಕೊಂಡು ನಿರಾಶೆಯಾಗದೆ ತಂದೆಯೇ ಅವರಿಗೆ ಕ್ಷಮೆ ಮಾಡು, ಅವರು ಮಾಡುವದೇನೆಂದು ಅರಿಯರು ಎಂದು ಪ್ರಾರ್ಥಿಸಿ ಶಿಲುಬೆಯ ಹತ್ತರವೇ ನಿಂತು ಎದೆ ಒಡೆಯುವಂತೆ ಶೋಕ ಮಾಡುತ್ತಿದ್ದ ತಾಯಿಯಾದ ಮರಿಯಾಂಬೆಯನ್ನು ನೆನಸಿ ಅವಳನ್ನು ಅನಾಥೆಯಾಗಿ ಬಿಡಲೊಲ್ಲದೆ ತನ್ನ ವೇದನೆಯನ್ನು ಮರೆತು ಅವಳನ್ನು ತನ್ನ ಪ್ರಿಯ ಶಿಷ್ಯನಿಗೆ ಕೈವರ್ತಿಸಿ ಆಕೆಯನ್ನು ಮಾತೃಭಾವದಿಂದ ಆರೈಕೆ ಮಾಡೆಂದು ಆಜ್ಞಾಪಿಸಿದನು. ಆತನು ಸಿಲುಬೆಯಲ್ಲಿ ತೂಗುವಾಗ ಶತ್ರುಗಳು ಆತನನ್ನು ನೋಡಿ ಇವನು ಪರರನ್ನು ರಕ್ಷಿಸಿದನು, ತನ್ನನ್ನು ರಕ್ಷಿಸಲಾರನು ಎಂದು ಅಣಕಿಸಿದರು. ಈ ಮೂದಲೆ ಸತ್ಯವಾಗಿತ್ತು; ಆತನು ಸ್ವಪ್ರಯೋಜನದ ದೃಷ್ಟಿ ಇಟ್ಟು ಅಂದಿನವರೆಗೆ ಏನೂ ಮಾಡಿದವನಲ್ಲಾ. ಅವನ ಸಮಸ್ತ ಕೃತ್ಯಗಳು ಪರಾರ್ಥವಾದವುಗಳು. ಆ ಮೇಲೆ ತಾನು ದೇವರ ಚಿತ್ತವನ್ನು ಪೂರಯಿಸುವದಕ್ಕೆ ಬಂದೆ, ಅದನ್ನು ಸಾಂಗವಾಗಿ ಪೂರಯಿಸಿದೆನೆಂದು ತಿಳಿದು ತಂದೆಯೇ ನಿನ್ನ ಕೈಯಲ್ಲಿ ನನ್ನ ಆತ್ಮವನ್ನು ಒಪ್ಪಿಸುತ್ತೇನೆಂದು ಬಿನ್ನವಿಸಿ ಮರಣದಲ್ಲಿ ಪ್ರವೇಶಿಸಿದನು. ಆತನ ದೇಹವನ್ನು ಧನಿಕರಾದ ಆಪ್ತ ಮಿತ್ರರು ಸಿಲುಬೆಯಿಂದ ಇಳಿಸಿ ಪರಿಮಳ ದ್ರವ್ಯಗಳಿಂದ ಸುಗಂಧಿತ ಮಾಡಿ ಬಂಡೆಯಲ್ಲಿ ತೋಡಿದ ಗುಹೆಯಲ್ಲಿ ಸಮಾಧಿ ಮಾಡಿದರು. ಇದೆಲ್ಲಾ ನಡೆದದ್ದು ಶುಕ್ರವಾರ ಸಂಜೆಯಲ್ಲಿ; ಆದಿತ್ಯವಾರ ಮುಂಜಾನೆ ಆತನು ತೇಜೋಮಯ ದೇಹಿಯಾಗಿ ಉತ್ಥಾನ ಮಾಡಿ ಶಿಷ್ಯವರ್ಗದವರಿಗೆ ಪ್ರತ್ಯಕ್ಷವಾಗಿ ನಿರಾಶಾಗ್ರಸ್ತರಾಗಿ ಶೋಕ ಮಾಡುತ್ತಿದ್ದ ಅವರನ್ನು ಸಂತವಿಸಿ ತಾನು ಮಾಡುತ್ತಿದ್ದ ಉಪದೇಶವನ್ನು ಅವರು ಗ್ರಹಿಸುವಂತೆ ಜ್ಞಾನವನ್ನು ದಯೆಪಾಲಿಸಿ ಹರಸಿ ನೀವು ಭೂಲೋಕದ ಸಕಲ ದೇಶಗಳಿಗೆ ಪಯಣ ಮಾಡಿ ತನ್ನ ಸುವಾರ್ತೆಯನ್ನು ಬೋಧಿಸಬೇಕೆಂದು ಅಪ್ಪಣೆ ಮಾಡಿ ದಿವಾರೋಹಣ ಗೈದನು. ಈ ಲೋಕದಿಂದ ತೆರಳಿ ಮೇಲ್ಲೋಕವನ್ನು ಅಡರಿದಾಗ್ಯೂ ಆತನು ಈಗಲೂ ತನ್ನನ್ನು ವಿಶ್ವಾಸಪೂರ್ವಕವಾಗಿ ಸ್ಮರಣೆ ಮಾಡುವವರಿಗೆ ಸಮೀಪಸ್ಥನಾಗಿದ್ದಾನೆ. ಆತನು ಭೂಪರಲೋಕಗಳಲ್ಲಿ ಸರ್ವಾಧಿಕಾರವನ್ನು ಪಡೆದು ವಿಶ್ವಪತಿಯಾಗಿದ್ದರೂ ಆತನ ಪ್ರೀತಿಯೂ ಕೃಪೆಯೂ ದೀನರಾದ ಭಕ್ತರ ಮೇಲೆ ಹರಿಯುತ್ತದೆ. ತನಗೆ ಮೊರೆ ಇಡುವ ಭಕ್ತರನ್ನು ಪಾಪತ್ವದ ಕೆಸರಿನಿಂದ ಉದ್ದರಿಸುವದಕ್ಕೂ ಪಾಪದ ಅಡಿಮೆಯೊಳಗಿಂದ ಏಮೋಚಿಸುವದಕ್ಕೂ ಪಾಪದ ಕಾರಾಗೃಹದಿಂದ ಹೊರಗೆ ತರುವದಕ್ಕೂ ಅವರ ಪಾಪರೋಗವನ್ನು ವಾಸಿ ಮಾಡಿ ಶುದ್ಧತ್ವ ದಿವ್ಯ ಸಮಾಧಾನವೆಂಬ ಕ್ಷೇಮವನ್ನು ಪಾಲಿಸುವದಕ್ಕೂ ಆತನು ಕಾರ್ಯಕರ್ತನಾಗಿ ಸಿದ್ಧವಿದ್ದಾನೆ.

ಸ್ವಾರ್ಥರಹಿತವಾಗಿ ಕೇವಲ ಪರಾರ್ಥಕವಾದ ಪ್ರೀತಿಯೂ ದಯೆಯೂ ಕರುಣೆಯೂ ಪ್ರತ್ಯಕ್ಷವಾಗಿ ಕಂಡು ಬಂದದ್ದು ಯೇಸು ಕ್ರಿಸ್ತ ಸ್ವಾಮಿಯವರಲ್ಲಿಯೇ ಹೊರ್ತು ಇತರ ಯಾವ ಗುರುವಿನಲ್ಲಿಯೂ ದೇಶಿಕನಲ್ಲಿಯೂ ಕಾಣಲಿಲ್ಲಾ. ಈ ವಿಷಯವನ್ನು ಹೃದಯದಲ್ಲಿ ಪಕ್ಷಪಾತವಿಲ್ಲದೆ ಆಲೋಚಿಸಿದರೆ ಆತನು ಮಾತ್ರವೇ ವಿಮುಕ್ತಿಯನ್ನು ಕಾಂಕ್ಷಿಸುವ ಪಾಪಿಗೆ ರಕ್ಷಕನಾಗಿದ್ದಾನೆಂಬುವದನ್ನು ಸರ್ವರೂ ಮನಗಾಣುವರು. ಗುರುವಿನಂತೆ ಶಿಷ್ಯ ತಂದೆಯಂತೆ ಮಗ ಎಂಬ ಗಾದೆಯಂತೆ ಯಾವರು ಯೇಸು ಕ್ರಿಸ್ತನಲ್ಲಿ ವಿಶ್ವಾಸವಾನರಾಗಿ ಆತನ ಸ್ವಾರ್ಥರಹಿತ ದಯೆಯನ್ನೂ ಸೇವೆಯನ್ನೂ ಅನುಭವ ಮಾಡಿದರೋ ಅವರೇ ಸ್ವಾರ್ಥರಹಿತವಾದ ಪರೋಪಕಾರದ ಕೃತ್ಯಗಳನ್ನು ಮಾಡ ಬಲ್ಲರು. ಇಂಥಾ ಸೇವೆಯೇ ದೇವರು ಮೆಚ್ಚುವಂಥಾ ಸೇವೆಯಾಗಿದೆ. ಮತ್ತು ಯೇಸು ಕ್ರಿಸ್ತನಲ್ಲಿ ವಿಶ್ವಾಸವಿಟ್ಟು ಉಪದೇಶವನ್ನೂ ಸಚ್ಚರ್ಯೆಯನ್ನೂ ಅನುವರ್ತಿಸುವವರೇ ಆತನಂತೆ ಸ್ವಾರ್ಥವನ್ನು ವರ್ಜಿಸಿ ನೆರೆಯವರಿಗೂ ದೇಶಬಾಂಧವರಿಗೂ ಉಭಯ ಲೋಕಗಳಲ್ಲಿ ಹಿತಕರವಾದ ಕೃತ್ಯಗಳನ್ನು ಮಾಡುವರು. ಇಂಗ್ಲಾಂಡಿನಿಂದಲೂ ಜರ್ಮನಿ ದೇಶದಿಂದಲೂ ಅಮೆರಿಕದಿಂದಲೂ ನಮ್ಮ ಹಿಂದುದೇಶಕ್ಕೆ ಬಂದ ಯೇಸು ಕ್ರಿಸ್ತನ ಶಿಷ್ಯರಾದ ಮಿಶನೆರಿಗಳು ಹಿಂದೂ ಜನರಿಗಾಗಿ ಎಷ್ಟು ಹಣ ವೆಚ್ಚ ಮಾಡುತ್ತಾರೆ, ಎಷ್ಟು ಪರಿಶ್ರಮ ಪಡುತ್ತಾರೆ, ಮುಖ್ಯತಾ ಈಗ ಕ್ಷಾಮವು ಪ್ರಸರಿಸುವ ಸೀಮೆಗಳಲ್ಲಿ ಎಷ್ಟು ಮಕ್ಕಳನ್ನು ತಮ್ಮ ಆಶ್ರಯಕ್ಕೆ ತಕ್ಕೊಂಡು ಸಾಕುತ್ತಾರೆ, ಎಷ್ಟು ಮಂದಿ ಕಂಗಾಲರಿಗೆ ಅನ್ನ ಹಾಕುತ್ತಾರೆ, ಎಷ್ಟು ಮಂದಿಗೆ ಏನಾದರೂ ಕೆಲಸ ಕೊಡಿಸಿ ಜೀವನದ ಮಾರ್ಗ ಮಾಡುತ್ತಾರೆ ಎಂಬುವದನ್ನು ವಿಚಾರಸ್ತರು ಆಲೋಚಿಸ ಬೇಕು. ಈ ಪರಿಶ್ರಮಕ್ಕೆ ದೇಶಸ್ಥರಿಂದ ಅವರು ಯಾವ ಪ್ರತಿಫಲ ಹೊಂದುತ್ತಾರೆ? ಈ ದೇಶಸ್ಥರಿಗಾಗಿ ಇಷ್ಟು ಹಣ ಖರ್ಚು ಮಾಡಿ ವಿದ್ಯೆ ಕಲಿಸ ಬೇಕು, ಇಲ್ಲವೆ ಒಂದಾನೊಂದು ಉದ್ದಿಮೆ ಕಲಿಸ ಬೇಕೆಂಬುವದು ಅವರಿಗೆ ಅಗತ್ಯವೇನು? ಇದಕ್ಕೆ ಯೇಸು ಕ್ರಿಸ್ತನ ಪ್ರೀತಿಯು ಮಿಶನೆರಿಗಳ ಮತ್ತು ಅವರನ್ನು ಇತ್ತಲಾಗೆ ಕಳುಹಿಸಿದ ಭಕ್ತರ ಹೃದಯಗಳಲ್ಲಿ ಒತ್ತಾಯ ಪಡಿಸುವದೇ ಕಾರಣವಲ್ಲದೆ ಮತ್ತೊಂದಲ್ಲಾ. ಮಿಶನೆರಿಗಳ ಸ್ವಾರ್ಥರಹಿತವಾದ ಪರಾರ್ಥ ಸೇವೆಯಿಂದ ಪ್ರಯೋಜನವನ್ನು ಪಡೆದ ಯಥಾರ್ಥವಂತರು ಕೃತಜ್ಞತಾಭಾವದಿಂದ ಅವರ ಸೇವೆಯನ್ನು ಮಾನ್ಯ ಮಾಡುತ್ತಾರೆಂಬುವದಕ್ಕೆ ಸಂದೇಹವಿಲ್ಲಾ. ಇಂಥಾ ಯಥಾರ್ಥವಂತರು ಯೇಸು ಕ್ರಿಸ್ತನ ಪ್ರೀತಿಯ ಬಲವು ಅವನ ಶಿಷ್ಯರೊಳಗೆ ಹ್ಯಾಗೆ ಪ್ರವರ್ತಿಸುತ್ತದೆ ಎಂದು ಚಿತ್ತಕ್ಕೆ ತಂದು ತಮ್ಮ ಹೃದಯವನ್ನು ತೆರದು ಯೇಸು ಕ್ರಿಸ್ತನ ಸುವಾರ್ತೆಯನ್ನು ಸ್ವೀಕರಿಸಿ ವಿಶ್ವಾಸಿಗಳಾಗಿ ಪರಾರ್ಥ ಸೇವೆಯಲ್ಲಿ ಪ್ರಯತ್ನಿಸುವವರಾಗ ಬೇಕು.

ದಕ್ಷಿಣ ಹಿಂದುಸ್ಥಾನದಲ್ಲಿ ರೂಢಿಯಾಗಿ ಎಣಿಸುವ

ಶಕಗಳ ಮೊಕಾಬಿಲೆ ಪಟ್ಟಿ.

ಕ್ರಿಸ್ತಶಕ A. D.		ಹಿಂದು ಶಕಗಳು				ಫಸಲಿ		ಮಹಮ್ಮದಿ ಹಿಜರಿ	
		ಚಾಂದ್ರಮಾನ		ಸೌರಮಾನ					
		ಸಂವತ್ಸರಗಳು	ಶಾಲಿವಾಹನ ಶಕ	ಮಲಯಾಳ ಕೊಲ್ಲಮ್					
1807	1867	ಪ್ರಭವ	1729	1789	982	1042	1216	1276	1222	1284
1808	1868	ವಿಭವ	1730	1790	983	1043	1217	1277	1223	1285
1809	1869	ಶುಕ್ಲ	1731	1791	984	1044	1218	1278	1224	1286
1810	1870	ಪ್ರಮೋದೂತ	1732	1792	985	1045	1219	1279	1225	1287
1811	1871	ಪ್ರಜೋತ್ಪತ್ತಿ	1733	1793	986	1046	1220	1280	1226	1288
1812	1872	ಆಂಗೀರಸ	1734	1794	987	1047	1221	1281	1227	1289
1813	1873	ಶ್ರೀಮುಖ	1735	1795	988	1048	1222	1282	1228-29	1290
1814	1874	ಭಾವ	1736	1796	989	1049	1223	1233	1230	1291
1815	1875	ಯುವ	1737	1797	990	1050	1224	1284	1231	1292
1816	1876	ಧಾತು	1738	1798	991	1051	1225	1285	1232	1293
1817	1877	ಈಶ್ವರ	1739	1799	992	1052	1226	1286	1233	1294-95
1818	1878	ಬಹುಧಾನ್ಯ	1740	1800	993	1053	1227	1287	1234	1296
1819	1879	ಪ್ರಮಾಥಿ	1741	1801	994	1054	1228	1288	1235	1297
1820	1880	ವಿಕ್ರಮ	1742	1802	995	1055	1229	1289	1236	1298
1821	1881	ವಿಷು	1743	1803	996	1056	1230	1290	1237	1299
1822	1882	ಚಿತ್ರಭಾನು	1744	1804	997	1057	1231	1291	1238	1300
1823	1883	ಸ್ವಭಾನು	1745	1805	998	1058	1232	1292	1239	1301
1824	1884	ತಾರಣ	1746	1806	999	1059	1233	1293	1240	1302
1825	1885	ಪಾರ್ಥಿವ	1747	1807	1000	1060	1234	1294	1241	1303
1826	1886	ವ್ಯಯ	1748	1808	1001	1061	1235	1295	1242	1304
1827	1887	ಸರ್ವಜಿತು	1749	1809	1002	1062	1236	1296	1243	1305
1828	1888	ಸರ್ವಧಾರಿ	1750	1810	1003	1063	1237	1297	1244	1306
1829	1889	ವಿರೋಧಿ	1751	1811	1004	1064	1238	1298	1245	1307
1830	1890	ವಿಕೃತಿ	1752	1812	1005	1065	1239	1299	1246	1308
1831	1891	ಖರ	1753	1813	1006	1066	1240	1300	1247	1309
1832	1892	ನಂದನ	1754	1814	1007	1067	1241	1301	1248	1310
1833	1893	ವಿಜಯ	1755	1815	1008	1068	1242	1302	1249	1311
1834	1894	ಜಯ	1756	1816	1009	1069	1243	1303	1250	1312

ಕ್ರಿಸ್ತಶಕ		ಸಂವತ್ಸರಗಳು	ಶಾಲಿವಾಹನ ಶಕ		ಮಲಯಾಳ ಕೊಲ್ಲಮ್		ಫಸಲಿ		ಮಹಮ್ಮದಿ ಹಿಜರಿ	
1835	1895	ಮನ್ಮಥ	1757	1817	1010	1070	1244	1304	1251	1313
1836	1896	ದುರ್ಮುಖಿ	1758	1818	1011	1071	1245	1305	1252	1314
1837	1897	ಹೇವಿಳಂಬಿ	1759	1819	1012	1072	1246	1306	1253	1315
1838	1898	ವಿಳಂಬಿ	1760	1820	1013	1073	1247	1307	1254	1316
1839	1899	ವಿಕಾರಿ	1761	1821	1014	1074	1248	1308	1255	1317
1840	1900	ಶಾರ್ವರಿ	1762	1822	1015	1075	1249	1309	1256	1318
1841	1901	ಪ್ಲವ	1763	1823	1016	1076	1250	1310	1257	1319
1842	1902	ಶುಭಕೃತು	1764	1824	1017	1077	1251	1311	1258	1320
1843	1903	ಶೋಭಕೃತು	1765	1825	1018	1078	1252	1312	1259	1321
1844	1904	ಕ್ರೋಧಿ	1766	1826	1019	1079	1253	1313	1260	1322
1845	1905	ವಿಶ್ವಾವಸು	1767	1827	1020	1080	1254	1314	1261-62	1323
1846	1906	ಪರಾಭವ	1768	1828	1021	1081	1255	1315	1263	1324
1847	1907	ಪ್ಲವಂಗ	1769	1829	1022	1082	1256	1316	1264	1325
1848	1908	ಕೀಲಕ	1770	1830	1023	1083	1257	1317	1265	1326
1849	1909	ಸೌಮ್ಯ	1771	1831	1024	1084	1258	1318	1266	1327-28
1850	1910	ಸಾಧಾರಣ	1772	1832	1025	1085	1259	1319	1267	1329
1851	1911	ವಿರೋಧಿಕೃತು	1773	1833	1026	1086	1260	1320	1268	1330
1852	1912	ಪರಿಧಾವಿ	1774	1834	1027	1087	1261	1321	1269	1331
1853	1913	ಪ್ರಮಾದೀಚ	1775	1835	1028	1088	1262	1322	1270	1332
1854	1914	ಆನಂದ	1776	1836	1029	1089	1263	1323	1271	1333
1855	1915	ರಾಕ್ಷಸ	1777	1837	1030	1090	1264	1324	1272	1334
1856	1916	ನಳ	1778	1838	1031	1091	1265	1325	1273	1335
1857	1917	ಪಿಂಗಳ	1779	1839	1032	1092	1266	1326	1274	1336
1858	1918	ಕಾಳಯುಕ್ತಿ	1780	1840	1033	1093	1267	1327	1275	1337
1859	1919	ಸಿದ್ಧಾರ್ಥಿ	1781	1841	1034	1094	1268	1328	1276	1338
1860	1920	ರೌದ್ರಿ	1782	1842	1035	1095	1269	1329	1277	1339
1861	1921	ದುರ್ಮತಿ	1783	1843	1036	1096	1270	1330	1278	1340
1862	1922	ದುಂದುಭಿ	1784	1844	1037	1097	1271	1331	1279	1341
1863	1923	ರುಧಿರೋದ್ಗಾರಿ	1785	1845	1038	1098	1272	1332	1280	1342
1864	1924	ರಕ್ತಾಕ್ಷಿ	1786	1846	1039	1099	1273	1333	1281	1343
1865	1925	ಕ್ರೋಧನ	1787	1847	1040	1100	1274	1334	1282	1344
1866	1926	ಕ್ಷಯ	1788	1848	1041	1101	1275	1335	1283	1345

ಸೂ ಚ ನೆ: 1. ಕ್ರಿಸ್ತಶಕವೆಂಬ ಇಸವಿ ಜನವರಿ 1ನೇ ತಾರೀಕಿಗೆ ಪ್ರಾರಂಭವಾಗುವದು.

2. ಸಂವತ್ಸರವೂ ಶಾಲಿವಾಹನ ಶಕವೂ (ಒಂದೇ ದಿವಸ) ಮಾರ್ಚಿ-ಎಪ್ರಿಲಲ್ಲಿ ಪ್ರಾರಂಭವಾಗುವದು

3. ಮಲಯಾಳ ಕೊಲ್ಲಮ್ ಎಂಬ ಕೇರಳ ಶಕವು ಸಪಟಂಬರ ತಿಂಗಳಲ್ಲಿ "

4. ಫಸಲಿ ಜುಲಾಯಿ 1ನೇ ತಾರೀಕಿಗೆ "

5. ಮಹಮ್ಮದಿ ಹಿಜರಿ ಸಾಮಾನ್ಯವಾಗಿ ವರ್ಷ ವರ್ಷ ೧೫ ದಿವಸಕ್ಕೆ ಮುಂದಾಗಿ "

ರತ್ನತ್ರಯ.

ರತ್ನತ್ರಯವಂದರೆ ಮೂರು ರತ್ನಗಳು. ನೀಲ, ಪದ್ಮರಾಗ, ವಜ್ರ, ಮೌಕ್ತಿಕ, ಪ್ರವಾಳ ಎಂಬಿವೇ ಪಂಚರತ್ನಗಳೆಂದೂ ವಜ್ರ ವೈದೂರ್ಯ, ಗೋಮೇಧಿಕ, ಪುಷ್ಯ ರಾಗ, ನೀಲ, ಮರಕತ, ಮಾಣಿಕ್ಯ, ವಿದ್ರುಮ, ಮೌಕ್ತಿಕ ಎಂಬಿವೇ ಪ್ರಖ್ಯಾತ ನವರತ್ನ ಗಳೆಂದೂ ವಾಡಿಕೆಯಾಗಿ ಹೇಳುತ್ತಾರಷ್ಟೇ. ಹಾಗಂಬಾಗ ರತ್ನತ್ರಯವೆಂದು ಅನ್ನು ವದು ಯಾಕೆ ಎಂದು ಒಬ್ಬರು ಪ್ರಶ್ನೆ ಮಾಡ ಬಹುದು. ಪಂಚರತ್ನಗಳೂ ನವರತ್ನ ಗಳೂ ಭೂಗರ್ಭದೊಳಗೆ ಸಿಕ್ಕುವ ಪಾಷಾಣಗಳು. ಅವುಗಳಲ್ಲಿ ಹೊಳೆಯುವ ವರ್ತಿ ಯನ್ನೂ ಕಾಂತಿಯನ್ನೂ ನೋಡಿ ಮನುಷ್ಯರು ಅವುಗಳಿಗೆ ಇಂತಿಷ್ಟು ಮೌಲ್ಯವೆಂದು ನಿರ್ಣಯಿಸಿದರು. ಇಂಥಾ ಪಾಷಾಣದ ಹರಳುಗಳು ನಮ್ಮಲ್ಲಿ ಎಷ್ಟಿದ್ದಾಗ್ಯೂ ನಮಗೆ ಅನುಪತ್ಯ ಬಂದ ಕಾಲದಲ್ಲಿ ಹಸಿವೆ ಬಾಯಾರಿಕೆಗಳನ್ನು ತಣಿಸಲಾರವು; ರೋಗರುಜನೆಗಳನ್ನು ವಾಸಿ ಮಾಡಲಾರವು. ಹೀಗೊಂದು ಕಥೆ ಹೇಳುತ್ತಾರೆ: ಒಬ್ಬಾ ನೊಬ್ಬ ಅರಬಿ ಮರುಸ್ಥಲದಲ್ಲಿ ಪಯಣ ಮಾಡುವವನು ದಾರಿಯ ಹೊಲಬು ತಪ್ಪಿ ಕಂಡಕಡೆ ಅಲೆದು ತೊಳಲಿ ಬಾಯಾರಿಕೆಯಿಂದ ಕಂಗೆಟ್ಟು ಒಂದು ಕುಡುತೆ ನೀರು ಎಲ್ಲಿ ಸಿಕ್ಕುವದೆಂದು ಹಲುಬುತ್ತಾ ಬಹುದೂರದಲ್ಲಿ ಒಂದು ಗುಡಾರವನ್ನು ಕಂಡು ಹರ್ಷಿತನಾಗಿ ಅಲ್ಲಿಗೆ ಬಂದು ಒಳಗೆ ಹೊಗಲು ಹೇರಳ ಭರಣಿಗಳು ಸಾಲಾಗಿ ಇಟ್ಟಿ ರುವದು ಕಂಡನು. ಒಂದಾನೊಂದು ಭರಣಿಯಲ್ಲಿ ನೀರಿರ ಬಹುದೆಂದು ಲವಲವಿ ಕೆಯಿಂದ ಅವನು ಒಂದೊಂದೇ ಭರಣಿಯ ಬಾಯಿ ತೆರೆದು ನೋಡಿದರೆ ಒಂದರಲ್ಲಿ ನೀಲಗಳು, ಒಂದರಲ್ಲಿ ವಿದ್ರುಮಗಳು ಹೀಗೆ ಎಲ್ಲಾ ಭರಣಿಗಳಲ್ಲಿಯೂ ಪಾಷಾಣ ಗಳೇ ತುಂಬಿರುವದನ್ನು ಕಂಡನು. ಇಷ್ಟು ಅಮೂಲ್ಯ ರತ್ನಾದಿಗಳು ಅಕಸ್ಮಾತ್ತಾಗಿ ಅವನಿಗೆ ಹಸ್ತಗತವಾದದ್ದಕ್ಕೆ ಅವನಿಗೆ ಹರ್ಷವಾಗಲಿಲ್ಲಾ. ಅಯ್ಯೋ, ಈ ಪಾಷಾ ಣಗಳು ನನಗ್ಯಾಕೆ? ನಾನು ಬಾಯಾರಿಕೆಯಿಂದ ಸಾಯುತ್ತೇನೆ; ಪ್ರಾಣ ಉಳಿಸಿ ಕೊಳ್ಳುತ್ತೇನೆಂದರೆ ಒಂದರಲ್ಲಿಯೂ ಒಂದು ಗುಟುಕು ನೀರು ಸಿಕ್ಕದೆ ಹೋಯಿತಲ್ಲಾ ಎಂದು ಹಲುಬುತ್ತಾ ಮೃತಿಗೆಟ್ಟನಂತೆ.

ರತ್ನಗಳು ನಮ್ಮ ಕಷ್ಟಕಾಲಕ್ಕೆ ಒದಗುವವುಗಳಲ್ಲಾ; ನಾಳೆ ನಾವು ಆಚೆಗೆ ತೆರ ಳುವಾಗ ಸಂಗಡ ಬರುವವುಗಳೂ ಅಲ್ಲಾ; ಅವುಗಳನ್ನು ಸಂಪಾದಿಸುವದು ಕರ ಕಷ್ಟವು, ಸಂಪಾದಿಸಿದ ಮೇಲೆ ಜೋಕೆ ಮಾಡುವದೂ ಕಷ್ಟವು; ಎಲ್ಲಿ ಕಳೆದು ಹೋ ಗುತ್ತಾವೋ ಎಲ್ಲಿ ಕಳ್ಳರುಕಾಟಕರು ಕದ್ದು ಒಯ್ಯುತ್ತಾರೋ ಎಂದು ಅನುಗಾಲವೂ ಚಿಂತೆ ಮಾಡಬೇಕು. ಇಂಥಾ ರತ್ನಗಳೇ ಇನ್ನೂ ಬೇರೆ ಇದ್ದಾವೆ ಎಂಬುವ ಅರ್ಥ ದಲ್ಲಿ ರತ್ನತ್ರಯವೆಂದು ನಾನು ಹೇಳಲಿಲ್ಲಾ. ನಾನು ಹೇಳುವ ರತ್ನಗಳು ನೆಲದಲ್ಲಿ ಸಿಕ್ಕುವ ಪಾಷಾಣದ ಹರಳುಗಳಲ್ಲಾ. ಅವು ಅಲೌಕಿಕವಾದವುಗಳು, ರತ್ನ ಪರೀಕ್ಷ ಕರು ಬೆಲೆ ಕಟ್ಟ ಕೂಡದಷ್ಟು ಅಮೌಲ್ಯವಾದವುಗಳು; ಅವನ್ನು ನಾವಿಲ್ಲಿ ಸಂಪಾದಿ ಸಿಟ್ಟುಕೊಂಡೆವಾದರೆ ಇಹದಲ್ಲಿಯೂ ಪರದಲ್ಲಿಯೂ ನಾವೇ ಧನ್ಯರು. ಆ ರತ್ನಗಳು ಯಾವವು ಅಂದರೆ: ೧ನೇದು ಸಂಪೂರ್ಣಶಾಸ್ತ್ರ, ೨ನೇದು ಸಂಪೂರ್ಣಜ್ಞಾನ, ೩ನೇದು ಸಂಪೂರ್ಣಚಾರಿತ್ರ.

೧. ನಮಗೆ ಶಾಸ್ತ್ರ ಬೇಕೆಂಬುವದಕ್ಕೆ ಎಲ್ಲವರೂ ಒಪ್ಪುವರು. ಸುಭಾಷಿತ ಶ್ಲೋಕ ಹೇಳುತ್ತದೆ: ಅನೇಕ ಸಂಶಯೋಚ್ಛೇದಿ ಪರೋಕ್ಷಾರ್ಥಸ್ಯ ದರ್ಶಕಂ | ಸರ್ವಸ್ಯ ಲೋಚನಂ ಶಾಸ್ತ್ರಂ ಯಸ್ಯ ನಾಸ್ತ್ಯಂಧ ಏವಸಃ | ಅಂದರೆ ಮನುಷ್ಯರಿಗಿರುವ ಅನೇಕ ಸಂಶಯಗಳನ್ನು ಕಡಿದು ಪರೋಕ್ಷವಾದ ಪ್ರಯೋಜನವನ್ನು ತೋರ್ಪಡಿಸುವ ಕಣ್ಣಾಗಿರುವ ಶಾಸ್ತ್ರವು ಯಾವನಿಗಿಲ್ಲವೋ ಅವನೇ ಕುರುಡನು. ಶಾಸ್ತ್ರವೆಂಬ ದೃಷ್ಟಿ ಇಲ್ಲದ ಕುರುಡರು ಲೋಕದಲ್ಲಿ ವ್ಯಾಪಿಸಿರುವ ಅಜ್ಞಾನವೆಂಬ ಕತ್ತಲಲ್ಲಿ ಕಣ್ಣು ಕಾಣದೆ ಮಾರ್ಗ ತೋರಿಸುವ ದೀಪವಿಲ್ಲದೆ ತಡವುತ್ತಾ ಎಡವುತ್ತಾ ಬೀಳುವರು; ತಾವು ಸೇರ ತಕ್ಕ ಗೊತ್ತಿಗೆ ಮುಟ್ಟರು.

ಅಂತಃಚಕ್ಷುವಾಗಿರತಕ್ಕ ಶಾಸ್ತ್ರವು ಅಗತ್ಯವೆಂದು ಪೂರ್ವದ ಮನುಮುನಿಗಳು ತಿಳಿದು ತಮ್ಮ ಬುದ್ಧಿ ಸೂಚಿಸಿದಂತೆ ಒಂದೊಂದು ಶಾಸ್ತ್ರವನ್ನು ರಚಿಸಿದರು. ಆದರೆ ಲೋಕದಲ್ಲಿ ತಲೆಗೊಂದು ಬುದ್ಧಿಯಾದದರಿಂದ ಒಬ್ಬೊಬ್ಬರ ಶಾಸ್ತ್ರವು ಒಂದೊಂದು ತರವಾಗಿ ಭಿನ್ನಭಿನ್ನವಾದ ಹೇರಳ ಶಾಸ್ತ್ರಗಳಾದವು. ಒಂದೂರಿನಿಂದ ಇನ್ನೊಂದೂರಿಗೆ ಹೋಗುವವನು ಸ್ವಲ್ಪ ದೂರ ನಡೆದ ಮೇಲೆ ಬಲಕ್ಕೆ ಎಡಕ್ಕೆ ಮುಂದಕ್ಕೆ ತೊಲಗುವ ಬೇರೆ ಬೇರೆ ದಾರಿಗಳನ್ನು ಕಂಡರೆ ಯಾವ ದಾರಿಯಲ್ಲಿ ಹೋಗಲೆಂದು ತಿಳಿಯದೆ ತಬ್ಬಿಬ್ಬಾಗುವಂತೆ ಆ ಲೋಕಕ್ಕೆ ಪಯಣ ಮಾಡುವ ಮನುಷ್ಯನು ಶಾಸ್ತ್ರಗಳಗೊಂದಳದಿಂದ ನಿಜವಾದ ಮಾರ್ಗದ ಅರುಹು ಇಲ್ಲದೆ ತಲ್ಲಣಗೊಳ್ಳ ಬೇಕಾಗುತ್ತದೆ. ಪೂರ್ವಿಕರು ರಚಿಸಿದ ಶಾಸ್ತ್ರಗಳು ಸಾಲದೆಂದು ಇತ್ತಲಾಗೆ ಕೆಲವರು ಇಂಗ್ಲಿಷಿನಲ್ಲಿ ಒಳ್ಳೇ ಪಾಠಿತರಾದವರು ನೂತನ ಮತವನ್ನು ಕಲ್ಪಿಸುವದಕ್ಕೆ ಪ್ರಯತ್ನ ಮಾಡುತ್ತಾರೆ. ಆದರೆ ಪೂರ್ವದವರಂತೆ ಇವರೂ ಸ್ವಬುದ್ಧಿಯ ಆಧಾರದ ಮೇಲೆ ಪಾರಮಾರ್ಥಿಕ ವಿಷಯಗಳನ್ನು ಆಲೋಚಿಸುವವರಾದದರಿಂದ ನಿಜ ಮಾರ್ಗವನ್ನು ಕಾಣಲಾರರು. ದಿವ್ಯನೀರು ಸಮೀಪದಲ್ಲೇ ಇರುವಲ್ಲಿ ಅದನ್ನು ಬಿಟ್ಟು ಧಾವತಿ ಮಾಡಿ ಭಾವಿ ಅಗಿದು ಸವುಳು ನೀರು ಕುಡಿಯುವವನು ಹೆಡ್ಡನಲ್ಲವೇ? ಹಾಗೆಯೇ ದೇವರು ಪ್ರಕಟಿಸಿದ ಸತ್ಯವೇದವು ನಮಗಿರುವಾಗ ನವೀನ ಮತವನ್ನು ಸಂಕಲ್ಪಿಸುವದ್ಯಾಕೆ? ಶುದ್ಧ ನೀರು ಕುಡಿಯಲಿಕ್ಕೆ ಸಿಕ್ಕುವಾಗ ಅದನ್ನು ಬಿಟ್ಟು ಪೂರ್ವದವರು ಕುಡಿಯುತ್ತಾ ಬಂದ ಸವುಳು ನೀರು ಯಾತಕ್ಕೆ ಕುಡಿಯ ಬೇಕು?

ದೇವರು ಪ್ರಕಟಿಸಿದ ಸತ್ಯವೇದವು ಪೂರ್ವಾಪರ ವಿರೋಧವಿಲ್ಲದಂಥಾ ಮನುಷ್ಯರಿಗೆ ದೇವರ ದಯೆಯನ್ನು ಕೊಡಿಸುವಂಥಾ ಅಂಧಕಾರವನ್ನು ಪರಿಹರಿಸಿ ಸ್ವಯಂ ಪ್ರಕಾಶಜ್ಯೋತಿಯಾಗಿರುವಂಥಾ ಗ್ರಂಥವಾಗಿದೆ. ಅದರಲ್ಲಿ ಅರುಹಿಸಿದ ಮುಖ್ಯ ವಿಷಯಗಳು ಯಾವವೆಂದರೆ: ನಾವು ವಸ್ತ್ಯಾಗಿರುವ ಭೂಲೋಕವೂ ಮೇಲಣ ಅಂತರಿಕ್ಷದಲ್ಲಿ ಹೊಳೆಯುವ ಸೂರ್ಯ ಚಂದ್ರ ತಾರೆಗಳೂ ಯಾವತ್ತೂ ದೇವರ ನಿರ್ಮಾಣವು. ಇವೆಲ್ಲವನ್ನು ದೇವರು ತನ್ನ ಮಹಿಮೆಗಾಗಿ ಉಂಟು ಮಾಡಿ ಸಲಹುತ್ತಾ ಬರುತ್ತಾನೆ. ಆದರೆ ಈ ಬಹು ಸುಂದರವಾದ ವಿಶ್ವದಲ್ಲಿ ಒಂದು ಕಳಂಕವದೆ. ಭೂಲೋಕದಲ್ಲಿರುವ ಚರಾಚರ ಭೂತಗಳಿಗೆ ಧೊರೆಯಾಗಿ ದೇವರು ನಿರ್ಮಿಸಿದ ಮನುಷ್ಯನು ಒಳ್ಳೇತನವನ್ನೂ ಪುಣ್ಯವನ್ನೂ ಹೋಗಲಾಡಿಸಿಕೊಂಡು ದೇವರ ದೃಷ್ಟಿಯಲ್ಲಿ ಪಾಪಿಯಾಗಿದ್ದಾನೆ. ಅರಸ್ಥಾನದ ಕಟ್ಟಪ್ಪಣೆ ಮೀರಿದವನು ದಂಡಣೆಗೆ

ಪಾತ್ರನಾಗುವಂತೆಯೇ ದೇವರ ಆಜ್ಞೆ ಮೀರಿ ಪಾಪಿಯಾದ ಮನುಷ್ಯನು ಮರಣಕ್ಕೂ ನಿತ್ಯ ನರಕಯಾತನೆಗೂ ಗುರಿಯಾಗಿದ್ದಾನೆ. ಪಾಪದ ದಂಡಣೆಯಾಗಿ ಇಹದಲ್ಲಿಯೇ ನಾನಾ ರೋಗರುಜನೆಗೂ ಭಂಗಭವಣೆಗೂ ಒಳಪಟ್ಟಿದ್ದಾನೆ. ಸದಾ ಅವನ ಹೃದಯದಲ್ಲಿ ಕಳವಳವೂ ಭಯವೂ ತುಂಬಿಯದೆ; ಸ್ವಾರ್ಥಪರನಾಗಿಯೂ ಪರಾರ್ಥಹೀನನಾಗಿಯೂ ಸಮಸ್ತ ಕೃತ್ಯಗಳನ್ನು ಮಾಡುತ್ತಾನೆ. ಹೆಣ ಹಪ್ಪು ಬಿದ್ದಿರುವ ಹಾಳು ಭಾವಿಗಳಿಂದ ಹಡಕಿ ನಾತವು ಹೊರಡುವಂತೆ ಮನುಷ್ಯನ ಹೃದಯದಿಂದ ನಾನಾ ದುರಾಲೋಚನೆಗಳು ಉದ್ಭವವಾಗಿ ಮುಖದ್ವಾರದಿಂದ ಹೊರಗೆ ಬರುತ್ತವೆ. ಸರ್ವೇ ಸಮಸ್ತರೂ ದೇಶಭಾಷೆ ವರ್ಣಭೇದಗಳಿಲ್ಲದೆ ದೇವರ ದೃಷ್ಟಿಯಲ್ಲಿ ಪಾಪಿಗಳು. ತನಗೆ ಮಾರ್ಮಲೆತ ಪಾಪಿ ಜನರನ್ನು ಕ್ಷಣ ಮಾತ್ರದಲ್ಲಿ ನಾಶನ ಮಾಡಬಹುದಾದರೂ ದೇವರು ಕರುಣಾಳು, ಪಾಪಿಯಾದ ಮನುಷ್ಯನನ್ನು ನೀತಿಯ ಪ್ರಕಾರ ನಾಶನ ಮಾಡಲು ಚಿತ್ತಯಿಸದೆ ರಕ್ಷಣ್ಯ ಮಾಡುವ ತನ್ನ ದಯವನ್ನು ಪ್ರಕಟಿಸುವವನಾದನು. ದೇವರು ಯೇಸು ಕ್ರಿಸ್ತನಲ್ಲಿದ್ದು ಲೋಕದವರು ಮಾಡಿದ ಅಕ್ರಮಗಳನ್ನು ಅವರ ಲೆಕ್ಕಕ್ಕೆ ಹಾಕದೆ ಅವರನ್ನು ತನಗೆ ಸಂಧಾನ ಮಾಡಿಕೊಳ್ಳಲು ಚಿತ್ತಯಿಸಿದನು. ಯೇಸು ಕ್ರಿಸ್ತನಲ್ಲಿ ವಿಶ್ವಾಸವಿಡುವವರು ನಾಶನವಾಗದೆ ನಿತ್ಯಜೀವವನ್ನು ಹೊಂದುವ ಬಗ್ಯೆ ದೇವರು ತನ್ನ ಏಕಜ ಕುಮಾರನಾದ ಯೇಸು ಕ್ರಿಸ್ತನನ್ನು ಈ ಲೋಕಕ್ಕೆ ಕಳಿಸಿದನು. ಆತನು ನಮ್ಮ ಸಮಸ್ತರ ಪಾಪಗಳ ಭಾರವನ್ನು ತನ್ನ ಮೇಲೆ ವಹಿಸಿಕೊಂಡು ನಮ್ಮ ಹೊಣೆಯಾಗಿ ಮರಣವನ್ನು ಅನುಭವಿಸಿ ಮೂರನೇ ದಿನದಲ್ಲಿ ಉತ್ಥಾನವಾಗಿ ಮೇಲ್ಲೋಕವನ್ನು ಅಡರಿ ಅಲ್ಲಿ ಈಗಲೂ ತನ್ನನ್ನು ನಂಬುವ ಭಕ್ತರಿಗೆ ಪಾಪಗಳ ವಿಮೋಚನೆಯನ್ನೂ ಪರಿಶುದ್ಧತ್ವವನ್ನೂ ಕೊಡುವ ಕಾರ್ಯಕರ್ತನಾಗಿದ್ದಾನೆ. ಇನ್ನು ಯೇಸು ಕ್ರಿಸ್ತನು ಸರ್ವೇ ಸಮಸ್ತರನ್ನು ನ್ಯಾಯ ಪ್ರಕಾರ ವಿಚಾರಣೆ ಮಾಡಿ ಅವರವರ ಕೃತ್ಯಗಳಿಗೆ ಯೋಗ್ಯವಾದ ಪ್ರತಿಫಲವನ್ನು ಕೊಡುವದಕ್ಕಾಗಿ ಪುನಹಾ ಈ ಭೂಲೋಕಕ್ಕೆ ಬರುತ್ತಾನೆ. ಆ ದಿನವು ಬರುವದರೊಳಗೆ ಮನುಷ್ಯರು ಅಂತರ್ಯವನ್ನು ಪಲ್ಲಟಿಸಿ ತನ್ನಲ್ಲಿ ನಂಬುವವರಾಗಿ ರಕ್ಷಣೆಯನ್ನು ಪಡೆಯುವವರಾಗಲೆಂದು ಸುವಾರ್ತೆಯನ್ನು ಸರ್ವರಿಗೂ ಸಾರಿ ಹೇಳಿಸುತ್ತಾನೆ. ಸತ್ಯವೇದದಲ್ಲಿರುವ ರಕ್ಷಣೋಪಾಯವು ಇದೇ. ಮನುಷ್ಯರ ಆತ್ಮಿಕ ಯೋಗಕ್ಷೇಮಕ್ಕೆ ಬೇಕಾದ ಸದ್ಬೋಧನೆ ಇದೇ; ಪಾಪಿಗಳಿಗೆ ಧೈರ್ಯ ಕೊಡುವ ಸುವಾರ್ತೆ ಇದೇ. ಪಾಪರೋಗವನ್ನು ವಾಸಿ ಮಾಡುವ ಔಷಧ ಇದೇ.

೨. ಎರಡನೇ ರತ್ನವು ಸಂಪೂರ್ಣಜ್ಞಾನವು. ಗಣಿತ ವ್ಯಾಕರಣ, ಜ್ಯೋತಿಷ, ವೈದ್ಯಮಾಂಸೆ ಮೊದಲಾದದ್ದು ತಿಳಿಯುವದೂ ವಿಜ್ಞಾನವು. ಆದರೆ ಅದು ಲೌಕಿಕ ತಿಳಿವು, ಬುದ್ಧಿವರ್ಧನೆ ಮಾಡುವಂಥಾದ್ದು. ಅದೂ ನಮಗೆ ಬೇಕಾದದ್ದೇ; ನಾವು ಪಶುಗಳಂತೆ ಕೇವಲ ಮಂದಮತಿಗಳಾಗಿರಬಾರದು. ನಾವು ಎಷ್ಟು ಲೌಕಿಕ ಜ್ಞಾನ ಪಡೆದರೂ ಈ ಲೋಕದ ಪೂರ್ತಿಗೆ ಮಾತ್ರವಾಯಿತು. ಇದಕ್ಕಿಂತ ಉತ್ತಮವಾದ ಜ್ಞಾನವು ನಮಗೆ ಬೇಕು. ಈ ದೇಶದ ಶಾಸ್ತ್ರಕರ್ತರು ತಾನು ಬೇರೆ ದೇಹೇಂದ್ರಿಯಗಳು ಬೇರೆ ಎಂದೂ, ದೇಹೇಂದ್ರಿಯಗಳು ಬಾಹ್ಯಸ್ಪರ್ಶಗಳಾದ ವಿಷಯಗಳನ್ನು ಬಯಸುವದರಿಂದ ಎಲ್ಲಾ ಕ್ರಿಯೆಗಳಾಗುತ್ತವೆ, ಆ ಕ್ರಿಯೆಗಳಿಗೆ ತಾನು ಬಾಧ್ಯ

ನಲ್ಲವೆಂದೂ ತಿಳಿಯುವದೂ ಮಹಾಜ್ಞಾನವು; ಆ ಜ್ಞಾನವು ಮೂಡಿದವನಿಗೆ ಕರ್ಮ ಲೇಪನವೂ ಕರ್ಮಫಲವೂ ಇಲ್ಲಾ; ಅವನೇ ಮೋಕ್ಷಾರ್ಥಿಯು ಎಂದೂ ಹೇಳು ತ್ತಾರೆ. ಇದು ಕೇವಲ ಅಸಂಗತ ಬೋಧೆ. ಒಬ್ಬ ತಾನು ಬೇರೆ ದೇಹೇಂದ್ರಿಯಗಳು ಬೇರೆ ಎಂದು ಆಲೋಚಿಸುವದಕ್ಕೆ ಎಷ್ಟು ಪ್ರಯತ್ನ ಮಾಡಿದರೂ ಆಗದು. ದೇಹ ದಿಂದಾಗುವ ಕೃತ್ಯಗಳಿಗೆ ತಾನು ಬಾಧ್ಯನಲ್ಲವೆಂದು ನೆನಸುವಾಗಲೇ ನೀನೇ ನಿನ್ನ ಕೃತ್ಯಗಳಿಗೆ ಹೊಣೆ, ನೀನೇ ಶಿಕ್ಷೆಗೆ ಯೋಗ್ಯನೆಂದು ಮನಸ್ಸಾಕ್ಷಿ ನುಡಿಯುತ್ತದೆ. ಅದಲ್ಲದೆ ಸರಕಾರದವರೂ ಅವನವನ ಕೃತ್ಯಗಳಿಗೆ ಅವನವನನ್ನೇ ಹೊಣೆ ಮಾಡಿ ದಂಡನೆ ವಿಧಿಸುತ್ತಾರೆ. ಆದದರಿಂದ ಆ ಜ್ಞಾನವು ಮೋಸದ ಜ್ಞಾನವು, ಹಾನಿಕರ ವಾದ ಜ್ಞಾನವು. ಶುದ್ಧವಾದ ಕ್ಷೇಮಕರವಾದ ಜ್ಞಾನವು ಯಾವದು? ನಾವು ಮೊ ದಲು ಹೇಳಿದ ಸತ್ಯವೇದದಲ್ಲಿ ಪ್ರಕಟಿಸಿಕೊಂಡ ಒಬ್ಬನೇ ಜೀವವುಳ್ಳ ದೇವರಾದ ಯೆಹೋವನನ್ನೂ ಆತನು ಈ ಲೋಕಕ್ಕೆ ಕಳಿಸಿದ ಒಬ್ಬನೇ ರಕ್ಷಕನಾದ ಯೇಸು ಕ್ರಿಸ್ತನನ್ನೂ ತಿಳಿದುಕೊಳ್ಳುವದೇ. ದೇವರು ಪಾಪಿಗಳಾದ ಮನುಷ್ಯರ ಮೇಲೆ ಅಪಾರ ಪ್ರೀತಿ ಇಟ್ಟು ಅವರನ್ನು ರಕ್ಷಣ್ಯ ಮಾಡುವದಕ್ಕೆ ಯೇಸು ಕ್ರಿಸ್ತನನ್ನು ಈ ಲೋಕಕ್ಕೆ ಕಳುಹಿಸಿದನು; ಒಬ್ಬ ಪಾಪಿಯು ಪಶ್ಚಾತ್ತಾಪ ಪಟ್ಟು ಪಾಪಮಾರ್ಗವನ್ನು ಹೇವರಿಸಿ ತೊರೆದು ತನ್ನ ಬಳಿಗೆ ತಿರುಗುವದರಲ್ಲಿಯೇ ದೇವರು ಆನಂದ ಪಡುತ್ತಾನೆ ಎಂದು ಸುವಾರ್ತೆಯಲ್ಲಿ ಹೇಳಿರುವದನ್ನು ತಿಳಿಯ ಬೇಕು.

ತಿಳಿಯುವಿಕೆಗೆ ನಂಬಿಗೆಯೂ ಕೂಡ ಬೇಕು. ಒಬ್ಬಾಸೊಬ್ಬ ವೈದ್ಯನು ಬಹಳ ಗಟ್ಟಿಗನಿದ್ದಾನೆ, ಎಂಥೆಂಥಾ ರೋಗಗಳನ್ನೂ ವಾಸಿ ಮಾಡುತ್ತಾನೆಂದು ತಿಳಿದರೆ ಸಾ ಲದು; ಅವನ ಸಾಮರ್ಥ್ಯವನ್ನು ನಂಬಿ ನಮ್ಮ ದೇಹದ ಅವಸ್ಥೆಯನ್ನು ಅವನಿಗೆ ಅರಿಕೆ ಮಾಡಿ ನಂಬಿಕೆಯಿಂದ ನಮ್ಮನ್ನು ಆತನ ಚಿಕಿತ್ಸಾಕ್ರಮಕ್ಕೆ ಒಪ್ಪಿಸಿ ಅವನು ಕೊಡುವ ಔಷಧವನ್ನು ಸೇವಿಸಿದರೆ ನಾವು ಕ್ಷೇಮ ಪಡಕೊಳ್ಳುವೆವು. ಹಾಗೆಯೇ ನಾವು ದೇವರ ರಕ್ಷಣ್ಯ ಮಾರ್ಗವನ್ನು ತಿಳಿದ ಮೇಲೆ ಧೈರ್ಯ ಪಟ್ಟು ಪಾಪರೋಗ ವನ್ನು ಪರಿಹರಿಸಿಕೊಳ್ಳುವದಕ್ಕೆ ವಿಶ್ವಾಸಪೂರ್ವಕವಾಗಿ ದೇವರ ಸನ್ನಿಧಾನಕ್ಕೆ ಬಂದು: ತಂದೆಯೇ, ಪಾಪಿಯಾದ ನನ್ನನ್ನು ರಕ್ಷಿಸು ಎಂದು ಪ್ರಾರ್ಥಿಸ ಬೇಕು. ವಿಶ್ವಾಸದಿಂ ದ ಬೇಡುವವನು ಪಾಪವಿಮೋಚನೆಯನ್ನು ಹೊಂದುತ್ತಾನೆ; ಹೃದಯದಲ್ಲಿ ಸಮಾ ಧಾನವನ್ನು ಅನುಭವಿಸುತ್ತಾನೆ. ದೇವರ ಕೃಪೆಗೆ ಪಾತ್ರನಾಗಿ ದೇವರ ಪುತ್ರತ್ವದ ಅಧಿಕಾರವನ್ನು ಪಡೆದು ಆನಂದವಾಗಿರುವನು.

೩. ಮೂರನೇ ರತ್ನವು ಸಂಪೂರ್ಣ ಚಾರಿತ್ರ ಅಂದರೆ ಒಳ್ಳೇ ನಡತೆ. ಸಂಪೂ ರ್ಣಶಾಸ್ತ್ರವುಳ್ಳವನಾಗಿ ಅದರ ಸಾರಾಂಶವನ್ನು ತಿಳಿದು ನಂಬಿದವನೇ ಒಳ್ಳೇ ನಡತೆ ವಂತನಾಗ ಬಹುದು. ಒಳ್ಳೇ ನಡತೆ ಅಂದರೇನು? ಬಡವರನ್ನೂ ನಿರ್ಗತಿಕರನ್ನೂ ಅವರವರ ವಿಪತ್ತಿನಲ್ಲಿ ಪರಾಮರಿಸಿ ತನ್ನಿಂದಾದ ಮಟ್ಟಿಗೆ ದಾನಧರ್ಮ ಮಾಡುವ ದು. ರೋಗರುಜನೆಯವರಿಗೆ ಔಷಧವನ್ನೂ ಅನುಪಾನವನ್ನೂ ಕೊಡಿಸಿ ಆರೈಕೆ ಮಾಡುವದು. ಇದು ಒಂದು ಅಂಶ. ತನ್ನ ಹೃದಯದಲ್ಲಿ ನಾನಾ ದುರಾಶೆಗಳೂ ದುರ್ಮೋಹವೂ ಎದ್ದೇಳದಂತೆ ಜಾಗರೂಕನಾಗಿ ಲೋಕದಿಂದ ತನ್ನನ್ನು ಕಳಂಕವಿಲ್ಲ ದವನಾಗಿ ಕಾಪಾಡಿಕೊಳ್ಳುವದು. ಇದು ಎರಡನೇ ಅಂಶ. ಅದಲ್ಲದೆ ದೇವರು

ತನಗೆ ಪಾಲಿಸಿದ ಸಂಪೂರ್ಣಶಾಸ್ತ್ರವನ್ನು ದಿನನಿತ್ಯವೂ ಪಾರಾಯಣ ಮಾಡುತ್ತಾ ದೇವರು ತನಗೆ ಯಾವ ಅಪ್ಪಣೆ ಕೊಟ್ಟಿದ್ದಾನೆ, ಆತನ ಚಿತ್ತವೇನು ಎಂದು ಪದೇ ಪದೇ ನೆನವರಿಕೆ ಮಾಡಿ ದೇವರ ಪ್ರಾರ್ಥನೆಯಲ್ಲಿ ನೆಲೆಗೊಂಡು ಆತನಲ್ಲಿ ಸ್ಥಿರವಾದ ವಿಶ್ವಾಸವನ್ನೂ ಭಕ್ತ್ಯಿಯನ್ನೂ ಇರಿಸಿ ಆತನು ವಿಶ್ವಾಸಿಗಳಿಗೆ ಕೊಡಿಸುವ ಪರಂಧಾಮವನ್ನು ನಿರೀಕ್ಷಿಸುತ್ತಾ ಇರುವದು. ಇದು ಮೂರನೇ ಅಂಶ. ಈ ಮೂರು ಅಂಶಗಳೂ ಏಕವಾಗಿ ಸಂಪೂರ್ಣ ನಡಾವಳಿಯಾಗ ಬೇಕಾದರೆ ದೇವರ ಬಲವು ಬೇಕು; ಸ್ವಮನೋನಿರ್ಧಾರವೂ ಧೃತಿಯೂ ಸಾಲದು. ಆದದರಿಂದ ದೇವರ ಪ್ರಾರ್ಥನೆಯಲ್ಲಿ ನೆಲೆಗೊಂಡು ಪ್ರತಿದಿನವೂ ಆತನಿಂದ ಬಲವನ್ನು ಪಡಕೊಂಡು ಸಚ್ಚರ್ಯೆಯಲ್ಲಿ ನಿಷ್ಠಿತನಾಗಿರುವವನೇ ಪರಮ ಭಕ್ತನು. ಈ ರತ್ನವಿದ್ದರೆ ಹಿಂದೆ ಹೇಳಿದ ರತ್ನಗಳೆರಡೂ ಉಂಟೆಂಬುವದಕ್ಕೆ ಸಾಕ್ಷಿ.

ಈ ರತ್ನತ್ರಯವು ಅಮೂಲ್ಯವಾದವು ಎಂಬುವದನ್ನು ವಿಚಾರಸ್ಥರು ಮಾನ್ಯ ಮಾಡುವರು. ಅವುಗಳಿಗೆ ಲೋಕದ ಮೂಢ ಜನರು ಬೆಲೆ ಮತಿಸದೆ ಹೋಗ ಬಹುದು; ಆದರೆ ದೇವರ ಮುಂದೆ ಅವುಗಳಿಗೆ ಬೆಲೆಯದೆ. ಕೋಟಿಪತಿಯಾದವನೂ ಸರ್ವವನ್ನು ಮನೆಯಲ್ಲಿಯೇ ಬಿಟ್ಟು ಕೇವಲ ದರಿದ್ರನಾಗಿ ಆಚೆ ತೆರಳುವಾಗ ಈ ರತ್ನತ್ರಯವುಳ್ಳವನು ಇಲ್ಲಿ ಪಾಷಾಣಮಯ ರತ್ನಗಳಲ್ಲಿಯೂ ಚಿನ್ನಬೆಳ್ಳಿಯಲ್ಲಿಯೂ ಬಡವನಾಗಿದ್ದರೂ ಮಹಾ ಧನಿಕನಾಗಿ ಏನೂ ಇಲ್ಲದವನಾದರೂ ಸರ್ವವೂ ಉಂಟಾದವನಾಗಿ ತಂದೆಯಾದ ದೇವರ ಪರಂಧಾಮವನ್ನು ಪ್ರವೇಶಿಸಲು ತೆರಳುವನು.

ಕಾಲಪ್ರಾಪ್ತಂ ಮಹಾರತ್ನಂ ಯೋ ನ ಗೃಹ್ಣಾತ್ಯಬುದ್ಧಿಮಾನ್ |
ಅನ್ಯಹಸ್ತಗತಂ ದೃಷ್ಟಾ ಪಶ್ಚಾತ್ ಸ ಪರಿತಪ್ಯತೆ ||

ತಕ್ಕ ಕಾಲದಲ್ಲಿ ಕೈಗೆ ಸಿಕ್ಕುವ ರತ್ನವನ್ನು ತೆಗದುಕೊಳ್ಳದವನು ಹೆಡ್ಡನು; ಅವನ ಕೈಗೆ ತಪ್ಪಿ ಪರರಿಗೆ ಸಿಕ್ಕಿದ್ದನ್ನು ನೋಡಿ ಕಡೆಗೆ ಶೋಕ ಮಾಡುವನು.

ದೀನತ್ವದಲ್ಲಿ ಮಹತ್ವವು.

ಇತ್ತಲಾಗೆ ಮುಂಬಾಯಿಯಲ್ಲಿ ಇಬ್ಬರು ಸ್ನೇಹಿತರು ಸಲ್ಲಾಪ ಮಾಡುತ್ತಿರುವಾಗ ಒಬ್ಬನು ಇನ್ನೊಬ್ಬನಿಗೆ ಹೇಳಿದನು: "ಇದೇ ಬರುವ ಜನವರಿ ತಿಂಗಳಿನಲ್ಲಿ ಅಪೂರ್ವವಾದ ಸೂರ್ಯಗ್ರಹಣವಾಗುತ್ತದೆ; ಅದು ನಮ್ಮ ದೇಶದಲ್ಲಿ ಚನ್ನಾಗಿ ದೃಶ್ಯವಾಗಿರುವದರಿಂದ ಯುರೋಪಿನಿಂದ ಮಹಾ ಮಹಾ ಜ್ಯೋತಿಷರು ಸೂರ್ಯನ ಸ್ಥಿತಿಯನ್ನೂ ಗ್ರಹಣದ ಸ್ಥಿತಿಯನ್ನೂ ಪರಿಶೀಲನ ಮಾಡುವದಕ್ಕೆ ಹೇರಳ ಹಣ ವೆಚ್ಚ ಮಾಡಿ ಒಳ್ಳೊಳ್ಳೇ ಹೊಸ ತರದ ದುರ್ಬಿನು ತಕ್ಕೊಂಡು ಇಲ್ಲಿಗೆ ಬರುವವರಿದ್ದಾರೆ; ಸೂರ್ಯನನ್ನು ದಿನದಿನದ ಅತ್ಯಂತ ಪ್ರಭೆಯಲ್ಲಿ ನೋಡುತ್ತಾ ಹೆಚ್ಚು ಅರುಹು ಪಡಿಯುವದು ಆಗುವದಿಲ್ಲಾ; ಯಾಕಂದರೆ ಆ ಪ್ರಭೆ ಚರ್ಮಗತ ದೃಷ್ಟಿಯನ್ನು ನೋಯಿಸಿ ಕುರುಡು ಮಾಡುವದು. ಹಾಗೆಯೇ ಯೇಸು ಕ್ರಿಸ್ತನ ದಿವ್ಯ ಮಹಿಮೆಯನ್ನೇ ನಾವು ಆಲೋಚಿಸುವವರಾದರೆ ಆತನ ಹೃದಯದ ಸ್ಥಿತಿಯನ್ನು ಬಹುಶಾ ತಿಳಿಯಲಾರೆವು; ಸೂರ್ಯನ ಪ್ರಭೆ ಗ್ರಹಣದಲ್ಲಿ ಅಡಗುವಂತೆಯೇ ದಾಸನ ರೂಪವನ್ನು

ಧರಿಸಿ ಮರಣದ ಮಟ್ಟಿಗೆ ಸಿಲುಬೆಯ ಮರಣದ ಮಟ್ಟಿಗೂ ಅವನು ತನ್ನನ್ನು ತಗ್ಗಿಸಿ ಕೊಂಡು ಸಿಲುಬೆಯಲ್ಲಿ ತೂಗಿದ ವೇಳೆಯಲ್ಲಿ ಅವನ ದಿವ್ಯ ಮಹಿಮೆ ಮರೆಯಾಗಿ ಕೇವಲ ದೀನತ್ವವೇ ಕಾಣ ಬಂದ ಆತನ ರೂಪವನ್ನು ನಾವು ವಿಶ್ವಾಸಪೂರ್ವಕವಾಗಿ ಧ್ಯಾನ ಮಾಡಿದರೆ ಆತನ ದಯೆಯ ಪ್ರೀತಿಯ ಕರುಣೆಯ ಮಹನ್ಮಹಿಮೆಯು ಹೃದಯದಲ್ಲಿ ಗೋಚರವಾಗುವದು".

ಸಮುದ್ರವು ಆತ್ಮಕ್ಕೆ ಉಪಮೆ.

ಸಮುದ್ರವು ಮನುಷ್ಯನ ಆತ್ಮಕ್ಕೆ ಉಪಮೆ ಎಂದು ನೀವು ಯೋಚಿಸಿದಿರೋ? ಸಮುದ್ರದ ವಿಶಾಲತ್ವವೂ ಅದರೊಳಗಿರುವ ವಸ್ತುಗಳೂ ಅದರ ಪ್ರವೃತ್ತಿಯೂ ಅದರ ಲಕ್ಷಣಗಳೂ ನಿಸ್ಸೀಮವಾದ ರಹಸ್ಯವಾದ ನಮ್ಮ ಆತ್ಮಕ್ಕೆ ಉಪಮೆಯಾಗಿದೆ. ಸಮುದ್ರದ ದಡದಲ್ಲಿ ನಿಂತು ಅದರ ವೈಭವವನ್ನೂ ಯಾವದನ್ನೂ ಸಡ್ಡೆ ಮಾಡದ ಉದಾಸೀನತ್ವವನ್ನೂ ನೀವು ನೋಡಿದ್ದೀರಿ; ಅದರ ಗಾಯನವನ್ನೂ ಮಹಾ ಘೋಷವನ್ನೂ ನೀವು ಕೇಳಿದ್ದೀರಿ; ಅದರ ಭಯಂಕರ ವರ್ತನೆಯನ್ನು ಕಂಡಿದ್ದೀರಿ; ತುಫಾನು ಬೀಸುವಾಗಲೂ ಸೂರ್ಯನ ಬಿಸಿಲು ಅದರಲ್ಲಿ ಎಸೆಯುವಾಗಲೂ ಅದರ ಮುಖ ಚರ್ಯೆ ಹ್ಯಾಗೆ ಹ್ಯಾಗೆ ಮಾರುತ್ತದೆ ಎಂದು ನೋಡಿ ನೀವು ವಿಸ್ಮಯ ಪಟ್ಟಿರುವಿರಿ. ಸಮುದ್ರದ ಮಧ್ಯದಲ್ಲಿ ಭಗವಂತನು ಇಟ್ಟಿರುವ ಆಶ್ಚರ್ಯಗಳಲ್ಲಿ ನಾವು ತಿಳಿದವುಗಳೂ ಕಂಡವುಗಳೂ ಬಹಳ ಸ್ವಲ್ಪವು. ತಾನು ಸಮುದ್ರದ ಮೇಲೆ ಸಂಚರಿಸಿ ಬಂದಿದ್ದೇನೆಂದು ವಿದ್ಯಾಶಾಸ್ತ್ರವು ಜಲ್ಲಿಕೊಚ್ಚ ಬಹುದು. ಆದರೆ ಸಮುದ್ರದ ಉದರದಲ್ಲಿರುವ ಆಶ್ಚರ್ಯಗಳೊಳಗೆ ಲಕ್ಷಾಂಶವಾದರೂ ನಮಗೆ ಈ ವರೆಗೆ ತಿಳಿದು ಬಂದಿಲ್ಲಾ.

ಮನುಷ್ಯನ ಆತ್ಮದ ಸ್ಥಿತಿಯೂ ಹಾಗೆಯೇ ಸರಿ. ಅದರ ಆಳವು ಎಷ್ಟು ಎಂಬುವದನ್ನು ಯಾವನೂ ಶೋಧಿಸಿ ತಿಳಿದವನಿಲ್ಲಾ. ಮನುಷ್ಯನ ಆತ್ಮದಲ್ಲಿರುವ ಅಪಾರ ಸಂಪತ್ತಿಯೂ ಅದರಲ್ಲಿ ನಿದ್ರಿತವಾದ ಶಕ್ತಿಯೂ ಅದರ ಸಾಮರ್ಥ್ಯವೂ ಎಷ್ಟೆಂದು ಯಾರೂ ಬಲ್ಲವನಿಲ್ಲಾ. ಮನುಷ್ಯನ ಅಂತಃಕರಣವೆಂಬ ಅಂಧಕಾರಮಯವಾದ ಗುಪ್ತವಾದ ದಹರದಲ್ಲಿ ಯಾವ ದ್ರವ್ಯಸಂಚಯವದೆ ಎಂದು ಯಾವನಾದರೂ ಹೇಳಬಲ್ಲನೋ? ಅದರಲ್ಲಿ ಭಂಗಪಟ್ಟ ಆಶೆಯುಂಟು, ನಷ್ಟವಾದ ಸ್ನೇಹವುಂಟು, ಅದರಲ್ಲಿ ವ್ಯರ್ಥವಾಗಿ ಹೋಗಲಾಡಿಸಿದ ಸಂದರ್ಭಗಳುಂಟು. ಸಮುದ್ರದ ಗಹನವಾದಂಥಾ ಯಾವನೂ ಅಟೋಪಿಸಲಾರದಂಥಾ ಶಕ್ತಿಯು ಮನುಷ್ಯನ ಆತ್ಮದ ಶಕ್ತಿಯ ಮುಂದೆ ಏನೂ ಅಲ್ಲಾ. ನಾನು ಸಮುದ್ರದ ತಳದಲ್ಲಿ ಏನೇನು ಅದೆ ಎಂಬ ತಿಳಿವು ಪಡೆದಿದ್ದೇನೆ; ಬಿರುಗಾಳಿಯನ್ನು ಅಟೋಪಿಸ ಬಲ್ಲೆನು, ಹೋಕಾಯಂತ್ರದ ಒಂದು ಕೊನೆ ಉತ್ತರದಲ್ಲಿ ಒಂದು ಕೊನೆ ದಕ್ಷಿಣದಲ್ಲಿ ಇರುವದು ಯಾಕೆ ಎಂಬ ಅಂತಸ್ತು ತಿಳಿದಿದ್ದೇನೆ; ಮಹಾ ವಿಶಾಲವಾದ ಸಮುದ್ರದ ಮಧ್ಯದಲ್ಲಿ ಧೈರ್ಯದಿಂದ ಹಡಗು ನಡಿಸುವದಕ್ಕೆ ವಾಯುಚಕ್ರಶಾಸ್ತ್ರದಿಂದಲೂ ತಾರೆಗಳ ಗತಿಯ ಅವಲೋಕನದಿಂದಲೂ, ಪರಿಷ್ಕಾರವಾದ ನಕ್ಷೆ ಮಾಡಿದ್ದೇನೆ ಎಂದು ವಿದ್ಯಾಶಾಸ್ತ್ರವು ಪನ್ನಿ ಕೊಚ್ಚುತ್ತದೆ. ಆದರೆ ಮನುಷ್ಯನಲ್ಲಿ ಅಲೋಚನೆಗಳು ಹ್ಯಾಗೆ ಹುಟ್ಟುತ್ತವೆ, ಮನುಷ್ಯನ ಆತ್ಮವು ಅಂದ

